# ಪೌರಾಣಿಕ ಹಾಡ್ಗಥೆಗಳು

## ಪೀಠಿಕೆ

**<u>ಸಾಮಾಜಿಕ ಕಥೆಗಳು</u>**

**ಹಾಡ್ಗಥೆಗಳು.**

**ಕೆರೆಗೆ ನರಬಲಿ :**

ಹಾಡು ಕಥೆಗಳನ್ನು ರಾಗವಾಗಿ ತಾನ ತಮದಾನೋ,ಕೇರ್ಳ ಕೇರ್ಳ ಕನ್ನಡಿ, ತಾನೂ, ರಾಮ ರಾಮಜ್ಜಿ ಇತ್ಯಾದಿಯಾಗಿ ಪ್ರತಿ ವಾಕ್ಯದ ಕೊನೆಗೆ ಹೇಳುತ್ತ, ಕೆಲವು ಕಡೆ ಗದ್ಯವೇ ಆಗಬಹುದಾದರೂ ಅದನ್ನು ಹಾಡು ಮಾಡುತ್ತಾರೆ. ಇವು ಕರ್ಣಾಟಕದ ಎಲ್ಲ ಕಡೆಯ ಜಾನಪದ ಸಾಹಿತ್ಯದಲ್ಲಿರುವ ಕಥೆಗಳೇ ಆದರೂ ಪರಿಸರಕ್ಕೆ ಸರಿಯಾಗಿ ಪಾತ್ರೆದ್ಲ ಬದಲಾವಣೆ, ಅಶಯದ ಬದಲಾವಣೆ ಕೆಲವೊಮ್ಮೆ ಕಂಡುಬರುತ್ತದೆ. ಉದಾಹರನೆಗೆ ಕೆರೆಗೆ ಬಲಿಯಾದ ಹೆಣ್ಣೋಬ್ಬರಳ ಕಥೆ. ಇದು ಬಯಲು ಸೀಮೆಯಲ್ಲಿ ಬಹಳ ಪ್ರಸಿದ್ದವಾದ ಮನಕಲಕುವ ಕಥೆ. ಕರಾವಳಿಯಪರಿಸರದಲ್ಲಿಯೂ ಈ ಕತೆ ಇದೆ. ಬಯಲು ಸೀಮೆಯ ಕಥೆಯಲ್ಲಿ ಗೌಡನೊಬ್ಬ ಊರ ಒಳಿತಾಗಿ ಬಾವಿ ಕಟ್ಟಿ, ನೀರುಬಾರದಾಗ ಕಿರಿ ಸೊಸೆಯನ್ನು ಬಲಿಕೊಡುವುದು, ಆದನ್ನು ಶಕುನ, ದುಸ್ವಪ್ನದ ಮೂಲಕ ತಿಳಿದುಕೊಂಡ ಆಕೆಯ ಗಂಡ ದಂಡಿನಿಂದ ಬತ್ತಲು ಕುದುರೆ ಹತ್ತಿ ಮನೆಗೆ ಓಡಿ ಬಂದುವಿಷಯ ತಿಳಿದು ತಾನು ಸತಿ ಹಾರವಾದ ಕೆರೆಗೆ ಹಾರವಾಗುತ್ತಾನೆ. ಪತಿ ಸಹಗಮನದ ಮಾದರಿ ಇದು. ಆದರೆ ಕರಾವಳಿಯಲ್ಲಿ ಮನೆಯ ಯಜಮಾನಿ ತಾಯಮ್ಮ ಮನೆಗಾಗಿ ಬಾವಿ ಕಟ್ಟಿಸುತ್ತಾಳೆ. ಬಾವಿಯಲ್ಲಿ ನೀರೆದ್ದು ಬರುವುದಿಲ್ಲ. ಮಗನನ್ನು ಕರೆದು ಜೋಯಿಸರನ್ನು ಕೇಳಿಬರುವಂತೆ ಹೇಳುತ್ತಾಳೆ. ಜೋಯಿಸರು ಬಾವಿ ನರಬಲಿ ಆದೂ ಮಧ್ಯದ ಸೊಸೆಯಬಲಿಯನ್ನೇ ಕೇಳುತ್ತದೆ ಅನ್ನುತ್ತಾರೆ. (ಹಾಡಿನಲ್ಲಿ ಬರದಿದ್ದರೂ ನನಗೆ ಈ ಹಾಡಳು ಹೇಳಿದವಳು,ಜೋಯಿಸರು ಮಧ್ಯದ ಸೊಸೆಯ ಮೇಲೆ ಕಣ್ಣಿಟ್ಟಿದ್ದರು. ಆದರೆ ಆ ಸೊಸೆಯ ಅವರೊಂದಿಗೆ ಸಲಿಗೆ ಬೆಳೆಸಲು ಒಪ್ಪಿರಲಿಲ್ಲ. ಹಾಗಾಗಿಯೇ ಅವರು ಮಧ್ಯದ ಸೊಸೆಯನ್ನೇ ಬಲ ಕೊಡಲು ಹೇಳುವದು ಎಂದಳು). ಬಯಲು ಸೀಮೆಯ ಕತೆಯಲ್ಲಿ ಯಾರಾದರೂ ಬಲಿ ಆಗಬಹುದು ಎಂದಾಗ ಎಲ್ಲರೂ ನಾನೊಲ್ಲೆ ನಾನೊಲ್ಲೆ ಎಂದಾಗ ಚಿಕ್ಕ ವಯಸ್ಸಿನಕಿರಿಯ ಸೊಸೆಯನ್ನು ಬಲಿ ಕೊಡುತ್ತಾರೆ. ಆದರೆ ಇಲ್ಲಿ ಮಧ್ಯದ ಮಗನ ಹೆಂಡತಿ. ಇಲ್ಲೊಂದು ಬಹಳ ಮುಖ್ಯ ವ್ಯತ್ಯಾಸ ಕತೆಯ ಕೊನೆ. ಬಯಲು ಸೀಂಎಯ ಒಂದು ಕತೆಯಲ್ಲಿ ಗಂಡ ದಂಡಿನಲ್ಲಿರುತ್ತಾನೆ. ಕೊನೆಯಲ್ಲಿ ಗಂಡ ಹೆಂಡತಿಯ ಇಬ್ಬರೂ ಹಾರವಾಗುತ್ತಾರೆ. ಆದರೆ ಇಲ್ಲಿ ಮಗ ಮನೆಯಲ್ಲಿಯೇ ಇರುತ್ತಾನೆ. ಸೋಸೆ ಮಡಿದರೂ ಅವನು ಮಡಿಯುವುದಿಲ್ಲ. ಆವಳೂ ತಾವರೆ ಹೂವಾಗಿ ಹುಟ್ಟುತ್ತಾಳೆ. ಆಹೂವು ಗಂಡ ಕರೆದರೆ ಆವನ ಮಡಿಲಿಗೆ ಬರುವುದಿಲ್ಲ, ಅತ್ತ ಕರೆದರೆ ಬರುವುದಿಲ್ಲ. ಆದರೆ ಅಣ್ಣ ಕರೆದರೆ ಆವನ ಮಡಿಲಿಗೆ ಬಂದು ಸೇರಿಕೊಳ್ಳುತ್ತದೆ. ಕರಾವಳಿಯ ಆಳಿಯ ಕಟ್ಟಿನ ಕುಟುಂಬ ವ್ಯವಸ್ಥೆಯಲ್ಲಿ ಅಣ್ಣ ತಂಗಿಯ ಸಂಬಂಧ ಶಾಶ್ವತವಾದುದು. ಅಣ್ಣನ ದುಡಿತವೆಲ್ಲ ತಂಗಿಯ ಮಕ್ಕಳಿಗೆ, ತಂಗಿ ಹೊಕ್ಕ ಮನೆಯಲ್ಲಿ ಬಾಳಲು ಬಂದವಳು ಬಳಮೇಸ್ತ್ರೀ ಅನ್ನುತ್ತಾರೆ. ಈ ಸ್ಥಾನ ಸ್ವಲ್ಪ ಕೆಳಗಿನದೇ. ತಂಗಿ ಹೊಕ್ಕ ಮನೆಯಲ್ಲಿ ಅವಳು ಸಂತಾನತಿ.ಇದು ಹೆಚ್ಚಿನ ಗೌರವದ್ದು, ಹಾಗಾಗಿಯೇ ಏನೋ ಕತೆಯ ಕೊನೆಗೆ ಈ ತಿರುವು ಇದೆ. ಇಷ್ಟು ಮಾತ್ರವಲ್ಲ ಆ ಅಣ್ಣ ಬಲಿಯಾಗಿ ತಾವರೆ ಹೂವಾದ ಆ ತಂಗಿಯನ್ನು ತಂದು ಮನೆಯ “ಕೇಲು ಮಡಿಕೆ” (ಅಕ್ಕಿ ತುಂಬಿದಡುವ ದೊಡ್ಡ ಮಣ್ಣಿನಿನ ಮಡಕೆಂಯಲ್ಲಿ ಇಟ್ಟು, ಮಾರನೆಯ ದಿನ ನೋಡಿದಾಗ ಆ ತಂಗಿ ಹನ್ನೆರಡು ವರ್ಷದ ಬಾಲೆಯಾಗಿರುತ್ತಾಳೆ. ಹೀಗೆ ದುಃಖ್ಯಾಂತ್ಯದ ಕತೆಯೊಂದು ಇಲ್ಲಿ ಸುಖ್ಯಾಂತಗೊಳ್ಳುತ್ತದೆ.

**ಗಿರಿಜಾಬಾಲಿ :**

ಸೊಸೆಯನ್ನು ಸುಟ್ಟು ಸಾಯುವಂತೆ ಮಾಡುವುದು ಹೊಸ ಪರಿಯೇನಲ್ಲ. ಆಂದಿನಿಂದಲೂ ಅತ್ತೆ ಸೊಸೆಯನ್ನು ಗೋಳು ಹೊಯ್ಯುವುದು. ಅವಳು ಸಾಯಲು ಕಾರಣವಾಗುವುದು ನಡೆದೇ ಬಂದಿದೆ. ವರದಕ್ಷಿಣೆಗಾಗಿ ಇರಬಹುದು. ಅಧಿಕಾರಕ್ಕಾಗಿ ಇರಬಹುದು, ಅಸೂಯೆಗಾಗಿಯೂ ಇರಬಹುದು. ತಾಯಿಯನ್ನು, ಅವಳ ವಾತ್ಸಲ್ಯವನ್ನು ಹಾಡಿ ಹೊಗಳುವ ಸಾಹಿತ್ಯ ಬೇಕಾದಷ್ಟಿದೆ. ಆದರೆ ಆ ತಾಯಿಯಲ್ಲಿಯೂ ದ್ವೇಷ, ಕ್ರೊಧ, ಅತಿ ಆಸೆಉಲ್ಬಣಗೊಂಡಾಗ, ವಾತ್ಸಲ್ಯವೆಲ್ಲ ಬತ್ತಿ ಹೋಗಿ ಎಂತಹ ಕೇಡಿಗೆ ಕಾರಣವಾಗಬಲ್ಲದು, ಅದರ ಪರಿಣಾಮವೇನಾಗುವುದು ಎಂಬುವುದನ್ನು ಈ ಜಾನಪದ ಹಾಡುಗಬ್ಬದಲ್ಲಿ ಕಾಣಬಹುದು.

ಬೇಗ ಮದುವೆಯಾಗುವ ಕಾಲದ ಹಾಡು ಇದು.ಹನ್ನೆರಡರ ಗಿರಿಜಾಬಾಲಿ ತವರಿಗೆ ಬಂದಿದ್ದಾಳೆ. ಬಹಳ ದಿನವಾಗಿರಬೇಕು ಬಂದು, ಇವತ್ತೇ ಹೋಗುತ್ತೇನಂದು ಹೇಳುತ್ತಿದ್ದಾಳೆ. ಆದರೆ ತಾಯಿಗೆ ಮಗಳನ್ನು ಕಳುಹಿಸುವ ಮನವಿಲ್ಲ. ಆದರೆ ಗಿರಿಜಾ ಬಾಲಿ ಕೇಳುವುದಿಲ್ಲ.

ಮಾರಬು ಕೂಡಿ ನಡೆದಳಲೇ
ಕಟ್ಟಿಗೆ ಹೋರೆ ಎದುರಿಗೆ ಬಂತು.

ಪ್ರಯಾಣದಲ್ಲಿ ಕಟ್ಟಿಗೆ ಹೊರೆ ಎದುರು ಬಂದರೆ ಅಪಶಕುನವೆಂದು ತಾಯಿ ಹೇಳುತ್ತಾಳೆ. ಪ್ರಯಾಣ ನಿಲ್ಲಿಸು ಎನ್ನುವ ಸೂಚನೆ ಕೊಡುತ್ತಾಳೆ, ಅವನು ಹೊಟ್ಟೆ ಪಾಡಿಗೆ ತಿರುಗಾಡುತಿರುವ ಎಂದು ಗಿರಿಜಾಬಾಲಿ ಹೇಳುತ್ತಾಳೆ. ಅವಳಿಗೆ ತನ್ನ ಗಂಡನ ಮನೆಗೆ ಹೋಗುವ ತೀವ್ರ ತರಾತುರಿ ಇರುವಾಗ ಕಟ್ಟಿಗೆ ಹೊರೆ ಅಪಶಕುನವಾಗಿ ಕಾಣುವುದಿಲ್ಲ. ಅವನೊಬ್ಬ ತನ್ನ ಹೊಟ್ಟೆ ಪಾಡಿಗೆ ಕಟ್ಟಿಗೆ ಹೊತ್ತು ಮಾರುವವ, ಅವನೇಕೆ ಅಪಶಕುನವಾಗುತ್ತಾನೆ ಎಂಬ ಆಲೋಚನೆ ಅವಳಿಗೆ. ಗಂಡನ ಮನೆಗೆ ಹೊದವಳು ಅತ್ತೆಯನ್ನು ಕರೆಯುತ್ತಾಳೆ. ತವರಿಂದ ಅತ್ತೇಗಾಗಿ ತಾನು ತಂದ ವಸ್ತುಗಳನ್ನು ಕೊಡುತ್ತಾಳೆ.

ನಾ ತಂದ ಬಿಳಿ ಎಲಿನೇ ಮೇಲಿನೇ ಅತ್ತೆ
ನಾ ತಂದೆ ಬೆಟ್ಟ ಅಡಕೆ ಮೇಲೀನೆ

ಎನ್ನುತ್ತಾಳೆ ಗಿರಿಜಾಬಾಲಿ. ಅತ್ತೆ ಗಿರಿಜಾಬಾಲಿ ತಂದ ಎಲೆ ಆಡಿಕೆ ಸ್ವೀಕರಿಸುತ್ತಾಳೆ. ಆದರೆ ಅವಳ ಮನದಲ್ಲಿರುವುದು ಭಯಂಕರ ವಿಷ. ಯಾಕೋಗ ಗಿರಿಜಾಬಾಲಿಯ ಮೇಲೆ ಆಕೆಗೆ ಆಸಮಾಧಾನ. ಭಯಂಕರ ವಿಷವಿರುವ ವಿಷ ಮುಂಗ್ರಿ ಎಲೆಯನ್ನು ತೋಟದಲ್ಲಿ ನೆಟ್ಟು ಬೆಳೆಸಿದ್ದ ಆ ಅತ್ತ ಅದನ್ನು ಕೊಯ್ದು ತರುತ್ತಾಳೆ. ಅದನ್ನು ಹಾಕಿ ಅಡಿಗೆ ಮಾಡುತ್ತಾಳೆ. ಹಾಗೆ ತಂದು ಸೊಸೆಯ ಹತ್ತಿರ ಬಣ್ಣದ ಮಾತನಾಡುತ್ತಾಳೆ.

ದೊಡ್ಡೋರ ಮನಿಯ ಹೆಣ್ಣಲ್ದ ಮಗಳೇ
ಊಟಕ್ಕಾರು ಬಾರೇ ಮಗಳೆ ಎಂದು ಅತ್ತೇ ಕರೆಯುತ್ತಾಳೆ.

ಅನ್ನದಲ್ಲಿ ವಿಷ ವಿಕ್ಕುವುದು ಘೋರ ಅಪರಾಧ. ಅನ್ನ ಪ್ರಾಣ ಉಳಿಸುವ ಕೆಲಸ ಮಾಡುವುದು. ಅಂಥ ಪ್ರಾನದಾತ ಅನ್ನದಲ್ಲಿ ವಿಷ ಬೆರೆಸುವ ಮಹಾ ಪಾತಕ ಅತ್ತೆಯ ಅಸಮಾಧಾನ ಮಾಡುತ್ತದೆ. ಮುಗ್ದ ಗಿರಿಜಾಬಾಲಿ ಗಂಡನ ಮನೆಗೆ ಹಟ ಹಿಡಿದು ದಾರಿಯ ಆಪಶಕುನವನ್ನು ಗಣನೆಗೆ ತರದೇ ಪ್ರೀತಿಗಾಗಿ ಬಂದವಳು. ಗಂಡನಮುಖ ದರ್ಶನ ಇನ್ನೂ ಆಗಿಲ್ಲ ಅವಳಿಗೆ. ಅತ್ತೇಗಾಗಿ ಬಿಳಿ ಎಲೆ ಬೆಟ್ಟ ಅಡಿಕೆ ತಂದು ಮೆಲ್ಲ ಹೇಳಿದವಳು. ಅಂತಹಹನ್ನೆರಡರ ಬಾಲೆಗೆ ಅನ್ನದಲ್ಲಿ ವಿಷ ವಿಕ್ಕುವಂಥ ಹೀನ ಕೃತ್ಯಕ್ಕೆ ಅವಳ ಅತ್ತೆ ಇಳಿದಿದ್ದಾಳೆ. ಗಿರಿಜಾಬಾಲಿ ಅತ್ತೆಯ ಬಣ್ಣದ ಮಾತಿಗೆ ಮರುಳಾಗಿ ಊಟಕ್ಕೆ ಕೂತಿದ್ದಾಲೆ. ಅವಳು ಊಟ ಮಾಡುವಾಗ ಕಾಗೆ ಕೋಳಿ ಬರುತ್ತದೆ.

ಊಟಕ್ಕೆ ಕೂತಲ್ಲಿ ಕಾಕಿ ಬಂತು.
ಕಾಕಿಗೆ ಒಂದು ತುತ್ತು ಇಕ್ಕಿದಳೇ
ಕೋಳಿಗ್ ಒಂದ್ ತುತ್ತ ಇಕ್ಕಿದಳೇ

ತಾನು ಒಂದು ತುತ್ತ ಉಂಡಳು. ಕಾಗೆ ಕೋಳೀಗಳೆರಡೂ ರೆಕ್ಕೆ ಬಡಿದು ಸತ್ತು ಹೋದವು. ಗಿರಿಜಾಬಾಲಿಗೂ ಕಣ್ಣು ಕತ್ತಲಿಟ್ಟುಕೊಂಡಿತು. ಅತ್ತೆಗೆ ತನಗಾಗುತ್ತಿದ್ದ ಸಂಕಟವನ್ನು ಹೇಳಿದಾಗ,

ದೊಡ್ಡವರ ಮನಿಯ ಮಗಳಲ್ದ ಮಗ್ಳೇ
ನಡೆದು ಬಂದು ದಣಿವೇ ಅದು
ಮೆತ್ತೀನ ಮೇಲೆ ಒರಗೇ ಹೆಣ್ಣೇ

ಎಂದು ಪುಟ್ಟ ಹುಡುಗಿಗೆ ವಿಷ ವಿಕ್ಕಿಯೂ, ತೋರಿಕೆಗೆ ಅನುನಯದ ಮಾತನಾಡುತ್ತಾ ಅತ್ತೆ ಹೇಳುತ್ತಾಳೆ. ಅತ್ತೆ ಹೇಳಿದ್ದನ್ನು ನಂಬಿದ ಗಿರಿಜಾಬಾಲೆ ಮೆತ್ತಿನ ಮೇಲೆ ಹೋಗಿ ಮಲಗುತ್ತಾಳೆ. ಆಗ, ಅವಳ ಗಂಡ ಮರಿದೇವ್ರ ಬಯಲು ಸುತ್ತಲೂ ಹೋದವ ಮನೆಗೆ ಬರುತ್ತಾನೆ. ತನ್ನ ಹೆಂಡತಿ ಗಿರಿಜಾಬಾಲಿ ಮನೆಗೆ ಬಂದ ವಿಷಯ ಗೊತ್ತಾಗುತ್ತದೆ. ಆದರೆ ತನ್ನ ತಾಯಿಯೇ ತನ್ನ ಕಾಲಿಗೆ ನೀರು ತಂದು ಕೊಟ್ಟದ್ದನ್ನು ಕಂಡು ಮರಿದೇವ್ರಿಗೆ ಅಶ್ಚರ್ಯವಾಗುತ್ತದೆ. ಮಡದಿ ಮನೆಗೆ ಬಂದರೂ, ನೀರು ಕೊಡಲು ಬರಲಿಲ್ಲವೆಂದು. ನಿನ್ನ ಸೊಸೆ ಗಿರಿಜಾ ಬಾಲಿ ಎಲ್ಲಿಗೆ ಹೋದಳು ಎಂದು ಕೇಳುತ್ತಾನೆ. ಆಗ ತಗಿರಿಜಾ ಬಾಲಿಯ ಅತತೆ, ಈ ಮರಿದೇವ್ರ ತಾಯಿ,

ದೊಡ್ಡೋರ ಮನಿಯ ಹೆಣ್ಣಲ್ದ ಮಗನೇ
ನಡೆದು ಬಂದ ದಣಿವೀಗೆ ಒರಗೀಳಲೇ- ಎನ್ನುತ್ತಾಳೆ.
ಮರಿದೇವ್ರು ಉಂಡು ಕೈ ಬ್ಯಾ ತೊಳೆದರಲೇ
ಮೆತ್ತತ್ತಿ ಮ್ಯಾನೆ ನಡಿದರಲೇ
ಮಡದಿಯ ಮೂರ್ ಕರಿಯ ಕರಿದಾರಲೇ
ಎಷ್ಟೆ ಕರೆದ್ರೂ ಮಾತಾಡಲಿಲ್ಲ ಎಂದು ತಾಯಿಯ ಹತ್ತಿರ ಕೇಳುತ್ತಾನೆ.

ಆಗ ತಾಯಿ ಒಳ ಬಾಯಿಯಲ್ಲಿ

“ಬಂದೀಕ್ಕು ಮೈಮೇಲೆ ಆವಳ್ಮನಿ ಭೂತ”- ಎಂದರೂ
“ಮಡುವಾಳ ಮಾಚಣ್ಣಗೆ ಒಸಗೀ ಹೇಳ ” ಎನ್ನುತ್ತಾಳೆ.
ಏನೆಂದೆ ಒಡಗಿ ಹೇಳಲಿ ಎಂದು ಮರಿದೇವ್ರು ಕೇಳಿದರೂ
ಹನ್ನೆರಡು ವರ್ಷದ ಗಿರಿಜಾಬಾಲಿ
ಋತುವಾದಳೆಂದೇ ಒಸಗೆ ಹೇಳ ಎಂದು ಉಪಾಯದಿಂದ ಹೇಳುತ್ತಾಳೆ.

ಜಾನಪದ ಸಂಸ್ಕೃತಿಯಲ್ಲಿ ಋತುಮತಿಯಾದಾಗ ಮಡಿವಾಳರು ಬರಬೇಕಾಗುತ್ತದೆ. ಮತ್ತು ಅವರೇ ಈ ಒಸಗೆಯನ್ನು ತವರಿಗೆ ಹೇಳಿ ಬರಬೇಕಾಗುತ್ತದೆ. ಮೊದಲು ಋತಿಮತಿಯಾದಾಗ ಹೆಣ್ಣಿಗೆ ಬಹಳ ನಾಚಿಕೆ. ಹಾಗಾಗಿ ಅವಳು ಗಂಡ ಮಾತನಾಡಿದರೂ ನಾಚಿಕೆಯಿಂದ ಮಾತಾಡಲಿಲ್ಲ ಎಂಬ ಅಭಿಪ್ರಾಯ ಮರಿದೇವ್ರಿಗೆ ಬರಲಿ ಎನ್ನುವ ಉಪಾಯ ಗಿರಿಜಾ ಬಾಲಿಯ ಅತ್ತೆಯದ್ದು. ಮರಿದೇವ್ರು ನಂಬುತ್ತಾರೆ ತಾಯಿಯ ಮಾತನ್ನು.

ಮರಿ ದೇವರೆಂಬವರಿಗೆ ಬಹಳ ಸಂತೋಷವಾಗುತ್ತದೆ. ಮಡಿವಾಳ ಮಾಚಣ್ಣನನ್ನು ಕರೆದು ಗಿರಿಜಾಬಾಲಿ ಮನಿಗೆ ವಸಗಿ ಹೇಳಿ ಬಾ ಎಂದ. ಆಗ ಮಡಿವಾಲ ಮಾಚಣ್ಣ ಗಿರಿಜಾ ಬಾಲಿ ಮನೆಗೆ ಹೋಗಿ, ಅಲ್ಲಿ, "ಹನ್ನೆರಡು ವರ್ಷದ ಗಿರಿಜಾಬಾಲಿ ಋತುವಾದ ಒಸಗೀ ತಂದೆ" ಎಂದಾಗ, ಸಹಜವಾಗಿಯೇ ಗಿರಿಜಾ ಬಾಲಿಯ ತಂದೆ ತಾಯಿಗೆ ಮಹಾ ಸಂತೋಷವಾಗುತ್ತದೆ. ಆಗ ಅವರು ಏಳೂರಿಗೆ ಓಲೆ ಬರೆದು, ಏಳೂರ ಹೂವ ತರಿಸಿ, ಏಳೂರು ಚಿನ್ನ ತರಿಸಿ ದೊಡ್ಡ ದಿಬ್ಬಣ ಕೂಡಿ ಮಗಳ ಮನೆಗಾಗಿ ಸಂಭ್ರಮದಿಂದ ಬರುತಿದ್ದಾರೆ. ಆಗಲೇ ಕುರಿ ಮೇಯಿಸುವ ಮಕ್ಕಳು ಬಯಲಲಿಲ ಎದುರಾಗಿ "ಮರಿದೇವ್ರ ಮನೆಯಲ್ಲಿ ಮಾ ದೊಡ್ಡ ಹೊಮ್ಮವು; ಎಂದು ಒಗಟಾಗಿ ಹೇಳುತ್ತಾರೆ. ಮಗಳು ಋತುವಾದಳೆಂದಷ್ಟೆ ಹೇಳಿ ಕಳುಹಿಸಿದ್ದ ಬೀಗರ ಮನೆಯಲ್ಲಿ ಅದ್ಯಾವ ಹೋಮ ನಡೆಯುತ್ತಿದೆಯೋ ತಿಳಿಯದೇ ಮುಂದು ಮುಂದೆ ಬರುತ್ತಾರೆ.

ಆಗ,

ಗೋಮೇಸೋ ಮಕ್ಕಳೂಎದುರೇ ಬಂದೋ  
ಮರಿದೇವ್ರ ಮನೆಯಲ್ಲಿ ಮಾ ದೊಡ್ಡ ಹೋಮ್ಮವು  
ಮಕ್ಕಳು ಶಕುನವ ನುಡಿತೇ ಬಂದೋ

ಮಕ್ಕಳು ಒಗಟಾಗಿ ಹೇಳಿದಾಗ ಗಿರಿಜಾಬಾಲಿಯ ತಾಯಿ ತಂದೆಯರಿಗೆ ಅತಂಕವಾಗುತ್ತದೆ. ಹೋಮದ ಬೆಂಕಿಯ ಮುಂದೆ ಹೋದಾಗ ಗಿರಿಜಾಬಾಲಿ ಆ ಬೆಂಕಿಯಲ್ಲಿ ಕರಟುತ್ತಿದ್ದುದ್ದನ್ನು ಕಾಣುತ್ತಾರೆ. ಮರಿದೇವ್ರೂ ಅಲ್ಲಿಯೇ ಇರುತ್ತಾನೆ. ಗಿರಿಜಾ ಬಾಲಿಯ ತಂದೆತಾಯಿ, ಗಿರಿಜಾ ಬಾಲಿಗಾಗಿ ತಂದ ಹೂವನ್ನು ಚಿನ್ನವನ್ನು ಆ ಚಿತೆಗೇ ಹಾಕುತ್ತಾರೆ.. ಸಂಕಟದಿಂದ, ಗಿರಿಜಾಬಾಲಿಯ ತಂದೆ ತಾಯಿ ಅವಳ ಸಾವಿಗೆ ಮರಿದೇವ್ರ ತಾಯಿಯೇ ಕಾರಣವೆಂದು ಹೇಳಿದಾಗ, ನಗುನಗುತ್ತಲೇ ತನ್ನ ಮಡದಿಯನ್ನು ಕೊಂದ ತಾಯಿಯ ಮೇಲೆ ಅಸಾಧ್ಯ ಕೋಪ ಬಂದು,

"ತಾಯಮ್ಮನ ಮೂರು ರುಂಡ ಹೊಡೆದನಲೇ" ಅಷ್ಟೇ ಅಲ್ಲ  
ಅತ್ತೆಗೂ ಸೊಸಿಗೂ ಒಂದೇ ಬೆಂಕಿ  
ಅತ್ತೇಗೂ ಸೊಸಿಗೂ ಒಂದೇ ಕೊಳ್ಳಿ

ಎನ್ನುತ್ತಾ ತನ್ನ ತಾಯಿಯನ್ನೂ ಗಿರಿಜಾಬಾಲಿಯ ದೇಹವನ್ನು ಕಬಳಿಸುತ್ತಿರುವ ಚಿತೆಗೆ ಹಾಕಿ ಬಿಡುತ್ತಾನೆ.

**ರಂಬಿ ಜವ್ವನವು ಗಳದ್ಹೋದು ತಾನು**

ಮನೆಯ ಪುರುಷನೊಬ್ಬ ವೇಶ್ಯೆಯ ಸಹವಾಸದಲ್ಲಿ ಕೈ ಹಿಡಿದ ಮಡದಿಯನ್ನು ಮರೆತುಬಿಟ್ಟಿರುತ್ತಾನೆ. ಅವಳ ಮನೆಯಲ್ಲಿಯೇ ಠಿಕಾಣಿ ಹೂಡಿರುತ್ತಾನೆ. ಅವನಿಗಾಗಿ ಕಾದು ಕಾದು ನಿರಾಶಳಾದ ಆತನ ಮಡದಿ ತಾನು ಸಾಕಿದ ಗಿಣಿಯನ್ನು ಕರೆದು, ಅದರ ಮುಖಾಂತರ ತನ್ನ ಅಳಲನ್ನು ಅವನಿಗೆ ಹೇಳಿಕಳುಹಿಸುತ್ತಾಳೆ. ಹಾರಿ ಬಂದು ತನ್ನ ಬುಜದ ಮೇಲೆ ಕೂತ ಗಿಣಿಯನ್ನು ಒಡೆಯ ಕೇಳುತ್ತಾನೆ.

"ಏನ್ ಬಂದೆ ಗಿಣಿರಾಮ ಎಂತ್ ಬಂದೆ ಗಿಣಿರಾಮ  
ಬಂದ ಕಾಣವ ಒದಗ್ಹೇಳು ಎಂದು

ಗಿಣಿ ತನ್ನ ಒಡತಿ ಹೇಳಿದಂತಗೆಯೇ ತಾನು ಬಂದ ಕಾರಣವನ್ನು ಹೇಳಿ ಅರಗಳಿಗೆಯಾದರೂ ಬಂದು ಹೋಗಿ ಒಡತಿಯ ಬಳಿ ಎಂದು ಕರೆಯುತ್ತದೆ. ಆಗ ಒಡೆಯ,

ರಂಬಿಯವ್ವನವು ಗಳಿದ್ಹೋದರ್ಹೋಗಲಿ
ನಾನೊಂದರಿಗಳಿಗೆ ಬರಲಾರೆ
ನಂಬಿದ ಸೂಳಿಯ ಬಿಡಲಾರೆ ಗಿಣಿರಾಮ
ಹೋಯ್ ಹೇಳ ನಿನ್ನ ಒಡತಿಗೆ ಎಂದು ಬಿಡುತ್ತಾನೆ.

ಪಾಪ ಗಿಣಿ ಏನು ಮಾಡಿತು. ಒಡೆಯ ಹೇಳಿದ ಮಾತನ್ನೇ ಒಡತಿಯ ಬಳಿಗೆ ಬಂದು ಹೇಳುತ್ತದೆ. ತನ್ನ ಗಂಡನನ್ನು ಕರೆಸಲು ಎಷ್ಟೆಲ್ಲ ಕಾರಣ ಹುಡುಕಿ ಆ ಒಡತಿ ಹೇಳಿ ಕಳಿಸಿದರೂ ಗಂಡ ಬಾರದಾಗ ಆಕೆ ಹತಾಶೆಯಿಂದ.

ನಿನ್ ಮಡದಿಯು ಸತ್ತು ಇಂದೀಗೆ ಮೂರು ದಿವ್ಸ
ಮಡದಿ ಸುಡುವುದಕೆ ಕಟ್ಟಿಗೆ ಇಲ್ಲ
ಮಡದಿ ಸುಡುವುದಕ್ಕೆ ಕಟ್ಟಿಗೆ ಇಲ್ಲ ಗಿಣಿರಾಮ
ಹೋಯ್ ಹೇಳೋ ನಿನ್ನ ಒಡೆಯದೆ-

ಎಂದು ಹೇಳಿ ಕಳೂಹಿಸುತ್ತಾಳೆ. ಮಡದಿ ಸತ್ತಳೆಂದು ಕೇಳಿಯಾದರೂ ಗಂಡ ಬಂದಾನೆಂಬ ಆಶಾಭಾವನೆಯಿಂದ, ಆದರೆ ಆತ ಇನ್ನೂ ಪ್ರಚಂಡ,

ಮಡದಿಯು ಸತ್ತರೆ ಗಂಧದ ಮರ ಉಂಟು
ಆಳು ಮಕ್ಕಳ ಕರೆಸಿ ಕಡಿಸೀನಿ
ಆಳು ಮಕ್ಕಳ ಕರೆಸಿ ಕಡಿಸೀನಿ ಗಿಣಿರಾಮ
ಮನೆ ಹೊದ್ದಿನಮಲಗದ್ದೇಲಿ ಸುಡಿಸೀನಿ ಗಿಣಿರಾಮ
ಒಂದ್ಹಾಡ ತುಪ್ಪ ಹೊಯ್ಸಿನಿ
ಒಂದ್ಹಾಡ ತುಪ್ಪ ಹೊಯ್ಸಿನಿ ಗಿಣಿರಾಮ
ಗಂಧದ ಮರಹತ್ತಿ ಕೂತು ಕಾಂತೆ
ಗಂಧದ ಮರ ಹತ್ತಿ ಕೂತು ಕಾಂತೆ ಗಿಣಿರಾಮ
ನಂಬೀದ ಸೂಳಿಯ ಬಿಡಲಾರೆ
ನಂಬೀದ ಸೂಳಿಯ ಬಿಡಲಾರೆ ಗಿಣಿರಾಮ
ನಾನೊಂದರಗಳಿಗೆ ಬರಲಾರೆ

ನಿನ್ನ ಒಡತಿಗೆ ಇದನ್ನೇ ಹೇಳು ಎಂದು ಹೇಳಿ ಬಿಡುತ್ತಾನೆ. ಇದನ್ನು ಕೇಳಿ ಮಡದಿಗೆ ಬಹಳ ಬೇಸರವಾಗುತ್ತದೆ. ಮಡದಿಯ ತಂದೆಗೆ ಬಹಳ ಸಿಟ್ಟು ಬರುತ್ತದೆ. ಅಳಿಯ ಹೇಳಿದಂತೆಯ ಗಂಧದ ಮರ ಕಡಿದು ಚಿತೆ ತಯ್ಯಾರು ಮಾಡುತ್ತಾನೆ. ಅದಕ್ಕೆ ಹಾರಿಕೊಳ್ಳ ಹೋದ ಮಗಳನ್ನು ಇರುವೆ ಸಾಲಿಗೆ ಕಟ್ಟಿ ಹಾಕುತ್ತಾನೆ. ನಾಯಿಯೊಂದನ್ನು ಕೊಂದು ಆ ಚಿತೆಗೆ ಹಾಕುತ್ತಾರೆ.

ಗಂಧದ ಮರ ಹತ್ತಿ ಹೊಗೆ ಕಂಡ ಅವಳಗಂಡ ನಿಜಕ್ಕೂ ತನ್ನ ಮಡದಿ ಮಡಿದಳೆಂದೇ ತಿಳಿದು ಗಾಬರಿಯಾಗಿ ಓಡಿ ಬರುತ್ತಾನೆ. ತಡೆದ ಸೂಳಿಯ ಕಾಲುಕಡಿಯುತ್ತಾನೆ. ಕೈ ಕಡಿಯುತ್ತಾನೆ. ಕೊನೆಗೆ ಅವಳನ್ನು ಕೊಂದು ಓಡಿ ಬಂದು ಉರಿಯುತ್ತಿರುವ ಚಿತೆಗೆ ಹಾರಿಬಿಡುತ್ತಾನೆ. ಈಗ ಮಡದಿ ಗೆದ್ದೂ ಸೋಲುತ್ತಾಳೆ. ಗಂಡನೊಂದಿಗೆ ತಾನೂ ಹಾರುತ್ತೇನೆ ಎಂದು ಚಿತೆಯ ಬಳಿ ಹೋಗುತ್ತಾಳೆ. ಆದರೆ ಅವಳ ತಂದೆ ಅವಳನ್ನು ತಡೆದು, ತನ್ನ ಬಳಿ ಇದ್ದ ನಾಗಬೆತ್ತದ ಮಂತ್ರದಂಡದಿಂದ ಅಳಿಯನನ್ನು ಬದುಕಿಸುತ್ತಾನೆ. ಹೀಗೆ ಒಡೆಯ ಒಡತಿ ಒಟ್ಟಾಗುತ್ತಾರೆ. ಗಿಣಿರಾಮ ಹಾಡುತ್ತಾನೆ.

**ಕುಸುಮಾಲಿ:**

ಕುಸುಮಾಲಿ ಒಬ್ಬ ಮುಗ್ಧ ಹಳ್ಳಿಯ ಹೆಣ್ಣು. ಮನೆಯಸುತ್ತಲೂ ಸುರಗಿ, ಸಂಪಗೆ, ಮಲ್ಲಿಗೆ, ಕೇದಗೆ, ಜಾಜಿ, ಇರುವಂತಿಗೆ, ಶೇವಂತಿಗೆ ಗಿಡಗಳನ್ನು ನೆಟ್ಟು ನೀರೆರೆದು ಮಕ್ಕಳಂತೆ ಸಾಕುತ್ತಿದ್ದ ಕಡು ಚೆಲುವೆ. ಯಾರಿಗೂ ಕೇಡೆಣಿಸದೇ, ತನ್ನಷ್ಟಕ್ಕೆ ತಾನು ಹಕ್ಕಿಯಂತೆ ಬದುಕುತಿತದ್ದವಳು. ಈ ಕುಸುಮಾಲೆಯ ಗಂಡ ದೆವರಾಯ. ದೇವರಾಯನಿಗೆ ಆದೇಕೋ ಎಂಜಲನ್ನದ ಮೋಹ. ಪಕ್ಕದ ಊರಿನ ವೇಶ್ಯೆಯ ಸಂಗ ಅವನಿಗೆ. ವೇಶ್ಯೆಗೆ ದೇವರಾಯನನ್ನು ಪೂರ್ತಿಯಾಗಿ ತನ್ನ ವಶ ಮಾಡಿಕೊಳ್ಳಬೇಕೆಂಬ ಹಂಬಲ. ಅದಕ್ಕಾಗಿ ಅವಳು ಆರಿಸಿಕೊಂಡ ಮಾರ್ಗವೆಮದರೆ ದೇವರಾಯನಿಗೆ ತನ್ನ ಹೆಂಡತಿಯ ಮೇಲೆಯೇ ಅನುಮಾನ ಬರುವಂತೆ ಮಾಡುವುದು. ಅದರ ಪರಿಣಾಮ ಮಾತ್ರ ಭೀಕರವಾದ ಘಟನೆಯ ಕಥೆ ಇದು.

ಒಮ್ಮೆ ದೇವರಾಯ ವೇಶ್ಯೆಯ ಮನೆಯಲ್ಲಿ ಇರುವಾಗ ವೇಶ್ಯೆ ಹೇಳುತ್ತಾಳೆ,

ಹೆಂಡಿರ ಗುಣವೇ ಗಂಡರೇನು ಬಲ್ಲರೇ
ಗುಂಡಿ ಒಳಗಿರುವ ಕರು ಮೀನು ನಾ ಅಂತೆ
ಕಂಡು ಬನ್ನಿದೇವ್ರಾಯ್ರೆ ನಿಮ್ಮಡದೀ
ಬೇಡಕು ಬಂದನಿಗೂ ಒಲಿವಾಳೆ
ಹೂವು ತಂದನಿಗೂ ಒಲಿವಾಳೆ

ಎಂದು ಹಗುರವಾಗಿ ವೇಶ್ಯೆ ಹೇಳಿದಾಗ ದೇವರಾಯನ ಮನಸ್ಸು ಅತ್ತ ಇತ್ತ ಉಯ್ಯಾಲೆಯಾಡುತ್ತದೆ. ಪರೀಕ್ಷೆ ಮಾಡಿಯೇ ಬಿಡೋಣವೆಂದು ನಿಶ್ಚಯಿಸಿ ಬಿಡುತ್ತಾನೆ.

ವೇಶ್ಯೆಯ ಮನೆಯಿಂದ ಹೊರಟ ದೇವರಾಯ ಬರುವುದು ಜೋಳಿಗೆ ಹೊಲಿಯುವವನ ಮನೆಗೆ, ಗುಡಿಗಾರನ ಮನೆಗೆ, ಬಡಿಗೆಯವನ ಮನೆಗೆ, ಅಲ್ಲಿ ತನ್ನ ವೇಷ ಪಲ್ಲಟಿಸಿಕೊಂಡು ಜೊಗಿಯವೇಷ ತೊಟ್ಟುಕೊಳ್ಳುತ್ತಾನೆ.

ತನ್ನ ಜೋಗಿಯವೇಷದ ಬಗ್ಗೆ ಖಾತ್ರಿ ಮಾಡಿಕೊಂಡು ಸೀದಾ ಮಡದಿ ಇದ್ದೆಡೆಗೆ ಬರುತ್ತಾನೆ.

ಯಾರಮ್ಮ ಮನೆಯಾಗೆ ಯಾರಮ್ಮ ಮಠದಾಗೆ ಜೋಗಿಗೆ ಪಡಿಯ ಇಡಬನ್ನಿ ಎಂದು ಕರೆಯುತ್ತಾನೆ ಮನೆಯೊಡತಿಯನ್ನು,
ಕೇಳಿಸಿಕೊಂಡ ಕುಸುಮಾಲಿ,

ಗೌಡರೇ ತೋತ್ಯರೆ ಎತ್ತೆಲ್ಲ ಹೋದಿರಿ
ಜೋಗಿಗೆ ಪಡಿಯ ಇಡಹೋಗಿ

ಎಂದು ಕೆಲಸದಾಳುಗಳಿಗೆ ಹೇಳುತ್ತಾಳೆ. ಆದರೆ ಈ ಜೋಗಿ ಭಿಕ್ಷೆಗಾಗಿ ಬಂದ ಜೋಗಿಯಲ್ಲವಲ್ಲ. ಆವನು ಕುಸುಮಾಲಿಯ ಶೀಲ ಪರೀಕ್ಷೆಗಾಗಿ ಬಂದವನು. ಹಾಗಾಗಿ ಅವನು ಹೇಳುತ್ತಾನೆ.

ಗೌಡ್ಯಾರು ತೊತ್ಯಾರು ಇಡುವಂಥ ಪಡಿಯಲ್ಲ
ಕುಸುಮಬಾಲಿ ಬಂದು ಇಡಬೇಕು ಎನ್ನುತ್ತಾನೆ.

ಪಡಿಗೆ ಬಂದವರನ್ನು ಖಾಲಿ ಕೈಯಲ್ಲಿ ಕಳುಹಿಸುವುದು ಮನೆಗೆ ಶ್ರೇಯಸ್ಕರವಲ್ಲ ಹಾಗಾಗಿ ನಿರ್ವಾಹವಿಲ್ಲದೇ ಕುಸುಮಾಲಿಯೇ

ಸಣ್ಣ ಹರಿವಾಣದಲ್ಲಿ ಸಣ್ಣಕ್ಕಿ ಹ್ಯಾಕಂಡು
ಸಣ್ಣ ಮಾದಲದ ಫಲದ್ವಸ್ತು ಹ್ಯಾಕಂಡು
ಹಿಡಿಬಾರ ಜೋಗಿ ಭಿಕ್ಷೆಯ ಅನ್ನುತ್ತಾಳೆ.

ಬಾಗಿಲ ಕಂಠದಲ್ಲಿ ನಿಂತು. ಆಗ ಜೊಗಿ ಬಾಗಿಲ ಕಂಠದಿ ಕೊಟ್ರೆ ಭಾಗ್ಯಕೆ ಕಡಿಮೆಯಾದೋ ಮತ್ತೊಂದು ಮೆಟ್ಲ ಇಳಿ ಹೆಣ್ಣೆ ಎಂದು ಹೇಳುತ್ತಾನೆ.

ಒಂದು ಮೆಟ್ಟಿಲನ್ನು ಇಳಿಯುತ್ತಾಳೆ. ಆದರೆ ಜೋಗಿಗೆ ಸಾಕಾಗುವುದಿಲ್ಲ. ಇನ್ನೊಂದು ಮೆಟ್ಟಿಲನ್ನು ಇಳಿಯ ಹೇಳುತ್ತಾನೆ. ಕುಸುಮಾಲಿ ಇನ್ನೊಂದು ಮೆಟ್ಟಿಲನ್ನು ಇಳಿಯುತ್ತಾಳೆ. ಆದರೆ ಜೋಗಿ ಮೂರನೇ ಕೊನೆಯ ಮೆಟ್ಟಿಲನ್ನು ಇಳಿಯ ಹೇಳಿದಾಗ ಮಾತ್ರ ಜೊಗಿಯೆ ಇಂಗಿತವೇನಿರಬಹುದೆಂದು ತಿಳಿಯದೇ ಕಂಗಾಲಾಗುತ್ತಾಳೆ. ಸೇವಕಿಯರನ್ನು ಕರೆಯುತ್ತ.

ಗೌಡಿಯಾರೆ ತೋತ್ಯಾರೆ ಎತ್ತೆಲ್ಲ ಹೋದಿರಿ
ಹಿಡಿಕಟ್ಟಿನಲ್ಲಿವನ ಹೊಡೆದಟ್ಟಿ

ಎನ್ನುವಷ್ಟು ಸಂಯಮ ಕಳೆದುಕೊಳ್ಳುತ್ತಾಳೆ. ಅಷ್ಟಾದರೂ ಆ ಜೋಗಿ ಮನೆಯಂಗಳ ಬಿಟ್ಟು ಕದಲುವುದಿಲ್ಲ. ಏನೂ ಮಾಡಲು ತೋಚದೆ ಆ ಬಾಲೆ ಅತ್ತಿಗೆಯಂದಿರ ಮನೆಗಳಿಗೆ ಹೋಗಿ, ಹೊತ್ತಾರೆ ಮುಂಚ್ ಬಂದ ಜೋಗಿ ಹೊತ್ತರಗಿ ಬಯ್ಯಾರೂ ಜೋಗಿ ನನ್ನುರಿಯ ಹೊಯ್ಸುವ ಎಂದು ತನ್ನ ಮನೆಯ ಅಂಗಳಕ್ಕೆ ಬಂದು ನಿಂತ ಜ್ಯೋಗಿಯ ಬಗ್ಗೆ ಹೇಳುತ್ತಾಳೆ. ಆದರೆ ಅವರು ಜೋಗಿ ಮತ್ಯಾರು ಅಲ್ಲ. ಆತ ಕುಸುಮಾಲಿಯ ಗಂಡನೇ ಎಂದು ಹೇಳುತ್ತಾರೆ.

ನಿನ್ನ ಗಂಡನಲ್ದೆ ಪರನಲ್ಲ ಆ ಜೋಗಿ
ಬೆಚ್ಚಲಲಿ ನೀರ ಅನುಮಾಡೆ ಕುಸುಮಾಲಿ
ಊಟಕ್ಕು ಅವಗೆ ಅಣೆ ಮಾಡೆ

ಎಂದು ಹೇಳಿ ಕಳುಹಿಸುತ್ತಾರೆ. ಕುಸುಮಾಲಿಗೆ ಕಳವಳವಾಗುತ್ತದೆ. ಉಪಾಯವಿಲ್ಲದೇ ಜೋಗಿಗೆ ಬಚ್ಚಲಲ್ಲಿ ನೀರಿಟ್ಟು ಸ್ನಾನ ಮಾಡುವಂತೆ ಹೇಳುತ್ತಾಳೆ. ಊಟಕ್ಕೂ ಆಣಿಮಾಡಿ ದೇವರಾಯನನ್ನು ಕರೆದು ಕುಳ್ಳಿರಿಸುತ್ತಾಳೆ. ಆದರೂ ಮನಸ್ಸಿಗೆ ಮುದವಿಲ್ಲ ಕುಸುಮಾಲಿಗೆ.

ಎಲ್ಲ ಬಡಿಸಿದೆ ಸ್ವಾಮಿ ಒಂದು ಮರೆತಿದೆ ಸ್ವಾಮಿ
ತುಪ್ಪ ತರುವೇನು ಎಂದು ಮೆತ್ತತ್ತಿ ಮ್ಯಾನೆ ನಡೆದಾಳೇ
ಮೆತ್ತತ್ತಿ ಮ್ಯಾನೆ ನಡೆದಾಳೆ ಕುಸುಮಾಲಿ
ಬೆಳ್ಳಿಯ ನೇಣ ಹಿಡಿದಾಳೆ,

ಬೆಳ್ಳಿಯ ನೇಣನ್ನು ತೆಗೆದುಕೊಂಡು ಕುಸುಮಾಲಿ ಸೀತಾ ತಾನು ಪ್ರೀತಿಯಿಂದ ನೆಟ್ಟು ಬೆಳೆಸಿದ ಹೂ ತೊಟಕ್ಕೆ ಹೊಗುತ್ತಾಳೆ. ಸಂಪಿಗೆ ಮರದ ಬುಡದಲ್ಲಿ ಬಂದು ಕುಸುಮಾಲಿ,

ಸಾಕಿದೆ ಸಲಹಿದೆ ನೆಟ್ಟು ನೀರುಹೊಯ್ದಿದೆ
ನನಗೊಂದು ಎಗಲ ಕೊಡಬೇಕು ಎನ್ನುತ್ತಾಳೆ.

ಆದರೆ ಕುಸುಮಾಲಿ ಸಾಕಿ ಬೆಳೆಸಿದ ಸಂಪಿಗೆ ತನ್ನ ಎಗಲನ್ನು ಕುಸುಮಾಲಿಗೆ ನೇಣಿಗಾಗಿ ಕೊಟ್ಟಾಳೆಯೇ

ನೀ ಸಾಕಿದೆ ಸಲಹಿದೆ ನೆಟ್ಟು ನೀರ ಹೊಯ್ದಿದೆ
ನಿನಗಂತೂ ಎಗಲ ಕೊಡಲಾರೆ ಅನ್ನುತ್ತದೆ.

ಆಗ ಕುಸುಮಾಲಿ ತಾನು ನೆಟ್ಟ ಎಲ್ಲ ಗಿಡ ಮರಗಳ ಬುಡದಲ್ಲಿ ನಿಂತು ನನಗಾಗಿ ಒಂದು ಎಗಲನ್ನು ಬಗ್ಗಿಸಿಕೊಂಡಿ ಎಂದು ಕೇಳಿದರೆ ಯಾವ ಗಿಡಗಳೂ ಒಪ್ಪುವುದೇ ಇಲ್ಲ. ಕೊನೆಗೆ ಸುರಗಿ ಮರವೊಂದು ಆಕೆಯ ಕಣ್ಣೀರಿಗೆ ಮರುಗಿ ತಲೆಬಾಗಿ ತನ್ನ ಎಗಲನ್ನು ಕೊಡುತ್ತದೆ.

ಇತ್ತ ದೇವರಾಯ ಎಷ್ಟು ಹೊತ್ತಾದರೂ ಮಡದಿ ಬಾರದುದನ್ನು ಕಂಡು ಮನೆಯಲ್ಲ ಹುಡುಕಾಡಿ ಅವಳನ್ನೆಲ್ಲೂ ಕಾಣದೇ ಅವಳು ನೆಟ್ಟು ಬೆಳೆಸು ಹೂತೋಟಕ್ಕೆ ಹೋಗುತ್ತಾನೆ. ಅಲ್ಲಿ ಕುಸುಮಾಲಿ ಆಗಲೇ ಸುರಗಿ ಮರದಲ್ಲಿ ಬೆಳ್ಳಿಯ ನೇಣಿನಲ್ಲಿ ತೂಗಾಡುತ್ತಿರುವುದನ್ನು ಕಂಡು ಕಣ್ಣೀರುಗರೆಯುತ್ತಾನೆ. ಕುಸುಮಾಲಿಯನ್ನು ವೇಶ್ಯೆಯ ಮಾತು ಕೇಳಿ ಅನಾವಶ್ಯಕವಾಗಿ ಶಂಕಿಸಿದೆ ಎಂದು ಗೋಳಾಡುತ್ತಾನೆ. ಕುಸುಮಾಲಿಗೂ ಗಂಡನನ್ನು ಆಗಲಿ ಹೋಗಲು ಕಷ್ಟವೇ ಆಗುತ್ತದೆ. ಅವಳು ಸಾಯುವ ಮುನ್ನ ಗಂಡನಿಗೆ ಮಾತು ಕೊಡುತ್ತಾಳೆ. ವರ್ಷಕ್ಕೊಮ್ಮೆ ಸುರಗಿಯ ಹೂವಾಗಿ ಬರುತ್ತೇನೆ. ಆದರೆ ಆ ಹೊತ್ತಿಗೆ ಸರಿಯಾಗಿ ದೇವರಾಯ ಬರಬೇಕು ಅಂದಾಗ ದೇವರಾಯ,

ಸೂಳಿ ರಂಡೆ ಮಾತ್ ಕೇಳಿ ಮಾನಭಂಗವ ಆದೆ.
ಚೆನ್ನದಂತಹ ಮಡದಿ ಕಳಕೊಟ್ಟೆ
ಚೆನ್ನದಂತಹ ಮಡದಿ ಕಳಕೊಟ್ಟೆ ಎನುತಲಿ
ವಜ್ರತುಂಬಿಯಾಗಿ ಹಾರಿಹೋದ.

ಆ ದಿನದಿಂದ ಕುಸುಮಾಲಿ ತಪ್ಪದೇ ವರ್ಷಕ್ಕೊಮ್ಮೆ ಸುರಗಿಮರದಲ್ಲಿ ಸುರಗಿ ಹೂವಾಗಿ ಅರಳಿ ಬರುತ್ತಾಳೆ. ಈ ದಿನಕ್ಕಾಗಿಯೇ ವಜ್ರದುಂಬಿ ದೇವರಾಯ ಕಾದು ಸುರಗಿ ಹೂವನ್ನು ಸೇರಿ ತನ್ನ ತಾ ಮರೆಯುತ್ತಾನೆ...

**ಉತ್ತರ ದೇವಿ:**

ಉತ್ತರದೇವಿ ಎಂಬುವವಳಿಗೆ ತನ್ನ ಗಂಡನಿಲ್ಲದ ವೇಳೆಯಲ್ಲಿ ಸಮಯ ಕಳೆಯುವುದೇ ಕಷ್ಟ. ಗಂಡನ ತಮ್ಮ ಮೈದುನ ತನ್ನ ಅತ್ತಿಗೆಯ ಬೇಸರವನ್ನು ಅರಿಯುತ್ತಾನೆ. "ಚೆನ್ನೆ ಯಾಡೋಣ ಬನ್ನಿ" ಎಂದು ಕರೆಯುತ್ತಾನೆ. ಅತ್ತಿಗೆಗೂ ಗಂಡನ ತಮ್ಮಲ್ಲಿ ಸಲುಗೆ, ಅವನ ವಾತ್ಸಲ್ಯ. ಉತ್ತರದೇವಿ ಸಂತೋಷದಿಂದಲೇ ಮೈದುನನೊಂದಿಗೆ ಚೆನ್ನೆಯಾಟಕ್ಕೆ ತೊಡಗುತ್ತಾಳೆ. ಆಗ,

"ಅತ್ತಿಗೆ ಮೈದುನ ಕೂತು ಚೆನ್ನೆಯಾಡುತ್ತಿದ್ರು
ಪುರುಷ ಫಲಗುಣರು ಬರುವಾರೇ ಬಂದು ನಿಂತುಕೊಂಡು
ಕೂತು ಚೆನ್ನಿ ಆಡೂ ಬಗಿ ಹೆಂಗ" ಎನ್ನುತ್ತಾನೆ.

ತನ್ನ ತಮ್ಮ ಯುವಕ, ಹೆಂಡತಿಯು ಸಣ್ಣ ಪ್ರಾಯದವಳು. ಮನೆಯಲ್ಲಿ ತಾನಿಲ್ಲದಿರುವಾಗ ದಿನವೂ ಇದೇ ರೀತಿ ಸರಸದಲ್ಲಿ ಇವರಿಬ್ಬರೂ ಕಳೆಯುತ್ತಿರಬಹುದೇ ಇವರಿಬ್ಬರ ಸಂಬಂಧ ಯಾವ ರೀತಿ ಇದ್ದೀತು. ಗಂಡ ಯೋಚನೆಗೀಡಾಗುತ್ತಾನೆ. ಸಿಟ್ಟೂ ಬರುತ್ತದೆ. ಹೆಂಡತಿಯೊಡನೆ ಕೇಳಿಯೇ ಬಿಡುತ್ತಾನೆ. "ನಿನ್ನ ಚೆನ್ನಿ ಆಡುಗ ಬಗೆ ಹೆಂಗೆ" ಎಂದು. ಆಗ ಉತ್ತರದೇವಿ ತನ್ನಲ್ಲಿ ಸತ್ಯವಾಗಿಯೂ ಕಳಂಕವಿಲ್ಲ ಎಂದರೂ ಗಂಡನಿಗೆ ತೃಪ್ತಿ ಇಲ್ಲ. ಆತ ಹೇಳುತ್ತಾನೆ.

"ನಿನ್ನ ಸತ್ಯ ನಿನ್ನ ಹತ್ತಿರ ಇದ್ದರೆ,
ಮುಟ್ಟಿ ಬಾ ಹುಂತಿನ ಸರುಪನ".

ಎಂದಾಗ ಉತ್ತರದೇವಿ ಎಷ್ಟು ಸತ್ಯವಂತೆಯಾಗಿದ್ದರೂ ಬೆದರುತ್ತಾಳೆ. ಜೀವಂತ ಹಾವನ್ನು ಮುಟ್ಟುವ ಧೈರ್ಯ ಮಾತ್ರ ಅವಳಿಗೆ ಇಲ್ಲ. ಕಳವಳಗೊಳ್ಳುತ್ತಾಳೆ. ಆದರೆ ಗಂಡನಿಗೆ ಎದುರಾಡುವಂತಿಲ್ಲ. ಸತ್ಯದ ಪರೀಕ್ಷೆ ಮಾಡ ಹೊರಟ ಗಂಡನಿಗೆ ಕನಿಕರವಿಲ್ಲ.

ಹೆಣ್ಣಿಗೆ ಗಂಡನ ಮನೆಯಲ್ಲಿ ಕಷ್ಟ ಬಂದ ಕೂಡಲೇ ನೆನಪಾಗುವುದು ತವರಿನ "ತಾಯಮ್ಮ" ಅವಳ ತಾಯಿ, ಮಗಳು ಇದ್ದಕ್ಕಿದ್ದಂತೆ ಬಂದುದನ್ನು ಕಂಡು ಆಶ್ಚರ್ಯಪಡುತ್ತಾಳೆ.

"ಎಂದು ಬಾರದ ಉತ್ತರದೇವಿ ಇಂದೇನು ಬಂದೀಯೆ
ಬಂದ ಕಾರಣದ ಒದಗ್ಹೇಳು"

ಎಂದಾಗ ಉತ್ತರ ದೇವಿ ತನ್ನ ಗಂಡ ತನ್ನ ಶೀಲದ ಮೇಲೆ ಅನುಮಾನ ಪಟ್ಟಿದ್ದನ್ನು ಹೇಳೀದಾಗ ಅವಳೂ ಸಹಜವೆಂಬಂತೆ ಹೇಳಿಬಿಡುತ್ತಾಳೆ "ನಿನ್ನ ಸತ್ಯ ನಿನ್ಹತ್ರ ಇದ್ದೀರೆ ಮುಟ್ಟಿಬಾ ಹೆಣ್ಣೇ ಹುಂತಿನ ಸರುಪನ " ಎಂದು. ತಾಯಮ್ಮನಿಗೆ ತನ್ನ ಮಗಳ ಮೇಲೂ ನಂಬಿಕೆ ಉಂಟು, ಹುತ್ತದ ಸರ್ಪದ ಮೇಲೂ ನಂಬಿಕೆ ಉಂಟು. ಆಗ ಉತ್ತರದೇವಿ ತನ್ನ ತಂದೆಗೆ ಹೇಳುತ್ತಾಳೆ. ತಂದೆಯಿಂದಲೂ ಅಂಥದ್ದೇ ಮಾತು, ಅಣ್ಣನಿಂದಲೂ ಅಂಥದ್ದೇ ಮಾತು ಕೇಳಿದ ಉತ್ತರದೇವಿಯನ್ನು ಈಗ ಹುಂತಿನ ಸರ್ಪವೇ ಕಾಯವೇಕು.

"ಅಷ್ಟೊಂದ ಮಾತ ಕೇಂಡಳುತ್ತರದೇವಿ
ಹೋದಳೇ ಹುಂತದ ಬುಡಕಾಗಿ ಉತ್ತರದೇವಿ
ಮ್ಯಾದುಲಿ ಸೆರಗ್ಹಾಸಿ ನಿಲುವಳು"

ತನ್ನವರೆಲ್ಲ ತನ್ನ ಕೈಬಿಟ್ಟ ಮೇಲೆ ಉತ್ತರದೇವಿ ಒಂದೇ ಮನದಿಂದ ನಾಗಪ್ಪನನ್ನೇ ಧ್ಯಾನಿಸುತ್ತ, ಹುತ್ತದ ಬಳಿಯಲ್ಲಿ ತನ್ನ ಸೆರಗೊಡ್ಡಿ ಕೇಳಿಕೊಳ್ಳುತ್ತಾಳೆ.

ನನ್ನ ಸತ್ಯ ನನ್ಹತ್ರ ಇದ್ದೀರೇ
ಹುಂತಿನ ಸರ್ಪ ಹೆರಗ್ಹೆಯ್ಯು ಎಂದ್ಹೇಳಿ
ಮ್ಯಾದುಲಿ ಸೆರಗ್ಹಾಸಿ ನಿಲುವಳು"

## ಪೌರಾಣಿಕ :

## ಗಜಗೌರಿ ವ್ರತ

ಕುಂತಿ ಮಕ್ಕಳೊಳಗೆ ಹೆಡ್ಯಾರು ಜಾಣ್ಯಾರು
ಮುರು ಲೊಲದೋಳೊಬ್ಬ ಅರ್ಜುನ ಫಲಗುಣ
ಅಮರಾವತಿಗೆ ಓಲೆ ಬರೆದಾನು ಏನೆಂದೆ ಬರೆದಾನು
ಬಿಳಿಯಾನೆ ಬಿಳಿ ಕುದುರೆ ಬರಬೇಕು
ಬಿಳಿಯಾನೆ ಬಿಳಿ ಕುದುರೆ ಬಾರದೆ ಇದ್ದರೆ
ಅಗ್ನಿಯಲ್ಲಿ ಜೀವ ಕೊಡುತೇನೆ ಅನುತ್ಹೇಳಿ
ಅಂಬಿನಲಿ ಓಲೆ ಕಳುಹಿದ ಸಮಯದಲ್ಲಿ

ದೇವೇಂದ್ರನ ಮಮಚ ನೆಗೆದ್ವಾರಿ ಮಂತ್ರಿ ಕರೆದ
ನಮಗಾಗ್ದಿದ್ದ ವೈರಿಇವನ್ಯಾರು
ಕುಂತಿ ಕುಮಾರ ಅರ್ಜುನ ಬಿಟ್ಟ ಬಾಣ
ಕಾರ್ಯಕೆ ಬಾಣ ಬಿಡುವಾನು
ಕಾಯಕೆ ಬಾಣ ಬಿಡುವಾನು ಅನುತ್ತೇಳಿ
ಬಿಳಿಯಾನೆ ಬಿಳಿ ಕುದುರೆ ಕಳುಸೀರು
ಬಿಳಿಯಾನೆ ಬರುವಾಗ ಮುಗಿಲ ಶಂಖವು ನಡುಗಿ
ಅರ್ಜುನ ಅಗ್ನಿ ಯ ಇಳಿತೆಂಬ ಸಮಯದಲ್ಲಿ
ಅಲ್ಲಿಗೆ ಶ್ರೀ ಕೃಷ್ಣ ಬರುವನು ಪಾಂಡವರು
ಗಜಗೌರಿ ವ್ರತವೇ ನಡಸೀರು.

## ಕರ್ಣ ಹುಟ್ಟಿದ್ದು

ಅಪ್ಪಯ್ಯ ಮಾಡಿಸಿಕೊಟ್ಟ ಹತ್ತು ತೂಕದ ಚಿನ್ನ
ಮಾವಯ್ಯ ಮಾಡಿಸಿದ ಮಣಿಸರು ಹ್ಯಾಕಂಡು
ಆಡೂ ಚಪ್ಪರಕೆ ನಡಿದಾಳು ಕುಂತಿದೇವಿ
ಆರೂ ಗೆಣತಿಯರನೆ ಕರೆದಾಳು ಕುಂತಿದೇವಿ
ಒಂಭೈನೂರ ಚಂಡು ಗೆಲಿದಾಳು
ಒಂಭೈನೂರ್ ಚಂಡು ಗೆಲ್ಲುವಂಥ ಸಮಯದಲ್ಲಿ
ಸೂರ್ಯದೇವ್ರು ದೃಷ್ಟಿ ಇಡುವಾರು
ಸೂರ್ಯದೇವ್ರ ದೃಷ್ಟಿ ಇಡುವಂಥ ಸಮಯದಲ್ಲಿ
ಆರೂ ಗೆಣತಿಯರನೆ ಕರೆದಳೆ
ಆರು ಗೆಣಗಿಯರನೆ ಏಎಂದೆ ಕರೆದಾಳೆ
ಹೋಯ್ ಹೇಳುತಾಯಮ್ಮಗ ವಸಗಿಯ
ಅಷ್ಟೊಂದು ಮಾತ ಕೇಂಡರು ಗೆಣತಿಯರು
ಹೋದರು ತಾಯಮ್ಮನ ಅರಮನೆಗೆ
ಎಂದೂ ಬಾರದ ಗೆಣತಿಯರೆ ಇಂದೇಕೆ ಬಂದಿರಿ
ಬಂದಕಾರವಣ ಅರುಹಿರಿ
ಎಂದು ನಾವ್ ಬರಲಿಲ್ಲ ಎಂತೂ ನಾವ್ ಬರಲಿಲ್ಲ
ಕುಂತಿ ಮೈನೆರೆದು ತಿರುಗೀಳು
ಹತ್ತುತಿಂಗಳು ಬಾಳಿ ಅಡೂಕ್ಹೋದಳು ಬಾಲಿ
ಕುಂತಿ ನನಕುಲಕು ಹಳುತಂದೆ ಎನ್ನತ್ತೇಳಿ
ಕಡಗಣ್ಣಲ್ಹನಿಯ ಸೆಡಿದಾಳೆ
ಜಲಗಾರನ ಕರೆಸಿಹಿತ್ಲ ಬಾಮಿ ತೋಡಿ
ಕುಂತೀನ ಅಲ್ಲಿ ಬರ ಹೇಳೀ
ಕುಂತೀನ ಅಲ್ಲಿ ಬರಹೇಳಿ ತಾಯಮ್ಮ

ಇಲ್ಲ್ರೀಯೆ ಕುಂತಿ ಹನಿ ನೀರ
ಈನೀರ ಮೀಯುಕೆ ಕಷ್ಟಿದಂಡ್ಹೊಯ್ವದೆ
ಇಲ್ ಮಿಂದು ಮಡಿಯು ಒಗಿಲಾರೆ
ಇಲ್ ಮಿಂದು ಮಡಿಯ ಒಗಿಲಾರೆ ತಾಯಮ್ಮ
ನಾಹೋಪೆ ಹರಿವ ಜಲಧಿಗೆ
ಜಲಗಾರನ ಕರೆಸಿ ಹಿತ್ತಲ ಕೆರಿಯ ತೋಡಿ
ಇಲ್ಲಿ ನೀರ ಮೀಯುಕೆ ವಳ್ಳಿದಂಡ್ ಹೊಯ್ವದೆ
ಇಲ್ ಮಿಂದು ಮಡಿಯ ಒಗಿಲಾರೆ ತಾಯಮ್ಮ
ನಾ ಹೋಪೆ ಹರಿವ ಜಲಧಿಗೆ

ಅಷ್ಟೊಂದು ಮಾತ ಕೇಂಡಳೆ ತಾಯಮ್ಮ
ಎಳ್ಜನ ಬೋಯಿಯರನ ಬರಹೇಳಿ ಕುಂತಿಯ ತಾಯಿ
ಬಿಟ್ ಬನ್ನಿ ಕುಂತಿ ಜಲಧಿಗೆ
ಅಷ್ಟೊಂದು ಮಾತ ಕೇಳ್ದಳೇ ಕುಂತಿ ದೇವಿ
ದಂಡುಗಿ ಮೇಲೆ ಏರಿಕೂತ್ಲೆ ಕುಂತಿದೇವಿ
ಏಳ್ಜನ ಬೊಯಿಯರ ಹೊಗಲೇರಿ ಕುಂತಿಯ ದೇವಿ
ಬಿಟ್ಟೀರೆ ಹರಿವ ಜಲದೀಯೆ ಕುಂತಿಯ ದೇವಿಯ
ಮುಳುಕಿ ಮಿಂದಳೆ ಹನಿ ನೀರ ಕುಂತಿದೇವಿ ಮೂರು ಕಲ್ಲು ಮಂತ್ರಿಸಿ ಇಡುವಾಳೆ
ಬೆಳಗಾನ ಉಟ್ಟುಕೊಂಡು ಬೆಳುದು ಮುಸಕ್ಹಾಕ್ಯಂಡು
ಬೆಳಿ ಮುಗುಲೊಳಗೆ ಬರುವಾನೆ ಸೂರ್ಯದೇವ್ರು
ಕೆಟ್ಟ ಬೆರೆಳೆಂದೇ ಕತ್ತರಿಸಿ ಹೆರಗಿಟ್ಟೆ ಮತ್ತೇ ಆ ನೆರಳೆ ನೆರೆದಾವು
ಮತ್ತೇ ಆ ಬೆರಳೆ ನೆರೆದಾವು ಕುಂತಿ ದೇವಿ
ಮುಳುಕಿ ಮಿಂದಾಳೆ ಹನಿ ನೀರ ಕುಂತಿ ದೇವಿ ಮೂರು ಕಲ್ಲು ಮಂತ್ರಿಸಿ ಇಡುವಾಳೆ
ಕರಿದಾನೆ ಉಟ್ಟುಕೊಂಡು ಕರಿದು ಮುಸುಕು ಹ್ಯಾಕಂಡು
ಕರಿ ಮೊಗುಲೊಳಗೆ ಬರುವಾನೆ ಸೂರ್ಯದೇವ್ರು
ಕರಿಮುಗುಳೊಳಗೆ ಬರುವಾನೆ
ಕೆಟ್ಟ ಬೆರಳೆಂದೇ ಕತ್ತರಿಸಿ ಹೆರಗಿಟ್ಟೆ
ಮತ್ತೇ ಆ ಬೆರಳೆ ನೆರೆದಾವು
ಮತ್ತೇ ಆ ಬೆರಳೆ ಬೆರೆದಾವು  ಈ ಮನಿ
ತಾಯಮ್ಮನ ಕೈಯ ಮೊಸರನ್ನ
ತಾಯಮ್ಮನ ಕೈಯ ಮೊಸರನ್ನ ತಿನಕೆಂದು
ಖಾತುರಿ ನನ್ನ ಮನದಲ್ಲು
ತಾಯಮ್ಮನ ಕೈಯ ಕರುಜಿಗಿ ತಿನಕೆಂದು
ಖಾತುರಿ ನನ್ನ ಮನದಲ್ಲು
ಅಷ್ಟೊಂದು ಮಾತ ಹೇಳಿದ ಕುಂತಿದೇವಿ
ದಂಡುಗಿ ಮೇಲೆ ಏರಿ ಕುಂತ್ಲ

ದಂಡುಗಿ ಮೇಲೆ ಏರಿ ಕುಂತ್ಲ ಕುಂತಿದೇವಿ
ಎಳು ಜನ ಬೋಯಿಯರ ಹಗಲೇರಿ
ಅಗಳ ನೊಡೀರೆ ಬಹು ಭಾರಿ
ಕಟ್ಟಿದ ಮುಡಿಚಂಡಿ ಉಟ್ಟ ಪಟ್ಟೆ ಚಂಡಿ
ಸುಮ್ಮನೆ ಬೋಯಿರೆ ಹೊರಡೇಳಿ

ಅರಿದಿದ್ದ ಪ್ರಾಯದಲ್ಲಿ ಕರ್ಣ ಹುಟ್ಟಿದನೆಂದು
ನಾಚಿಕೆ ಬಂದೋ ಕುಲಕೆಲ್ಲ ಕುಂತಿದೇವಿ
ಬೀಸಿ ಸಮುದ್ರಕೆ ಒಗೆದಾಳು
ಬಿಸಿ ಸಮುದ್ರಕೆ ಒಗೆದು ಏನಂದಾಳ
ಐರಾಮೀನಾಗಿರೂ ಅಂಬಿಗರಣ್ಣ ಹಿಡಿದು ತಪ್ಪ
ಹಾಸಾ ಕಲ್ಲಾಯೀರೋ ಮಡಿವಾಲ ಮಡಿ ಒಗೆವ
ದಾಸನ ಮರವಾಗಿ ಬೆಳಿಮಗನೆ
ದಾಸನ ಮರವಾದರೂ ದೇವ್ರಿಗೆ ಹೂ ಕೊಯ್ವರ
ಕಾಸನ ಮರವಾಗಿ ಬೆಳಿ ಮಗನೆ
ಕಾಸನ ಮರವಾದರೂ ಹೂಟಿಕೊಲ್ ಕಡುವರು
ಹೊದ್ದನ ಮರವಾಗಿ ಬೆಳಿ ಮಗುವೆ

## ಅಭಿಮನ್ಯು ಹುಟ್ಟಿದ್ದು

ಪಾಂಡವ್ರು ಕೌರವ್ರು ಪಂಥಕೆ ಪಗಡೆಯಾಡಿ
ಪಾಂಡವ್ರು ಸೋತೆ ನಿಲುವಾರು
ಪಂಚಪಾಂಡವ್ರು ನವವಾಸಕ್ಹೋಗುವಾಗೆ
ಸತಿಹೋಗಿ ಸೆರಗ ಹಿಡಿದಾಳು
ಸತಿಹೋಗಿ ಸೆರಗ ಏನೆಮದೆ ಹಿಡಿದಾಳು
ನಾ ಬತ್ತೆ ಬಿಲ್ಲ ನೆಳಲಡ್ಡೆ
ನೀನು ಬಪ್ಪುಕೆ ಸತಿಯೆ ಹೊಟ್ಟಿಗಾರು ತಿಂಗಳು
ಹೆತ್ತರಿನ್ನೆಲ್ಲೆ ಸಲುಗಿ ಸೌಭದ್ರಿ
ಹನ್ನೆರಡು ವರ್ಷ ವನವಾಸ ಗ್ಯೆದಿಕು ಬತ್ತೆ
ನೀನಿರು ಅಣ್ಣಯ್ನ ಅರಮನಿಲೆ
ಅತತಿಯ ಮರನಡಿ ಹೆತ್ತು ತೊಟ್ಟಿಲ ಕಟ್ಟಿ
ಅಲ್ಲೆ ಕಾನೆಲಿ ಮುರಿದ್ಹಾಸಿ ಸ್ವಾಮಿ ಕೇಳಿ
ಅಲ್ಲೆ ಸೂತುಕನೆ ಕಳಕಂಬೊ ಸ್ವಾಮಿ ಕೇಳಿ
ಅಲ್ಲೆ ಪುತ್ರಯ್ನ ಸಲಗುವೋ
ನಾಡರ ಕೇರೀಲ್ ಹಾಲುಂಟು
ಬೇಡಿ ತಂದ್ ಹಾಲ್ ಕುಡಿಸುವೆ ಸ್ವಾಮಿ ಕೇಳಿ

ಅಲ್ಲೆ ಪುತ್ರನ ಸಲುಗುವೆ
ನಾ ಬತ್ತೆ ಬಿಲ್ಲ ನಳಲಡ್ಡೆ

ನಿ ಹೋಗುಕೆ ತಂಗಿ ಆರು ತಿಂಗಳ ಬಸಿರಿ
ಬಾ ತಂಗಿ ನನ್ನ ಜೊತೆಯಲ್ಲಿ
ಹೆತ್ತೆಮ್ಮ ಹಾಲುಂಟು ಹತ್ತಿ ಹಾಸುಗೆಯುಂಟು
ಬಾ ತಂಗಿ ನನ್ನ ಜೊತೆಯಲ್ಲಿ
ಇಷ್ಟೆಂಬ ಮಾತ ಮಾತ ಕೇಂಡಳ ಸೌಬದ್ರಿ
ಬಂದಳಣ್ಣಯ್ಯ ಅರಮನಿಗಿ

ಕಂಡೂಗಿ ಬಯಲಲ್ಲಿ ಕಂಡಿರಿಚೋಚಿಗ
ಗಂಡನ ತಂಗಿ ಬರುವಾಳೆ ಅಂಬುದನೋಡಿ
ತೊಂಡಿ ಚಪ್ಪರಕೂ ನಡೆದಾಳು ಅತ್ತಿಗೆ
ಕಾಯಿ ಬಚ್ಚಿ ಎಲ್ಲಿಯ ಕ್ಯೋದಾಳೆ ಅವಳೀಗ
ಕುಂಬಾರ ಕೇರೀಗೆ ನಡೆದಾಳು ಅತ್ತಿಗೆ
ಒಂದ್ ಮಡಕೀಲು ಎರಡು ಅರೆ ಮಾಡು ಕುಂಬಾರಣ್ಣ
ಹೇಳಿದ ಕಿರಿಯ ಕೊಡುವೆನು ಕುಂಬಾರಣ್ಣ
ಗಂಡನತಂಗಿ ಬಯಕಿಗೆ

ಅಷ್ಟೊಂದ ಮಾತ ಹೇಳಿಕೆ ಅವಳೀಗ
ಹೋದಾಳು ಅಚಾರಿ ಅರಮನಿಗೆ ಅತ್ತಿಗೆ
ಆಚಾರಿ ಗಂಡಿನ ಕರೆದಾಳೂ
ಆಚಾರಿ  ಗಂಡಿನ ಏನೆಂದೆ ಕರೆದಾಳು
ಒಂಚು ಚಿಪ್ಪಿನಲಿ ಎರಡು ಅರೆಮಾಡು
ಒಂದು ಅರೆಯಲಿ ಮಾಡೀಳು ಪಾಯಸು ಹೋಳುಗಿ
ಮತ್ತೊಂದು ಅರೆಯಲ್ಲಿ ಹುಳಿಗಂಜಿ ಮಾಡ್ಕೊಂಡು
ಗಂಡನ್ನು ಮೈದುನಿಯ ಕರೆದಾಳೆ
ಗಂಡನಿಗೆ ಬಡಸೀಳು ಹೋಳೂಗಿ ಪಾಯಸ
ಮೈದುನಿಗೆ ಬಡಸೀಳು ಹುಳಿಗಂಜಿ
ಐದು ಜನ ಪಾಂಡವ್ರಿಗೆ ಅಟುಂಡ ತಂಗಿ ನೀಣು
ಇಂಥ ಹೋಳುಗೀಯ ಮೆಲುದೀಯ
ಐದು ಜನ ಪಾಂಡವ್ರಿಗೆ ಅಟ್ಟುಂಡ ತಂಗಿ ನಾನು
ಇಂಥ ಹುಳಿಗಂಜಿ ಮೆಲಲಿಲ್ಲ
ನನ್ನಬ್ಬಿ ಮಗನಾರೆ ನನಗೂ ಅಣ್ಣನಾರೆ
ಮುಟ್ಟಿ ನೋಡ್ ಮೂರ ಬೆರಳಲ್ಲಿ ಅಣ್ಣಯ್ಯ
ತಂಗಿ ಕೊಟ್ಟ ಹುಳಿಗಂಜಿ ಮೇಲದೀನ್ ಅವ್ವಣ್ಣ
ಚೂರಿ ಹೊರಿಯ ಎಳಿದಾನೆ

ಅವರವರು ಮಾಡಿದ ಪಾಪ ಅವರವ್ರು ಉಣ್ಣಲಿ
ನೀ ಬಾ ಭಾರತದ ಜಗುಲಿಗೆ ಅಣ್ಣಯ್ಯ
ಭಾರತದ ಪುಸ್ತಕನೇ ತೆಗೆದೋದು
ಭಾರತದ ಪುಸ್ತಕನೇ ತೆಗೆದೋದು ಸಮಯದಲ್ಲಿ
ತಂಗಿಗೆ ನಿದ್ದುರಿಯೆ ಕವಿದಾವೋ
ತಂಗಿನೆ ನಿದ್ದುರಿಯೇ ಕವಿದಂಥ ಸಮಯದಲ್ಲಿ
ಹೊಟ್ಟೆಲಿದ್ದ ಶಿಶುವೇ ಹೂಂ ಎಂತು
ಹೊಟ್ಟೇಲಿದ್ದ ಶಿಶುವೇ ಹೌದಂಬ ಸಮಯದಲ್ಲಿ
ಹುಟ್ಟೇರಿ ರಾಜ್ಯ ಉಳಿಸೋದೆ...
ಏಳು ತಲೆಯನು ನಾನು ಏಳೂ ಭುಜದವ ನಾನು
ಏಳೂರಿಗೊಂದೂರು ಉಳಿಸೂವೆ ಮಾವಯ್ಯ
ಮಾಯಿ ಮಾಡಿದ ಪಾಪ ಸಲಿಸೂವೆ
ಇಷ್ಟೆಂಬ ಮಾತ ಕೇಳ್ದನು ಶ್ರೀಕೃಷ್ಣಣ
ಚಕ್ರದಲಿ ಶಿಶುವು ತಲೆ ಕಡಿದ

## ರಾಮಾಯಣ

ಸೀತೆ ಶ್ರೀ ರಾಮರು ಕೂತು ಮಾತಾಡುವಾಗೆ
ಕಾಡಿಂದ ಬಂದು ಮಿಗುಗವೇ ಸೀತಮ್ಮನು
ತಂದು ಕೊಡಿ ಸ್ವಾಮಿ ಮಿರುಗನ
ಕಾಡಿನ ಮಿರುಗದಿಂದ ಕೇಡು ಬಪ್ಪುದು ಸತಿಯ
ಬೇಡೆ ಕಾಣೆ ನಿನಗೆ ತರ್ಕವು
ಕಾಡಿನ  ಮಿರುಗದಿಂದ ಕೇಡು ಬಂದರು ಸ್ವಾಮಿ
ನೋಡಿಕೊಂಬೆ ನನ್ನ ಬಲದಿಂದೆ
ಹೆಂಡಿರ ಮಾತು ಕೇಳೀ ಗಂಡರು ಮರುಳಾರೆ
ಮುಂದಿನ ಸಂಗತಿ ಅರಿಯದೇ ರಾಮದೇವ್ರು
ಮಿರುಗದ ಬೆನ್ನಿಡಿದು ನಡೆದರು

## ರಾಮಾಯಣ : ಸೀತಾಪರಿತ್ಯಾಗ

ಅರಣ್ಯಕ್ಹೋಗುವಾಗ ಹಾಂಗೆ ಇದ್ದಳು ಸೀತೆ
ಅರಣ್ಯಕ್ಹೋಗಿ ಬರುವಾಗ ಸೀತಮ್ಮಗೆ
ಅಂಗೈಯಲಿ ಗರ್ಭೆ ಹೊಳೆದಾವು
ಅಂಗೈಯಲ್ಲಿ ಗರ್ಭ ಹೊಳೆವಂಥ ಸಮಯದಲ್ಲಿ
ತಮ್ಮ ಲಕ್ಷ್ಮಣನ ಕರೆದಾನು

ತಮ್ಮ ಲಕ್ಷ್ಮಣ ಏನೆಂದೆ ಕರೆದಾನು
ಕಡಿದು ಬಾ ಸೀತಿ ಅಡವೀಲಿ
ಅಣ್ಣನ ಮಾತ ಮೀರದ ಮಿಕ್ಕದೇ
ಅತ್ತಿಗಿ ಒಡಗೂಡಿ ನಡೆದನೆ ಲಕ್ಷ್ಮಣ
ಹೋದರೆ ದೂರ ಅಡವೀಗೆ
ಕಡಿಯಬೇಕೆಂದು ಖಡುಗವ ನೆಗೆದೀರೆ
ಖಡ್ಗದಲಿ ಗರ್ಭ ಹೊಳೆದಾವು
ಖಡ್ಗದಲಿ ಗರ್ಭ ಹೊಳೆವಂಥ ಸಮಯದಿ
ಅತ್ತೀಗಿ ನೀವ್ ಮಿಂದ ದಿನ ಹೇಳೀ
ನಾ ಮಿಂದ ದಿನ ಏನು ಹೇಳಲಿ ಅಣ್ಣ
ರಾಮದೇವರ ನಕೆ ನವಿಲ್ಹಿಂಡು ಬರುವಾಗ
ಆಗಲೇ ನಾ ಮಿಂದೆ ಹುಸಿನೀರು
ಅತ್ತಿಗೆಯ ತೆಗೆದು ಅರುಣ್ಯದಲ್ಲೆ ಬಿಟ್ಟು
ನೆತ್ತರ ಹೊನ್ನಿನ ಮರವ ಕಡಿದಾನು
ನೆತ್ತರ ಹೊನ್ನಿ ಮರವ ಕಡಿದು ಖಡ್ಗಕ್ಕೆ ಉದ್ದಿ
ಅಣ್ಣನಿಗೆ ತೊರಿಸಿದ ಗುರುತವ
ಸಿಟ್ಟಿಗೊಂದು ಹೇಳಿದೆ ಮಾತಿಗೊಂದು ಹೇಳಿದೆ
ಯಾವ ಕೈಲಿ ಸೀತಿ ಕಡಿದೀಯೆ ಲಕ್ಷ್ಮಣ
ಏನೆಂದು ಸೀತಿ ಮಡಿದ್ಹೋಳು
ತಾಯಂದೆ ಮಡಿಲಿಲ್ಲ ತಂದ್ಯೆಂದೆ ಮಡಿಲಿಲ್ಲ
ರಾಮು ರಾಮೆಂದು ನುಡಿದಳು

ಅರಣ್ಯಕ್ಕೋಗುವಾಗ ಆರು ತಿಂಗಳ ಬಸಿರಿ
ಅರನ್ಯಕೋಯಿ ಬರುವಾಗ ಸೀತಮ್ಮಗೆ
ಲವಕುಶರೆಂಬ ಮಗ ಹುಟ್ಟೆ ಅವ್ರೀಗ
ರಾಮದೆವರ ದಂಡ ತಡೆದರು
ರಾಮದೇವರ ದಂಡ ತಡೆದಂಥ ಸಮಯದಲ್ಲಿ
ನಾರದ ಮುನಿ ಬಂಣದು ತಡೆದರು
ನಾರದ ಮುನಿ ಬಮದು ಏನೆಂದೆ ತಡೆದರು
ನಿಮ್ಮಕ್ಕಳ್ಳದೇ ಪರರಲ್ಲ.

ಸೀತಿ ಹುಟ್ಟಿದಳೆಂದು ರಾವಣಗೆ ಸಂತೋಷ
ಸೀತಿ ಜಾತಕವೆ ತೆಗೆದೋದಿ ಕಾಂಬಾಗೆ
ಸೀತಿ ಹುಟ್ಟಿ ರಾವಣಗೆ ಮರಣವೆ

# ಭಾಗವತ : ಶ್ರೀ ಕೃಷ್ಣ ರುಕ್ಮಿಣಿ

ಯಾರಮ್ಮ ಮನೆಯಲ್ಲಿ ಯಾರಮ್ಮ ಮಠದಲ್ಲಿ
ಯಾರಮ್ಮ ಬಳೆಯ ಇಡತೀರಿ
ನಾ ಬಳೆ ಇಡುವಾಕೆ ಅತ್ತಿಲ್ಲ ಮಾವಿಲ್ಲ
ಮತ್ತೇ ಕೈ ಹಿಡಿದ ಸಿರಿ ಇಲ್ಲ
ಅಷ್ಟೊಂದು ಮಾತ ಕೇಂಡಾನೆ ಬಳೆಗಾರ
ಬಂದಾನರಮನೆಯ ಒಳಗಾಗಿ
ನೀ ಬಳೆ ಇಡುವಾಕೆ ಅತ್ಯಾಕೆ ಮಾವ್ಯಾಕೆ
ಮತ್ತೇ ಕೈ ಹಿಡಿದ ಸಿರಿಯಾಕೆ ಎಲೆ ಹೆಣ್ಣೆ ಬೇಕೆಂಬ ಬಳೆಯ ಇಡಿಸುವೆ
ಅಷ್ಟೆಂಬ ಮಾತ ಕೆಂಡಾಳೆ ರುಕ್ಮಿಣಿ
ಕೈ ಎತ್ತಿ ಬಳೆಗಾರ್ಗೆ ಕೊಡುವಾಳೆ
ಮುಂದು ಹತ್ತ ನಿಡ ಹಿಂದೆ ಸಡ್ಲನಿಡ
ನಡುಕೈ ಬಳೆಯ ಹದ ಇಡ ಬಳೆಗಾರ
ಬಳೆ ಇಟ್ಟ ಕೂಲಿ ನನಗ್ಹೇಳು
ದುಡ್ಡಿಗೂ ಬಳೆ ಇಡಲಿಲ್ಲ ಅಕ್ಕಿಗೂ ಬಳೆ ಇಡಲಿಲ್ಲ
ಬಳೆ ಇಟ್ಟ ನಿನ್ನ ಗುಣುವಿಗೆ
ಹುಚ್ಚ ಬಳೆಗಾರಣ್ಣ ಹುಚ್ಚು ಮಾತಾಡಬೇಡ
ನಿನ್ನಿಂದ ಚಲುವ ಮನಿ ಪುರುಷ ಕೇಂಡಿರು
ರುಂಡಿಗು ರುಂಡ ಹೊಯ್ಸುವರು
ಅಷ್ಟೆಂಬ ಮಾತ ಹೇಳಿದ ರುಕ್ಮಿಣಿ
ಮೆತ್ತತ್ತಿ ಮ್ಯಾಲೆ ನಡೆದಾಳು ರುಕ್ಮಿಣಿ
ಪೆಟುಗಿಯ ಬಾಗ್ಲ ತೆಗೆದಾಳು ರುಕ್ಮಿಣಿ
ಚಿನ್ನಾಭರಣಗಳ ತೆಗೆದಾಳ ರುಕ್ಮಿಣಿ
ಮೆತ್ತೀನ ತಗ್ಗ ಇಳಿದಾಳ ರುಕ್ಮಿಣಿ
ಕೈ ಎತ್ತಿ ಬಳೆಗಾರ್ಗೆ ಕೊಡುವಾಳು
ಚಿನ್ನ ಹಾಕೂಕೆ ನಿನ್ಹಂಗೆ ಹೆಣ್ಣಲ್ಲ
ಕೇಳಿದ್ವಸ್ತುಗಳ ಕೊಡುಬೇಗ
ಅಷ್ಟೊಂದ ಮಾತ ಕೇಂಡಳೆ ರುಕ್ಮಿಣಿ
ಮೆತ್ತತ್ತಿ ಮ್ಯಾನೆ ನಡದಾಳು ರುಕ್ಮಿಣಿ
ಪಟ್ಟೆ ಸೀರೆ ತೆಗೆದಾಲು ರುಕ್ಮಿಣಿ
ಕೈ ಎತ್ತಿ ಬಳೆಗಾರ್ಗೆ  ಕೊಡುವಾಳು
ಪಟ್ಟೆ ಸೀರೆ ಉಡುವಾಕೆ ನಿನ್ಹಂಗೆ ಹೆಣ್ಣಲ್ಲ
ಕೇಳಿದ್ವಸ್ತುಗಳ ಕೊಡು ಬೇಗ

ಅಷ್ಟೆಂಬ ಮಾತ ಕೇಂಡಾಳೆ ರುಕ್ಮಿಣಿ
ಮೆತ್ತತ್ತಿ ಮ್ಯಾನೆ ನಡೆದಾಳು ರುಕ್ಮಿಣಿ
ಹಂಡೆ ಪಾತ್ರೆಗಳ ತೆಗೆದಾಳು ರುಕ್ಮಿಣಿ
ಮೆತ್ತೀನ ತಗ್ಗ ಇಳಿದಾಳು ರುಕ್ಮಿಣಿ
ಕೈ ಎತ್ತಿ ಬಳೆಗಾರ್‍ಗೆ ಕೊಡುವಾಳು
ಹಂಡೆ ಪಾತ್ರೆ ಕೊಡುಕೆ ನಮ್ಮಲ್ ಹರ್ಸಾಯ್ ಲಿಲ್ಲ
ಕೇಳಿದ್ವಸ್ತುಗಳ ಕೊಡುಬೇಗ
ಅಷ್ಟೆಂಬ ಮಾತ ಕೇಂಡಾಳೆ ರುಕ್ಮಿಣಿ
ಬಾಗಿಲಿಗೆ ಬೀಗ ಜಡಿದಾಳ ರುಕ್ಮಿಣಿ
ಹ್ವಾದಾಳೆ ಸತಿ ಭಾಮೆಯ ಅರಮನಿಗೆ
ಎಂದ್ ಬರದಿದ್ದ ರುಕ್ಮಿಣಿ ಇಂದೇನುಬಂದೀಯ
ಬಂದ ಕಾರಣವ ಒದುಗ್ಹೇಳು./..
(ಬಳೆಗಾರ ಬಂದ ವಿಷಯ ಹೇಳುತ್ತಾಳೆ)
ಅಷ್ಟೆಂಬ ಮಾತ ಕೇಂಡಳೆ ಸತಿಭಾಮೆ
ಬಂದಳು ರುಕ್ಮಿಣಿಯ ಅರಮನಿಗೆ
ಐದು ಜನಿನೊಳಗೆ ಬಲು ಜಾಣೆ ರುಕ್ಮಿಣಿ '
ನಿನ ಗಂಡನ ಗುರ್ತ ನಿನಗಿಲ್ಲ.

## ಭಾಗವತ : ಕೃಷ್ಣ ಪಾರಿಜಾತ

ಬಿಳಿ ಎಲಿ ಬೆಟ್ಟಡಿಕೆ ಕೈಯಲ್ಲಿ ಮೆಲಸೀರ
ತೊಡಿ ಮ್ಯಾಲೆ ನಿದ್ದುರಿಯ ಗೈಸೀರ್ ಕಷ್ಟ ದೇವ್ರು
ತೊಡಿ ತಪ್ಸಿ ಸೂಳಿಯ ಮನಿಗ್ಹೋರ ರುಕ್ಮಿಣಿ ದೇವಿ
ದಡಬಡ ಮಂಚ ಇಳಿದಳ ರುಕ್ಮಿಣಿ ದೇವಿ
ದೋಣಿ ಕಡಿಗಾಗಿ ನಜಡೆದೀಳ
ಕುಲದಲ್ಲಿ ಅಂಬಿಗರಣ್ಣ ಜಾತಿಯಲ್ಲಿ ಮೊಗವೀರ ಗಂಡೆ
ಇಲ್ಲೊಬ್ರೂ ದೋಣಿ ಗಳದಧೀರ
ದೋಣಿಯ ಕಡಿನಲ್ಲಿ ನೂರಾರು ಮಂದಿಯೆ
ಯಾರೆಂದು ಕುರುವ ಹಿಡಿವುದೇ
ರಸಬಳ್ಳಿ ತಿಂದೀರ ರಜ ಕೆಂಪು ಉಗಿದೀರು
ಅವರೇ ಕಾಣ್ ನನ್ನ ಪುರುಷರು
ರಸಬಳ್ಳಿ ತಿಂದವರಿದ್ರು ರಜಕೆಂಪು ಉಗದವರಿದ್ರು
ಅವರೆಲ್ಲ ನಿನ್ನ ಪುರುಷರೇ

ಮಡದಿ ಬಂದ ಬರ ಅತಿ ದುರ ನೋಡಿದ
ಅಲ್ಲೆ ತನ್ನಕುರುವೇ ಬದಲಿಸಿ ಕೃಷ್ಣ ದೇವ್ರು

ರುಕ್ಮಿಣಿ ಅರಮನೆಗೆ ಬರುವಾರು
ಈರೇಳು ಲೋಕ ತಿರ್ಗಿ ಪಾರಿಜಾತವ ತಂದೆ
ಅಡವೀಲಿ ಸತ್ಯಭಾಮೆ ಮನಿಯಿಂದ ಆ ಹೂಗು
ಅರಳಿತ್ತು ರುಕ್ಮಿಣಿ ಮುಡಿಮ್ಯಾಲೆ
ಇಂದ್ರಲೋಕಕ್ಕೆ ಹೋಗಿ ಪಾರಿಜಾತನ ತಂದು
ನಟ್ಟೇರು ಸತ್ಯಭಾಮೆ ವನದಲ್ಲಿ ಆ ಹೂಗು
ಇರುವುದು ರುಕ್ಮಿಣಿ ಮುಡಿಮೇಲೆ

ಅತ್ತಿಯ ಹೂವೆ ಕಂಡೆನೆಂಬವರಿಲ್ಲ
ಶ್ರೀ ಕೃಷ್ಣ ಸ್ವಾಮಿ ಪರಪಂಚೊ ಹೊಯ್ ಬರುವಾಗ
ಅತ್ತಿ ಹೂ ಅಲದೇ ಕೊಡಿಯಾದೋ ಕೃಷ್ಣ ಸ್ವಾಮಿ
ಮಡದಿ ರುಕ್ಮಿಣಿನ ಕರೆದಾರೊ ಏನೆಂದೆ
ಭಾಗ್ಯದ ಹೂಗ ಮುಡಿಬಾರೆ

ಸಕಲಾವತಿ ಊರಲ್ಲೆ ಅತ್ತಿ ಮಕ್ಕಳಿರುವರೆ
ಅಲ್ಲೆಲ್ಲು ರಾಜು ಸುಗುಣವು
ನಿನ್ನೆತ್ತಿ ಮಕ್ಕಳ ಕುರವೇ ನಾನೇನ ಬಲ್ಲೆನು
ಎಸರ್ಥೇಳಿರೆ ಅವ್ರು ಕುರು ಬಲ್ಲೆ
ನಕುಲ ಸಹದೇವರು ಭೀಮಲರಜುನರು
ಮತ್ತೊಬ್ಬರ ಹೆಸರು ಮರೆತೀದೆ
ನಾಕು ಜನರ ಹೆಸರು ಒಟ್ಟಾಗಿ ಹೇಳಿದೆ
ಮತ್ತೊಬ್ಬರ ಹೆಸರುಮರೆತೀದೆ
ಅವ್ರಮ್ಮ ನನ್ನಮ್ಮ ಕೂತು ಮಾತಾಡುವಾಗೆ
ಕೊಡ್ತೆನೆಂದು ನುಡದೀರು ಕಾರಣದಿಂದ
ಹೆಸರ್ಹೇಳಲು ಬಾಯಿ ಅಳುಕಿದು.

## ಧಾರ್ಮಿಕ : ಮಾಶಾಶೇಷನ ಶಾಪದ ಹಾಡು

ಮುಗುಟ ದೇವ್ರಿಗೆ ಮಗಳಂಬ್ರ ಕೇಣ್ ಕೇಣ್ ಕನ್ನಡಿ
ಆಗಟ ದೇವ್ರಿಗೆ ಸೋಸಿಯೆಂಬ್ರ ಕೇಣ್ ಕೇಣ್ ಕನ್ನಡಿ
ಸರ್ವಾದೇವ್ರಿಗೆ ಮಡದಿಯೆಂಬ್ರ ಕೇಣ್ ಕೇಣ್ ಕನ್ನಡಿ
ಅವ್ಳ ಮುಟ್ಟಾಗಿ ಮೂರು ದಿವ್ಸ ಕೇಣ್ ಕೇಣ್ ಕನ್ನಡಿ
ನಾಗರ ಕೆರೀಗ್ ಮೀಯುಕ್ ಹೋದಾಳ ಕೇಣ್ ಕೇಣ್ ಕನ್ನಡಿ
ಮೂರು ಮುಳುಕ ಹೊಡಿದಾಳ ಕೇಣ್ ಕೇಣ್ ಕನ್ನಡಿ
ಎಪ್ಪತ್ಹೆಡಿ ಮಾ ಶೇಷ್ ಕೇಣ್ ಕೇಣ್ ಕನ್ನಡಿ
ಭೋರ ಗುಟ್ಕಂಡ್ ಎದ್ದಿತ್ತೆ ಕೇಣ್ ಕೇಣ್ ಕನ್ನಡಿ
ಬುಸ್ ಗುಟ್ಕಂಡ್ ಎದ್ದಿತ್ತೆ ಕೇಣ್ ಕೇಣ್ ಕನ್ನಡಿ

ನಿನ್ನ ಕಟ್ಟಿ ಕೊಲುವೆ ಎಂದಿತ ಕೇಣ್ ಕೇಣ್ ಕನ್ನಡಿ
ಮುಗ್ಧ ದೇವ್ರಿಗೆ ಮಗಳ ನಾನು ಕೇಣ್ ಕೇಣ್ ಕನ್ನಡಿ
ನಿನ್ನ ಹೊಡೆದು ಕೊಲುವೆನೆಂದಿರೆ ಕೇಣ್ ಕೇಣ್ ಕನ್ನಡಿ
ಅಗಟದೇವ್ರಿಗೆ ಸೊಸಿ ನಾನು ಕೇಣ್ ಕೇಣ್ ಕನ್ನಡಿ
ನಿನಬಡದು ಕೊಲುವೆ ನೆಂದಿರೆ ಕೇಣ್ ಕೇಣ್ ಕನ್ನಡಿ
ಅದು ಮೂರು ಶಾಪ ಕೊಟ್ಟೀತೆ ಕೇಣ್ ಕೇಣ್ ಕನ್ನಡಿ
ನೀ ಹುಟ್ಟು ಬಂಜ್ಯಾಗೆಂದ್ಹೇಳಿ ಕೇಣ್ ಕೇಣ್ ಕನ್ನಡಿ
ನೀ ಹೊರಿದಿದ್ದ ಬಂಜ್ಯಾಗೆಂದ್ಹೇಳಿ ಕೇಣ್ ಕೇಣ್ ಕನ್ನಡಿ
ನೀ ಕಟ್ಟು ಬಂಜ್ಯಾಗೆಂದ್ಹೇಳಿ ಕೇಣ್ ಕೇಣ್ ಕನ್ನಡಿ
ಮೂರು ಶಾಪ ಕೊಟ್ಟೀತು ಕೇಣ್ ಕೇಣ್ ಕನ್ನಡಿ
ಬಾಳ ಚಿಂತಿಯಾಗೀತು ಕೇಣ್ ಕೇಣ್ ಕನ್ನಡಿ
ಮನೆಗಾರು ಬಂದಳು ಕೇಣ್ ಕೇಣ್ ಕನ್ನಡಿ
ಜಾನದಲ್ಲೆ ಒರಗೀಳು ಕೇಣ್ ಕೇಣ್ ಕನ್ನಡಿ
ಅಗ್ಗದೇವ್ರ ಅಂಬೋರು ಕೇಣ್ ಕೇಣ್ ಕನ್ನಡಿ
ಏನಾಯುತ ಮಗಳೆಂದ್ ಕೇಂಡರು ಕೇಣ್ ಕೇಣ್ ಕನ್ನಡಿ
ಮುಟ್ಟಾಗಿ ಮೂರು ದಿನ ಆಯಿತ್ತೆ ಕೇಣ್ ಕೇಣ್ ಕನ್ನಡಿ
ಮೂರ ಮುಳುಕ ಹೊಡೆದೀನ ಕೇಣ್ ಕೇಣ್ ಕನ್ನಡಿ
ಎಪ್ಪತ್ತಡಿ ಮಾ ಶೇಷ ಕೇಣ್ ಕೇಣ್ ಕನ್ನಡಿ
ಭೋರ ಗುಟ್ಕಂಡ್ ಎದ್ದಿತ್ತ ಕೇಣ್ ಕೇಣ್ ಕನ್ನಡಿ
ಭುಸ ಗುಟ್ಕಂಡ್ ಎದ್ದಿತ್ತೆ ಕೇಣ್ ಕೇಣ್ ಕನ್ನಡಿ
ನಿನ ಕಟ್ಟಿ ಕೊಲುವೆಂದಿತ್ತ ಕೇಣ್ ಕೇಣ್ ಕನ್ನಡಿ
ನಿನ ಹೊಡೆದು ಕೊಲುವೆನೆಂದಿತ್ತ ಕೇಣ್ ಕೇಣ್ ಕನ್ನಡಿ
ನನ ಬಡದು ಕೊಲುವೆನೆಂದಿತ್ ಕೇಣ್ ಕೇಣ್ ಕನ್ನಡಿ
ಅದು ಮೂರು ಶಾಪ ಕೊಟ್ಟಿತ್ತ ಕೇಣ್ ಕೇಣ್ ಕನ್ನಡಿ
ಅದ ಏಜನ ಶಾಪ ಕೊಟ್ಟಿತ್ತ ಕೇಣ್ ಕೇಣ್ ಕನ್ನಡಿ
ನೀ ಹುಟ್ಟು ಬಂಜ್ಯಾಗೆಂದ್ಹೇಳಿ ಕೇಣ್ ಕೇಣ್ ಕನ್ನಡಿ
ಹೊರಿದಿದ್ದ ಬಂಜ್ಯಾಗೆಂದ್ಹೇಳಿಕೇಣ್ ಕೇಣ್ ಕನ್ನಡಿ
ನಾನಾಗರ ಕೆರೆ ಕಟ್ತೆ ಮಗಳೇ ಕೇಣ್ ಕೇಣ್ ಕನ್ನಡಿ
ಹಾದೀಗಿ ಅಕ್ಕಿ ಹೊಯ್ತೆ ಮಗಳೆ ಕೇಣ್ ಕೇಣ್ ಕನ್ನಡಿ
ನಾಗರ ಕೆರೆಯ ಕಟ್ಟೀರು ಕೇಣ್ ಕೇಣ್ ಕನ್ನಡಿ
ಬೀದಿಗ್ ಹೊನ್ನ ಹೊಯ್ಸಿರು ಕೇಣ್ ಕೇಣ್ ಕನ್ನಡಿ
ಹಾದೀಗ ಅಕ್ಕಿ ಬಿಕ್ಸಿರು ಕೇಣ್ ಕೇಣ್ ಕನ್ನಡಿ
ನೂರೊಂದ್ ಗಿಳಿ ಹಿಂಡು ಬಂದು ಕೇಣ್ ಕೇಣ್ ಕನ್ನಡಿ
ಹಾದೀಲ್ ಅಕ್ಕಿ ಬಿದ್ದಿತಲೆ ಕೇಣ್ ಕೇಣ್ ಕನ್ನಡಿ
ಆದನ್ನಾರು ಹೆಕ್ಕೆ ತಿಂಬೋ ಕೇಣ್ ಕೇಣ್ ಕನ್ನಡಿ
ಒಂದ್ಹಕ್ಕಿ ಹೇಳೀತೆ ಕೇಣ್ ಕೇಣ್ ಕನ್ನಡಿ

ಅದು ಹುಟ್ಟು ಬಂಜಿ ಬಿಕ್ಕದ ಅಕ್ಕಿ  ಕೇಣ್ ಕೇಣ್ ಕನ್ನಡಿ
ಅದು ಹೊರಿದಿದ್ದ ಬಂಜಿ ಬಿಕ್ಕಿದ ಅಕ್ಕಿ ಕೇಣ್ ಕೇಣ್ ಕನ್ನಡಿ
ಅದು ಕಟ್ಟು ಬಂಜಿ ಬಿಕ್ಕಿದ ಅಕ್ಕಿ ಕೇಣ್ ಕೇಣ್ ಕನ್ನಡಿ
ಯಾರು ಹೆಕ್ಕ ತಿನ್ನಬಾರ ಕೇಣ್ ಕೇಣ್ ಕನ್ನಡಿ
ಬೇಡಿ ತಿಂಬುಕೆ ಹೊರಟೀರೆ ಕೇಣ್ ಕೇಣ್ ಕನ್ನಡಿ
ಬೀದಿಲ್ ಹೊನ್ನು ಬಿದ್ದೀತಲೆ ಕೇಣ್ ಕೇಣ್ ಕನ್ನಡಿ
ಅದನ್ನಾರು ಹೆಕ್ಕೊಂಡ್ಹೋಪೋ ಕೇಣ್ ಕೇಣ್ ಕನ್ನಡಿ
ಒಬ್ಬ ಜೋಗಿ ಹೇಳೀದ ಕೇಣ್ ಕೇಣ್ ಕನ್ನಡಿ
ಅದು ಹುಟ್ಟು ಬಂಜಿ ಬಿಕ್ಕಿದ ಹೊನ್ನು ಕೇಣ್ ಕೇಣ್ ಕನ್ನಡಿ
ಹೊರಿದಿದ್ದ ಬಂಜಿ ಬಿಕ್ಕಿದ ಹೊನ್ನು ಕೇಣ್ ಕೇಣ್ ಕನ್ನಡಿ
ಕಟ್ಟು ಬಂಜಿ ಬಿಕ್ಕದ ಹೊನ್ನು ಕೇಣ್ ಕೇಣ್ ಕನ್ನಡಿ
ಅದನ್ನಾರು ಹೆಕ್ಕಲು ಬಾರಕೇಣ ಕೇಣ ಕನ್ನಡಿ
ನೂರೊಂದು ಗೋಗಂಟೆ ಕೇಣ್ ಕೇಣ್ ಕನ್ನಡಿ
ಬಾಯ್ರಿಗೆ ಕೆರಿಗೆ ಅರಗೀದ್ವಲೆ ಕೇಣ್ ಕೇಣ್ ಕನ್ನಡಿ
ಅದರಲ್ಲೊಂದ್ ದವನ ಹೇಳಿ ತಲೆ ಕೇಣ್ ಕೇಣ್ ಕನ್ನಡಿ
ಹೊರಿದಿದ್ದ ಬಂಜಿ ಕಟ್ಟಿದ ಕೆರಿ ಕೇಣ್ ಕೇಣ್ ಕನ್ನಡಿ
ಕಟ್ಟು ಬಂಜಿ ಕಟ್ಟಿದ ಕೆರಿ ಕೇಣ್ ಕೇಣ್ ಕನ್ನಡಿ
ಅದರ ನೀರ ಕುಡಿಯಲು ಬಾರ ಕೇಣ್ ಕೇಣ್ ಕನ್ನಡಿ
ಬಂಜಿ ಎಂಬ್ಹೆಸರು ತಪ್ಪುನೋಡ ಕೇಣ್ ಕೇಣ್ ಕನ್ನಡಿ
ನಾಗರ ಶಾಪ ತಟ್ಟಿತು ನೋಡ ಕೇಣ್ ಕೇಣ್ ಕನ್ನಡಿ

## ಸಾಮಾಜಿಕ ಹಾಡ್ಗಥೆಗಳು

## ಜಂಗಮದೇವಿ

ತಾಳ್ತಾಳಿ ಸೂರಪ್ಪ ಶೆಟ್ಟರಂಬ್ರ ಜಂಗಮದೇವಿ
ಊಟಕಾರು ಏಳಿನಿ ಸ್ವಾಮಿ ಜಂಗಮದೇವಿ
ಊಟವಾರು ಉಣಕಿದ್ರೆ ದೇವಿ ಜಂಗಮದೇವಿ
ನಾ ಹೇಳಿದ ಪಲ್ಲಿ ಆಗಲೇಬೇಕು ಜಂಗಮದೇವಿ
ಹರಗೀ ಗರಕೆ ನಡೆದಾಳೊ ದೇವಿ ಜಂಗಮದೇವಿ
ಹರಗೀನಾರೂ ತಂದಳು ದೇವಿ ಜಂಗಮದೇವಿ
ಕೊಚ್ಚೀಳು ದೇವಿ ಕೊರೆದೀಳು ದೇವಿ ಜಂಗಮದೇವಿ

ತಾಳ್ತಾಳಿ ಸೂರಪ್ಪ ಶೆಟ್ರರಂಬ್ರ ಜಂಗಮದೇವಿ
ನಾ ಊಟವಾರು ಉಣಕಿದ್ರೆ ಜಂಗಮದೇವಿ
ನಾ ಹೇಳಿದ ಪಲ್ಲಿ ಆಗಲೇಬೇಕು ಜಂಗಮದೇವಿ
ಬದನಿ ಕಾಯಿ ತಂದಳು ದೇವಿ ಜಂಗಮದೇವಿ
ಕೊಚ್ಚೇಳು ದೇವಿ ಕೊರೆದೀಳು ದೇವಿ ಜಂಗಮದೇವಿ
ತಾಳ್ತಾಳಿ ಸೂರಪ್ಪ ಶೆಟರಂಬ್ರ ಜಂಗಮದೇವಿ
ನಾ ಊಟವಾರು ಉಣಕಿದ್ರೆ ಜಂಗಮದೇವಿ
ನಾ ಹೇಳಿದ ಪಲ್ಲಿ ಆಗಲೇಬೇಕು ಜಂಗಮದೇವಿ
ಸೌತಿಕಾಯಿ ತಂದಳು ದೇವಿ ಜಂಗಮದೇವಿ
ಕೊಚ್ಚೇಳು ದೇವಿ ಕೊರೆದೀಳು ದೇವಿ ಜಂಗಮದೇವಿ
ತಾಳ್ತಾಳಿ ಸೂಈರಪ್ಪ ಶೆಟ್ರರಂಬ ಜಂಗಮದೇವಿ
ನೀವೇ ಊಟಕಾದ್ರು ಏಳಿನಿ ಸ್ವಾಮಿ ಜಂಗಮದೇವಿ
ನಾ ಊಟವಾದ್ರೂ ಉಣಕಿದ್ರೆ ಜಂಗಮದೇವಿ
ಮನಸರ ಪಲ್ಲಿ ಆಗಬೇಕು ಜಂಗಮದೇವಿ
ನಿನ್ನ ಅಡೂಕ್ಹೋದ ಮಗನ ಕೆರೆಯೆ ದೇವಿ ಜಂಗಮದೇವಿ
ಅವ್ನ ಕಡದ ಪಲ್ಲೆ ಮಾಡೀರೆ ಜಂಗಮದೇವಿ
ಊಟವಾದ್ರೂ ಮಡ್ತೇನೆ ಅಂದ್ರ ಜಂಗಮದೇವಿ
ಕಣ್ಣಲ್ಲಿ ನೀರು ಹಾಕಲು ಬಾರ ಜಂಗಮದೇವಿ
ಅಷ್ಟೂಮಾತ ಕೇಂಡಳೆ ದೇವಿ ಜಂಗಮದೇವಿ
ಅಡುಕ್ಹೋದ ಮಗನ ಕರದ್ಲ ದೇವಿ ಜಂಗಮದೇವಿ
ಮೆಟ್ಟುಕತ್ತಿ ಇಟ್ಟೇಳು ದೇವಿ ಜಂಗಮದೇವಿ
ತಾಳ್ತಾಳಿ ಸೂರಪ್ಪ ಶೆಟ್ಟರಲ್ಲೇ ಜಂಗಮದೇವಿ
ಊಟಕಾರೂ ಬನ್ನಿ ಸ್ವಾಮಿ ಜಂಗಮದೇವಿ
ಅವ್ರು ಊಟಕಾರು ಬನ್ನಿ ಸ್ವಾಮಿ ಜಂಗಮದೇವಿ
ಅವ್ರು ಊಟಕಾರು ಕೂತಿರಲೇ ಜಂಗಮದೇವಿ
ತಾಳ್ತಾಳಿ ಸೂರಪ್ಪನ ಶೆಟ್ಟರಂಬ್ರ ಜಂಗಮದೇವಿ
ನೀ ಹೆರಗೆ ಹೋಯಿ ಒಳಗೆ ಬಾರೇ ಜಂಗಮದೇವಿ
ನಿನ್ನ ಅಡಕ್ಹೋದ ಮಗನೆ ಕರಿಯೆ ಜಂಗಮದೇವಿ
ಹೆರಗ್ಹೋಯಿ ನಿಂತೀಳ ದೇವಿ ಜಂಗಮದೇವಿ
ಮಗನ್ ಮೂರ್ ಕರಿಯ ಕರೆದಳು ದೇವಿ ಜಂಗಮದೇವಿ
ಅಡಕ್ಹೋದ ಮಗನೇ ಓಡಿ ಬಂದ ಜಂಗಮದೇವಿ
ಒಳಗರು ಮಗನೇ ಓಡಿ ಬಂದ ಜಂಗಮದೇವಿ
ಒಳಗಾರು ಹೋದಳು ದೇವಿ ಜಂಗಮದೇವಿ
ತಾಳಾಳಿ ಸೂರಪ್ಪ ಶೆಟ್ಟರಲ್ಲೇಜಂಗಮದೇವಿ
ನೀ ಹೆರಗೆ ಹೋಯಿ ಒಳಗೆ ಬಾರೇ ಜಂಗಮದೇವಿ
ನಿನ್ನ ಅಡುಕ್ಹೋದ ಮಗನೆ ಕರಿಯೇ ಜಂಗಮದೇವಿ

ಅಡೂಕ್ಹೋದ ಮಗನೇ ಓಡಿ ಬಂದ ಜಂಗಮದೇವಿ
ಒಳಗಾರು ಹೋದಳು ದೇವಿ ಜಂಗಮದೇವಿ
ತಾಳ್ತಾಳೆ ಸೂರಪ್ಪ ಶೆಟ್ಟರಲ್ಲೇ ಜಂಗಮದೇವಿ
ಊಟಕ್ಕೆ ಕೂತಲ್ಲಿಯೇ ಮಾಯವಾರು ಜಂಗಮದೇವಿಮ

## ಜೋಗಿ ಜಂಗುಮಾ

ಇಬ್ಬನಿ ಮಳೆ ಬಂದು ಜಂಗುಮಾ
ಹುಬ್ಬಳ್ಳಿಕೆರೆ ತುಂಬಿ ಜಂಗುಮಾ
ಪ್ಯಾಟಿ ಮುಂದಿನ ಮನಿ ಜಂಗುಮಾ
ರಾಟಿ ಉಂಟು ಕದವಿಲ್ಲ ಜಂಗುಮಾ
ಒಂದ ರಾತ್ರಿ ಉಳ್ದ ಹೋಗೋ ಜಂಗುಮಾ
ನಾ ಜಗ್ಗನ ಮೈನೆರೆದೆ ಜಂಗುಮಾ
ಒಂದ್ ರಾತ್ರಿ ಉಳ್ದ ಹೋಗೋ ಜಂಗುಮಶಾ
ನಿನ ಗಂಡ ಕೇಂಡಿರೇನ್ಹೇಳೂನೆ ಜಂಗುಮಾ
ಗಂಡ ದಂಡೀಗೆ ಹೋಯಿರ ಜಂಗುಮಾ
ನಿನ ಮಾವ ಕೇಂಡೀರನ್ಹೇಳೂನೆ ಜಂಗುಮಾ

ಮಾವ ಮಲ್ಲಾರಕೆ ಹೋಯೀರ ಜಂಗುಮಾ
ನಿನ ಅತ್ತಿ ಸಂತಿಗೆ ಹೋಯಿಳ ಜಂಗುಮಾ
ಕೊಂಡಾಟದ ಮೈದಿನ ಜಂಗುಮಾ
ಚಂಡಾಡುಕೆ ಹೋಯಿದ ಜಂಗುಮಾ
ಒಂದ್ ರಾತ್ರಿ ಉಳ್ದ ಹೋಗ ಜಂಗುಮಾ
ಪಂಚಾಮಿರತ ಅಡ್ಗಿ ಮಾಡ್ತೆ ಜಂಗುಮಾ
ಗಂಡ ಒರ್‍ಗೂ ಮಂಚ ಕೊಡ್ತೆ
ಮನೆಗೆದ್ದೆ ನಡೆದಾನು  ಜಂಗುಮಾ
ಜೋಗಿ ಹೋದ ದಾರಿಯಲ್ಲೆ ಜಂಗುಮಾ
ಹಾವೇ ಅಡ್ಡ ಕಟ್ಟಲೆ ಜಂಗುಮಾ

## ಮಲ್ಲೀಗಿ ರಾಯ

ಒಬ್ಬಳೆ ತಾಯೀಗೇ ಏಗಿಣಿಲೇಗೀಣಿಯೇ
ಒಬ್ಬನೆ ಮಗ ಹುಟ್ಟೆ ಏಗಿಣಿಲೇಗೀಣಿಯೇ
ಅವ್ನಿಗೆ ಲಗ್ಗಣವೇ ಡೀಳ ಏಗಿಣಿಲೇಗೀಣಿಯೇ
ಲಗ್ಗಣದ ಮರುದಿವ್ಸ ಏಗಿಣಿಲೇಗೀಣಿಯೇ

ದಂಡಿನ ವಾಲಿ ಬಂದೀತಂಬ್ರ ಏಗಿಣಿಲೇಗೀಣಿಯೇ
ತಾಯಮ್ಮನ ಕರಿದಾನೆ ಏಗಿಣಿಲೇಗೀಣಿಯೇ
ನಾದಂಡಿಗಾರು ಹೋಗುವೆ ತಾಯೆ ಏಗಿಣಿಲೇಗೀಣಿಯೇ
ನಿನ ಸೊಸಿ ಅಂಬಳವು ಏಗಿಣಿಲೇಗೀಣಿಯೇ
ಬಾಮಿ ನೀರಿಕೆ ಕಳ್ಸಬ್ಯಾಡ ಏಗಿಣಿಲೇಗೀಣಿಯೇ
ಆರು ತಿಂಗ್ಳ ದಂಡು ತಾಯೆ ಏಗಿಣಿಲೇಗೀಣಿಯೇ
ಮೂರು ತಿಂಗ್ಳಿಗೆ ಸವ್ರಿ ಬತ್ತೆ ಏಗಿಣಿಲೇಗೀಣಿಯೇ
ಮಜೂರು ತಿಂಗ್ಳ ದಂಡು ತಾಯೆ ಏಗಿಣಿಲೇಗೀಣಿಯೇ
ಒಂದು ತಿಂಗ್ಳಿಗೆ ಸವ್ರಿ ಬತ್ತೆ ಏಗಿಣಿಲೇಗೀಣಿಯೇ
ಅವ್ವ ಅಕ್ಕೆಂದೇ ಹೇಳಿದಳ ಏಗಿಣಿಲೇಗೀಣಿಯೇ
ಅವ ದಂಡೀಗೆ ನಡೆದಾನೆ ಏಗಿಣಿಲೇಗೀಣಿಯೇ
ನೆರಮನಿಗೆ ನಡಿದಾಳೆ ಏಗಿಣಿಲೇಗೀಣಿಯೇ
ನೆರಮನಿ ಒಳಗೆ ಮಲ್ಲಿಗಿರಾಯ ಏಗಿಣಿಲೇಗೀಣಿಯೇ
ನಮ್ಮನಗಾರೂ ಹ್ವಾಪೋ ಸ್ವಾಮಿ ಏಗಿಣಿಲೇಗೀಣಿಯೇ
ನನ ಗಂಡ ದಂಡೀಗೆ ಹೋಗಿರುವ ಏಗಿಣಿಲೇಗೀಣಿಯೇ
ನಿನ ಅತ್ತಿ ನೋಡಿರೇನ್ಹೇಳುವಳೆ ಏಗಿಣಿಲೇಗೀಣಿಯೇ
ನಾನಾರು ಬರುವುದಿಲ್ಲ ಏಗಿಣಿಲೇಗೀಣಿಯೇ
ನಮ್ಮನಿಗಾರು ಹ್ವಾಪೋ ಸ್ವಾಮೀ ಏಗಿಣಿಲೇಗೀಣಿಯೇ
ಅತ್ತಿ ಏನೂ ಹೇಳೋದಿಲ್ಲ ಏಗಿಣಿಲೇಗೀಣಿಯೇ
ಅತ್ತಿ ಏನು ಹೇಳೂದಿಲ್ಲ ಏಗಿಣಿಲೇಗೀಣಿಯೇ
ಅವ್ವ ಮನಿಗೆ ಕರ್ಕಬಂದ್ಲು  ಏಗಿಣಿಲೇಗೀಣಿಯೇ
ಮೆತ್ತಿನ ಮ್ಯಾನೆ ನಡೆದೀಳಲೆ ಏಗಿಣಿಲೇಗೀಣಿಯೇ
ಗಂಡ ಒರಗೂ ಮಂಚವ ಕೊಟ್ಟು ಏಗಿಣಿಲೇಗೀಣಿಯೇ
ಮಂಚದ ಮೇಲೆ ಒರಗೀರಲೆ ಏಗಿಣಿಲೇಗೀಣಿಯೇ
ದಂಡೀಗ್ಹೋದ ಗಂಡನಿಗೆ ಏಗಿಣಿಲೇಗೀಣಿಯೇ
ಕೆಟ್ಟ ಕೆಟ್ಟ ಸಪನು ಬಿದ್ದೊ ಏಗಿಣಿಲೇಗೀಣಿಯೇ
ಗಂಡುಲಿ ಹೆಣ್ಣುಲಿ ಸಪ್ನ ಬಿದ್ದು ಏಗಿಣಿಲೇಗೀಣಿಯೇ
ಅವ್ನೀಗ್ ಆರೂ ತಿಂಗ್ಳ ದಂಡಲೆ ಏಗಿಣಿಲೇಗೀಣಿಯೇ
ಅರ್ಧಗಳಿಗಿ ಸವ್ರಿದ್ನಲೆ ಏಗಿಣಿಲೇಗೀಣಿಯೇ
ಮೂರು ತಿಂಗಳ ದಾರಿಯಲೇ ಏಗಿಣಿಲೇಗೀಣಿಯೇ
ಮೆತ್ತಿನ ಮ್ಯಾನೆ ನಡೆದನಲೆ ಏಗಿಣಿಲೇಗೀಣಿಯೇ
ಗಂಡುಲಿ ಹೆಣ್ಣುಲಿ ಒರಗಿದುವಲೆ ಏಗಿಣಿಲೇಗೀಣಿಯೇ
ಕೋವಿಗು ಮದ್ದು ತುಂಬಿದ ಏಗಿಣಿಲೇಗೀಣಿಯೇ
ಗಂಡುಲಿಹೆಣ್ಣುಲಿ ಹೊಡೆದನಲೆ ಏಗಿಣಿಲೇಗೀಣಿಯೇ

# ಉತ್ತರದೇವಿ

ಅತ್ತಿಗೆ ಮೈದುನ ಕೂತು ಪಗಡಿ ಆಡ್ವಾಗ
ಪುರುಷ ಪಲಗುಣರು ಬರುವಾರು
ಪುರುಷ ಪಲಗುಣರು ಬಂದು ನಿಂತು ನುಡಿದಾರು
ಪಗಡಿ ಆಡುವ ಬಗೆ ಹೇಂಗೆ
ಪುರುಷ ಪಲಗುಣರು ಬಂದು ನಿಂತ ಸಮ್ಯದಲ್ಲೆ
ಬಾಯರಿಗ್ಹಾಲ ಕೊಡುಕ್ಹೋದೇ
ನೀ ಕೊಟ್ಟ ಹಾಲ ಮುಟ್ಟುವ ಮನಗಲ್ಲ
ಮುಟ್ಟಿದ ಬಾ ಹುಂತದ ಸರುಪನ
ಸರುಪನೆಂದರೆ ಸ್ವಾಮೀ ಕಂಡರೆ ಹೆದರೂವೆ
ನಾ ಹ್ಯಾಂಗ್ ಮುಟ್ಟಿ ಬರುವುದು
ನೀ ಮಾಡಿದ ಸತ್ಯ ನಿನ್ಹತ್ರ ಇದ್ರೆ
ಮುಟ್ಟಿ ಬಾ ಹುಂತದ ಸರುಪನ
ಇಷ್ಟೊಂದ ಮಾತ ಕೇಳದ್ದಳುತ್ತರದೇವಿ
ಹ್ವಾದಳು ಮಾವಯ್ನ ಅರಮನಿಗೆ
ಎಂದೂ ಬಾರದ ಸೌಬದ್ರಿ ಇಂದೇನು ಬಂದೀಯ
ಬಂದ ಕಾರಣನೆ ಒದಗ್ಹೇಳು
ಎಂದೂ ಬಂದೆ ಒಂದು ಹೊಸ ಸುದ್ದಿ ಮಾವಯ್ಯ
ನಿಮ್ಮಗ ಹೇಳುವ ನುಡಿ ಕೇಳು
ಅತ್ತಿಗೆ ಮೈದುನಕೂತು ಪಗಡಿ ಆಡ್ವಾಗ
ಪುರುಷ ಪಲಗುಣರು ಬಂದ ನಿಂತ್ ನುಡಿದರೆ
ಪಗಡಿ ಆಟದ ಬಗಿ ಹೆಂಗೆ
ನೀ ಕೊಟ್ಟ ಹಾಲ ನಾ ಕುಡಿಯಕಿದ್ರೆ
ಮುಟ್ಟಿ ಬಾ ಹುಂತದ ಸರುಪನ
ನೀ ನುಡಿದ ಸತ್ಯ ನಿನ್ಹತ್ರ ಇದ್ಹಣ್ಗೆ
ಮಟ್ಟಿ ಬಾ ಹುಂತ ಸರ್ಪನ
ಇಷ್ಟೊಂದ ಮಾತ ಕೇಂಡಳೆ ಉತ್ತರದೇವಿ
ನಡೆದಾಳ ಅಣ್ಣಯ್ಯ ಅರಮನಿಗೆ
ಹಿಂದೆ ಸತ್ತುಗಿ ಇಲ್ಲ ಮುಂದೆ ದೀವ್ಗಿಗೆ ಇಲ್ಲ
ಉತ್ರದೇವಿ ಬಿಸಲಲ್ಲೆ ಬರುವಾಳೆ
ತೊತ್ತೈರೆ ಗೌಂಡರೆ ಎತ್ತೆಲ್ಲ ಹೋದಿರಿ
ಪಾದಕು ತೋಳೆಸೀರಿ ಪಾವ್ದದಲ್ಲೊರಸೀನಿ
ತೂಗುಮಂಚದಲಿ ಕುಳಿ ಹೇಳಿ
ಪಾದ ತೊಳೆಸುದು ಬ್ಯಾಡ ಅಣ್ಣಯ್ಯ
ನಾ ಕೂಪೆ ಮಣ್ಣ ಜಗಲೀಲಿ ಅಣ್ಣಯ್ಯ

ನಿನ ಬಾವ ಹೇಳಿದ ನುಡಿಕೇಳು
ಅತ್ತಿಗೆ ಮೈದುನ ಕೂತು ಪಗಡಿ ಆಡ್ವಾಗ
ಪುರುಷ ಪಲಗುಣರು ಬರುತಾರೆ
ಪುರುಷ ಪಲಗುಣರು ಬಂದ ನಿಂತ್ ನುಡಿದಾರೆ
ಪಗಡಿ ಆಟದ ಬಗಿ ಹೆಂಗೆ
ನೀ ಕೊಟ್ಟ ಹಾಲ ನಾ ಕುಡಿಯಕಿದ್ರೆ
ಮುಟ್ಟೆ ಬಾ ಹುಂತದ ಸರುಪನ
ಸರುಪನೆಂದರೆ ತಂಗಿ ಯಾರ್ ಕಂಡ್ರೂ ಹೆದರೂರು
ನೀ ಹೆಂಗೆ ಮುಟ್ಟಿ ಬರತೀಯ ಉತ್ತರದೇವಿ
ಹಾಲ್ಗಂಜಿ ಉಂಡು ಮನೀಗಿರು ಬಾವ್ನವರು
ಸಿಟ್ಟು ಸಂತರಿಸಿ ಬರುವಾರೆ
ಅಷ್ಟೊಂದ ಮಾತ ಕೇಂಡಳೆ ಉತ್ತರದೇವಿ
ನಡೆದಾಳು ಹರಿವ ಜಲಧೀಗೆ ಉತ್ತರದೇವಿ
ಮಿಂದು ಕಿರುಜಡೆಯ ಸೆಳಿದಾಳು ಉತ್ತರದೇವಿ
ಹೋದಾಳು ಹುಂತಿನಬುಡಕಾಗಿ
ಮ್ಯಾದುಲಿ ಸೆರಗ್ಹಾಸಿ ಶರಣೆಂದು
ನಾ ಮಾಡಿದ ಸತ್ಯ ನನ್ನಲ್ಲಿ ಇದ್ದರೆ
ಬಾರಪ್ಪ ನಾಗಪ್ಪ ಸೆರಗೀಗೆ
ಅಷ್ಟೊಂದ ಮಾತ ಕೇಳಿತೆ ಮಣಿನಾಗ
ಬೋರ್ ಗುಟ್ಕ ಹೆರಗೆ ಬಂದೀತ ಮಣಿನಾಗ
ಒಂದು ಸೆರಗಿನಲೆ ಒರಗೀತ ಉತ್ತರದೇವಿ
ಕ್ಯಾದ್ಗಿ ಹೂಡು ಮುಡಿದಂಗೆ ಮುಡಿವಾಳು
ಕ್ಯಾದ್ಗೀ ಹೂ ಹಾಂಗೆ ಮುಡಿದು ಮುಡಿಯಲ್ಲಿಟ್ಟು
ಬಂದಳು ತನ್ನ ಅರಮನಿಗ
ಹಸಿಯೆ ನಾಲಿಯೆಒರೆ ಹುಸಿಯಾಗದೆ ಹೇಳೀರಿ
ನಾ ಹೊತ್ತ ಹೊರೆಯ ಇಳಿಸೀನಿ
ತೊತ್ತೈರೆ ಗೌಂಡರೆ ಎತ್ತೆಲ್ಲ ಹೋದಿರಿ
ಸತಿ ಹೊತ್ತ ಹೊರೆಯ ಇಳಿಸೀನಿ
ತ್ವತ್ತೇರು ಗೌಂಡೇರು ಇಳಿಸುವ ಹೊರೆಯಲ್ಲ
ದೊರೆ ಬಂದು ಹೊರೆಯ ಇಳಿಸೀನಿ
ಅಂತ್ರಗಾರನಗ ಮಗಳು ಮಂತ್ರಗಾರನ ಸೊಸೆ
ಹಾವಾಡಿಗನ ಕಿರಿತಂಗಿ ಉತ್ತರದೇವಿ
ತಂತ್ರದಿಂದ್ಹಾವ ಹಿಡಿದೀಯ ಉತ್ತರದೇವಿ
ಬಿಟ್ಹಾಕಿ ಬಾ ಹುಂತಿನ ಬಳಿಗ್ಹೋಯಿ
ನಾಗಪ್ಪನಾದರೆ ಹೋಗಪ್ಪ ಹುಂತಿಗೆ

ಬಾರಪ್ಪ ಸುಗ್ಗಿ ಬೆಳಿ ಮುಂದೆ ನಿನಗಂದು
ನಾಗ ಮಂಡಲವ ಕೊಡಿಸುವೆ

## ಕೊರತಿ - ಕೊರಮ

ಕೊರತಿ ಕೊರಮ ಇಬ್ಬರೂ ತಾನ್ ಶಿವನೆ ತಂದಾನ
ಬೀಳು ಬೆತ್ತಕ್ಕೆ ಹೊರಟೀರು ತಾನ್ ಶಿವನೆ ತಂದಾನ
ಅರ್ಧದೂರ ಹೋಯೀರು ತಾನ್ ಶಿವನೆ ತಂದಾನ
ಅವ್ಳ ಹೊಟ್ಟಿ ನೋವ್ ಅಂದೀಳು ತಾನ್ ಶಿವನೆ ತಂದಾನ
ಕೊಪ್ಪ ಕಾರೂ ಹೋಗೆಂದ ತಾನ್ ಶಿವನೆ ತಂದಾನ
ಕೊಪ್ಪಕಾರೂ ಬಂದೀಳು ತಾನ್ ಶಿವನೆ ತಂದಾನ
ನೆರಿಮನಿ ಗೊಲ್ಲನ ಕರೆದೀಳು ತಾನ್ ಶಿವನೆ ತಂದಾನ
ಅಕ್ಕಿ ಯಾರು ನೆನೆಸೀಳು ತಾನ್ ಶಿವನೆ ತಂದಾನ
ಕೋಳಿ ಗೂಡಿಗ್ ಕೈ ಹಾಕ್ಳು ತಾನ್ ಶಿವನೆ ತಂದಾನ
ಕೋಳಿ ಮ್ಯಾಳಿ ತಿಪ್ಪೀಳು ತಾನ್ ಶಿವನೆ ತಂದಾನ
ಕೋಳಿ ಪದಾರ್ಥ ಮಾಡೀಳ ತಾನ್ ಶಿವನೆ ತಂದಾನ
ರೊಟ್ಟಿಯಾರು ಮಾಡೀಳು ತಾನ್ ಶಿವನೆ ತಂದಾನ
ಬುತ್ತಿ ರೊಟ್ಟಿ ಕಟ್ಟೀಳು ತಾನ್ ಶಿವನೆ ತಂದಾನ
ನೆರಿಮನಿ ಗೊಲ್ಲನ ಕರ್‍ಕಂಡ್ ತಾನ್ ಶಿವನೆ ತಂದಾನ
ದಾರಿ ಹಿಡ್ದು ನಡೆದೀಳು ತಾನ್ ತಾನ್ ಶಿವನೆ ತಂದಾನ
ಮಕ್ಕಳೆಲ್ಲ ಕೂಗೀವು ತಾನ್ ಶಿವನೆ ತಂದಾನ
ಮಕ್ಕಳೆಲ್ಲ ಓಡೀವು ತಾನ್ ಶಿವನೆ ತಂದಾನ
ಕಲ್ಲು ಮುಳ್ಳು ಬಾಚಿಟ್ಟು ತಾನ್ ಶಿವನೆ ತಂದಾನ
ನೆರ್‍ಮನಿ ಗೊಲ್ಲನ ಸಂಗಡ್ವೆ ತಾನ್ ಶಿವನೆ ತಂದಾನ
ಒಂದ್ ಗುಡ್ಡಿ ಹತ್ತಿರು ತಾನ್ ಶಿವನೆ ತಂದಾನ
ಒಂದ್ ಗುಡ್ಡಿ ಇಳಿದೀರು ತಾನ್ ಶಿವನೆ ತಂದಾನ
ಮಾಗುಡ್ಡಿ ಮುರಕೀಲೆ ತಾನ್ ಶಿವನೆ ತಂದಾನ
ಕಂಬಳಿ ಹಾಸಿ ಕೂತಿರ್ ತಾನ್ ಶಿವನೆ ತಂದಾನ
ಬೀಳೀಗ್ಹೋದ ಗಂಡ ಬಂದ ತಾನ್ ಶಿವನೆ ತಂದಾನ
ಮಕ್ಕಳನ್ನು ಕರೆದನು ತಾನ್ ಶಿವನೆ ತಂದಾನ
ಅಬ್ಬಿ ಎಲ್ಲಿಗ್ ಹೋಯಿಳ್ ಮಕ್ಳೆ ತಾನ್ ಶಿವನೆ ತಂದಾನ
ನೆರ್‍ಮನಿ ಗೊಲ್ಲನ ಕರೆದಿದ್ಲ ತಾನ್ ಶಿವನೆ ತಂದಾನ
ಅಕ್ಕಿಯಾರು ನೆನೆಸೀಳ್ ತಾನ್ ಶಿವನೆ ತಂದಾನ
ಕೋಳೀಗುಡಿಗ್ ಕೈ ಹಾಕ್ಳು ತಾನ್ ಶಿವನೆ ತಂದಾನ
ಕೋಳಿ ಮ್ಯಾಲಿ ತಿಪ್ಪೀಳು ತಾನ್ ಶಿವನೆ ತಂದಾನ

ಕೋಳಿ ಪದಾರ್ಥ ಮಾಡೀಳ ತಾನ್ ಶಿವನೆ ತಂದಾನ
ರೊಟ್ಟಿಯಾರು ಮಾಡೀಳು ತಾನ್ ಶಿವನೆ ತಂದಾನ
ಬುತ್ತಿ ರೊಟ್ಟಿ ಕಟ್ಟೀಳು ತಾನ್ ಶಿವನೆ ತಂದಾನ
ನೆರಿಮನಿ ಗೊಲ್ಲನ ಕರ್ಕಂಡ ತಾನ್ ಶಿವನೆ ತಂದಾನ
ದಾರಿ ಹಿಡ್ದು ನಡೆದೀಳು ತಾನ್ ಶಿವನೆ ತಂದಾನ
ಮಕ್ಕಳೆಲ್ಲ ಕೂಗೀವು ತಾನ್ ಶಿವನೆ ತಂದಾನ
ಮಕ್ಕಳೆಲ್ಲ ಓಡಿವು ತಾನ್ ಶಿವನೆ ತಂದಾನ
ಕಲ್ಲು ಮುಳ್ಳು ಬಾಚೆಟ್ಟು ತಾನ್ ಶಿವನೆ ತಂದಾನ
ನೆರ್ಮನಿ ಗೊಲ್ಲನ ಸಂಗಡ್ಲೆ ತಾನ್ ಶಿವನೆ ತಂದಾನ
ಒಂದ್ ಗುಡ್ಡಿ ಹತ್ತೀರು ತಾನ್ ಶಿವನೆ ತಂದಾನ
ಒಂದ್ ಗುಡ್ಡಿ  ಇಳಿದೀರು ತಾನ್ ಶಿವನೆ ತಂದಾನ
ಮಾಗುಡ್ಡಿ ಮರಕೀಲೆ ತಾನ್ ಶಿವನೆ ತಂದಾನ
ಕಂಬಳಿ ಹಾಸಿ ಕೂತಿರ್ ತಾನ್ ಶಿವನೆ ತಂದಾನ
ಕೊರಮ ಕತ್ತಿ ತೆಕ್ಕಂಡ ತಾನ್ ಶಿವನೆ ತಂದಾನ
ಒಂದ್ ಗುಡ್ಡಿ ಹತ್ತಿದ ತಾನ್ ಶಿವನೆ ತಂದಾನ
ಒಂದ್ ಗುಡ್ಡಿ ಇಳಿದೀರು ತಾನ್ ಶಿವನೆ ತಂದಾನ
ಮಾಗುಡ್ಡಿ ಮರಕೀಲೆ ತಾನ್ ಶಿವನೆ ತಂದಾನ
ಕೊರತಿ ಗೊಲ್ಲ ಇದ್ದೀರ ತಾನ್ ಶಿವನೆ ತಂದಾನ
ಕಂಬಳಿ ಹಾಸಿ ಕೂತಿರ್ ತಾನ್ ಶಿವನೆ ತಂದಾನ
ಕೊರಮ ಕತ್ತಿ ಹಿಡ್ಕಂಡ ತಾನ್ ಶಿವನೆ ತಂದಾನ
ಕೊರತಿ ರುಂಡ ಹಾರ್ಸಿದ ತಾನ್ ಶಿವನೆ ತಂದಾನ
ಮಾಂಸವನ್ನೆ ಬಿಡಿಸೀದ ತಾನ್ ಶಿವನೆ ತಂದಾನ
ಮಾಂಸವನ್ನೆ ಕಟ್ಟೀದ ತಾನ್ ಶಿವನೆ ತಂದಾನ
ಹೆಂಡ್ತಿ ಮಗನಿಗೆ ನಡೆದೀದ ತಾನ್ ಶಿವನೆ ತಂದಾನ
ಅವ್ನ ಅತ್ತಿ ಅಂಬುವಳ ತಾನ್ ಶಿವನೆ ತಂದಾನ
ಎಂದೂ ಬಾರದ ಅಳಿಯನೇ ತಾನ್ ಶಿವನೆ ತಂದಾನ
ಇಂದೇನು ಬಂದೀಯ ತಾನ್ ಶಿವನೆ ತಂದಾನ
ಅಳೀಯ ಅಂಬವ ಹೇಳಿದ ತಾನ್ ಶಿವನೆ ತಂದಾನ
ನಾ ಹಾದಿ ಮೇಲ್ ಬರುತ್ತಿದ್ದೆ ತಾನ್ ಶಿವನೆ ತಂದಾನ
ಹಂದಿ ಮಾಂಸ ಮಾರ್ತಿದ್ದೋ ತಾನ್ ಶಿವನೆ ತಂದಾನ
ಅದನ್ಆರು ತಕ ಬಂದೆ ತಾನ್ ಶಿವನೆ ತಂದಾನ
ಅದ್ರ ಪದಾರ್ಥ ಮಾಡೆಂದ ತಾನ್ ಶಿವನೆ ತಂದಾನ
ಅದ್ರ ಪದಾರ್ಥ ಮಾಡೀಕೆ ತಾನ್ ಶಿವನೆ
ಊಟಕ್ಕಾರೂ ಎಳಂದ್ಲ ತಾನ್ ಶಿವನೆ ತಂದಾನ
ನನ್ನ ಹೊಟ್ಟೆ ನೋವೆಂದ ತಾನ್ ಶಿವನೆ ತಂದಾನ
ನೀವಾರೂ  ಊಟ ಮಾಡೀನೀ ತಾನ್ ಶಿವನೆ ತಂದಾನ

ನಾ ಕಡಿಗ್ ಉಂತೆಂದ ತಾನ್ ಶಿವನೆ ತಂದಾನ
ನಿಮ್ಮ ಮಗಳ ಮಾಂಸವೇ ತಾನ್ ಶಿವನೆ ತಂದಾನ
ನೀವಾರೂ ತಿಂದ್ರೆಂದ ತಾನ್ ಶಿವನೆ ತಂದಾನ
ಮನೀಗ ಓಡಿ ಬಂದೀದ ತಾನ್ ಶಿವನೆ ತಂದಾನ

## ಕಂಪಲು ರಾಯ

ಅರಮನೆಯಲಿ ಕೂತಿದ ಕಂಪಲು ರಾಯ
ಮಾ ಬೇಸರಾದವು ಕಂಪಲು ರಾಯ
ಹಕ್ಕಿ ಬ್ಯಾಟಿಗೆ ಹೊರಟಿದ ಕಂಪಲು ರಾಯ
ಚಕ್ತಾರಿ ಹರಳ ತೆಗೆದಿದ ಕಂಪಲು ರಾಯ
ಅಂಬು ಬಿಲ್ಲು ತೆಗೆದಿದ ಕಂಪಲು ರಾಯ
ಹಕ್ಕಿ ಬ್ಯಾಟಿಗ್ಹೋರಟಿದ ಕಂಪಲು ರಾಯ
ಎಲ್ಲೆಲ್ಲಿ ತಿರುಗೀರು ಕಂಪಲು ರಾಯ
ಹಕ್ಕಿ ಪಕ್ಷಿ ಹೊಳಿಲಿಲ್ಲ ಕಂಪಲು ರಾಯ
ಹಸು ಬಾಯ್ರು ಜೊರಾದೋ ಕಂಪಲು ರಾಯ
ಮಾ ದೊಡ್ಡ ಮದಗವೆ ಕಂಪಲು ರಾಯ
ನೀರಿನ ನೆರಳಲ್ಲಿ ಕಂಪಲು ರಾಯ
ಎರಡು ಕಾಂಬ್ಳಿ ಹಕ್ಕಿ ಕುಂತಿದ್ದೊ ಕಂಪಲು ರಾಯ
ಅಂಬು ಬಿಲ್ಲು ತೆಗೆದನೆ ಕಂಪಲು ರಾಯ
ಚಕ್ತಾರಿ ಹರಳ ತೆಗೆದನೆ ಕಂಪಲು ರಾಯ
ಹಕ್ಕಿಗೊಮ್ಮೆ ಹೊಡೆದನೆ ಕಂಪಲು ರಾಯ
ತಡೆ ತಡೆ ನನ್ನ ಹೊಡಿ ಬೇಡ ಕಂಪಲು ರಾಯ
ತೆಂಖಿನಸಾಗರ ಸೌಭದ್ರಿ ಕಂಪಲು ರಾಯ
ಅವಳನ್ನಾರೂ ತಂದೀರೆ ಕಂಪಲು ರಾಯ
ನಿನಗೆ ತಲಿಬಾಂಗೀ ಕೊಡ್ತೇನೆ ಕಂಪಲು ರಾಯ
ಹಕ್ಕಿ ಭಾಷಿ ಕೊಟ್ಟಿದೆ ಕಂಪಲು ರಾಯ
ಅಕ್ಕನರ ಮನೆಗೆ ನಡೆದನೆ ಕಂಪಲು ರಾಯ
ಎಂದು ಬಾರದಿದ್ದ ತಮ್ಮಯ್ಯ ಕಂಪಲು ರಾಯ
ಇಂದೇನ ಬಂದೀಯ ಕಂಪಲು ರಾಯ
ನಿನ ಸರುಚೆನ್ನು ಕೊಡಕ್ಕ ಕಂಪಲು ರಾಯ
ನಿನ್ನ ಸರುಪಟ್ಟಿ ಕೊಡಕ್ಕ ಕಂಪಲು ರಾಯ
ತೆಂಕಿನ ಸಾಗರಕ್ಕೆ ಹೋದರೆ ತಮ್ಮ ಕಂಪಲು ರಾಯ
ಕರಿನ ಕೊಚ್ಲಾಯಿ ಬಿದ್ದಿರಂಬ್ರ ಕಂಪಲು ರಾಯ
ನೀನಾರು ಹೋಪುದು ಬ್ಯಾಡ ಕಂಪಲು ರಾಯ
ಅಷ್ಟು ಮಾತ ಕೇಳಲಿಲ್ಲ ಕಂಪಲು ರಾಯ

ನಿನ್ನ ಸರುಪಟ್ಟಿ ಕೊಡಕ್ಕ ಕಂಪಲು ರಾಯ
ಅವ್ವನ್ನಾರು ಕರ್ಕ ಬತ್ತೆ ಕಂಪಲು ರಾಯ
ಸರ್ವ ಪಟ್ಟಿ ಕೊಟ್ಟಾಳೆ ಕಂಪಲು ರಾಯ
ಅದನ್ನೆಲ್ಲ ತೆಕ್ಕಂಡ ಕಂಪಲು ರಾಯ
ಕುದುರೆ ಮ್ಯಾನೆ ನಡೆದನೆ ಕಂಪಲು ರಾಯ
ತಂಕಿನ ಸಾಗರ ಗಡಿಗ್ ಹೋದ ಕಂಪಲು ರಾಯ
ಸರುಚೆನ್ನು ಹಾಕಿದ ಕಂಪಲು ರಾಯ
ಸರುಪಟ್ಟಿ  ಉಟ್ಟಿದ ಕಂಪಲು ರಾಯ
ಹೆಣ್ಣಿನ ರೂಪ ಮಾಡ್ಕಂಡ ಕಂಪಲು ರಾಯ
ಅಜ್ಜಿ ಮನಿಗೆ ನಡಿದನೆ ಕಂಪಲು ರಾಯ
ನಿನಗೆಲ್ಲಾರು ಅಯ್ತುಕೇಂತು ಕಂಪಲು ರಾಯ
ನನಗೆ ಬಡಗಿನ ರಾಜ್ಯ ಆಯ್ತುಂದ ಕಂಪಲು ರಾಯ
ಅಜ್ಜಿ ಮನೆಯಲ್ ಉಳ್ಕಂಡ ಕಂಪಲು ರಾಯ
ಅಜ್ಜಿ ಹೂಗೆಲ್ಲ ಕೊಯ್ಕಬಂತ್ ಕಂಪಲು ರಾಯ
ಹೂಗೆಲ್ಲ ಕಟ್ಟತಿತ್ತೆ  ಕಂಪಲು ರಾಯ
ಇದ ಎಲ್ಲಿಗ್ಹೋಪು ಹೂಗಜ್ಜಿ ಕಂಪಲು ರಾಯ
ತೆಂಕ್ಲ ಸಾಗರ ಸೌಭದ್ರಿ  ಕಂಪಲು ರಾಯ
ಆವ್ವ ಮನೀಗ್ ಹೋಪ್ಹೂಗ ಕಂಪಲು ರಾಯ
ಮಾಚಂದವಾಗಿತ್ತು ಕಂಪಲು ರಾಯ
ಮಂಡಿಕೂದ್ಲ ತೆಗೆದಿದ ಕಂಪಲು ರಾಯ
ಮೂರ್ ಸಿಗ್ಗ ಮಾಡಿದ ಕಂಪಲು ರಾಯ
ಹೂಗನೆಲ್ಲ ಕಟ್ಟಿದ ಕಂಪಲು ರಾಯ
ಮಾ ಚಂದವಾಯ್ತು ಕಂಪಲು ರಾಯ
ಅಜ್ಜಿ ಹೂಗಿನ ಚಂಡಿ ತಕ್ಕಂಡ್ಲ ಕಂಪಲು ರಾಯ
ತೆಂಕಿನ ಸಾಗರಕೆ ನಡೆದೀಳು ಕಂಪಲು ರಾಯ
ತೆಂಕಿನ ಸಾಗರ ಸೌಭದ್ರಿ ಕಂಪಲು ರಾಯ
ಹೂಗಿನ್ ಚಂಡಿ ಸೌಭದ್ರಿ ಕಂಪಲು ರಾಯ
ಇದ ಯಾರ್ ಕಟ್ಟಿದ ಹೂಗಜ್ಜಿ ಕಂಪಲು ರಾಯ
ಮಾ ಚಂದ ಆಗಿತ್ತು ಕಂಪಲು ರಾಯ
ಬಡ್ಗಿನಸಾಗರದ ಮೊಮ್ಮಗಳು ಕಂಪಲು ರಾಯ
ಇಂದವಳು ಬಂದೀಳ ಕಂಪಲು ರಾಯ
ಅವಳ್ ಕಟ್ಟಿದ ಹೂ ಮಗಳೆ ಕಂಪಲು ರಾಯ
ಎರಡ್ಸಿದ್ದಕ್ಕಿ ಕೊಟ್ಟಳೆ ಕಂಪಲು ರಾಯ
ಬಡ್ಗನ ಸಾಗರದ ಮಮ್ಮಗಳೆ ಕಂಪಲು ರಾಯ
ನಾನಾರು ಕಾಣಬೇಕು ಕಂಪಲು ರಾಯ
ಆವ್ವನ್ನಾರು ಕರ್ಕಂಬಾರೆ ಕಂಪಲು ರಾಯ

ನಾಳಿಗ್ಹೊಗ ತರುವಾಗೆ ಕಂಪಲು ರಾಯ
ಮಮ್ಮಗಳನ್ನು ಕರ್ಕಂಬಾರೆ ಕಂಪಲು ರಾಯ
ಅಕ್ಕೆಂದು ಹೇಳ್ತಜ್ಜಿ ಕಂಪಲು ರಾಯ
ಮನಿಗಾರೂ ಬಂದೀತೆ ಕಂಪಲು ರಾಯ
ಮೊಮ್ಮಗಳ ಕರೆದೀತೆ ಕಂಪಲು ರಾಯ
ತೆಂಕಿನ ಸಾಗರ ಸೌಭದ್ರಿ ಕಂಪಲು ರಾಯ
ನಿನ್ನಾರು ಬಪ್ಕೇಳ್ತ ಕಂಪಲು ರಾಯ
ತೆಂಕಿನ ಸಾಗರ ಸೌಭದ್ರಿ ಕಂಪಲು ರಾಯ
ಅವ್ಳ ಪಗಡಿ ಆಟೋ ಹೆಂಗೆ ಕಂಪಲು ರಾಯ
ಬೆಕ್ಕಿನ ತಲಿಮ್ಯಾಲೆ ದೀಪ ಇಟ್ಟಿಕೆ ಕಂಪಲು ರಾಯ
ಅವ್ಳ ಪಗ್ದಿ ಆಡ್ತ್ಲ ಮಗಳೆ ಕಂಪಲು ರಾಯ
ಅವಳಾಟದಲ್ಲಿ ಮಗಳೆ ಕಂಪಲು ರಾಯ
ಯಾರ್ಯಾರು ಗೆದ್ದರಿಲ್ಲ ಕಂಪಲು ರಾಯ
ಈ ಆಟ ಆಡುದು ಬ್ಯಾಡ ಕಂಪಲು ರಾಯ
ಮೂರ್ ಎಲಿಯ ಹಿಡಿದೀದ ಕಂಪಲು ರಾಯ
ಕಿಸಿ ಒಳಗಎ ಇಟ್ಟೀದ ಕಂಪಲು ರಾಯ
ಅಜ್ಜಿ ಮಮ್ಮಗಳು ಕೂಡೀಕೆ ಕಂಪಲು ರಾಯ
ತೆಂಕಿನ ಸಾಗರಕೆ ನಡಿದಾರೆ ಕಂಪಲು ರಾಯ
ಸೌಭದ್ರಿ ಅಂಬವಳೆ ಕಂಪಲು ರಾಯ
ನಿನ್ನ ಮಮ್ಮಗಳು ಇವ್ಳೇಯ ಕಂಪಲು ರಾಯ
ಆಟ ಆಡುವಾ ಕೇಳೀಳು ಕಂಪಲು ರಾಯ
ಬೆಕ್ಕಿನಾರು ತಕಬಂದು ಕಂಪಲು ರಾಯ
ಬೆಕ್ಕಿನ ತಲಿಮ್ಯಾಲೆ ದೀಪವೇ ಕಂಪಲು ರಾಯ
ಒಂದಾಟ ಆಡೂಕು ಕಂಪಲು ರಾಯ
ಒಂಡಿಲಿಯ ಬಿಟ್ಟೀದ ಕಂಪಲು ರಾಯ
ಬೆಕ್ಕಿಳಕಂಡ ಓಡಿ ಹೋಯ್ತು ಕಂಪಲು ರಾಯ
ಏ ಸುಟ್ ಬೆಕ್ಕೆ ಕಂಪಲು ರಾಯ
ಹಿಂಗ್ಯಕೆ ಮಾಡ್ತೆ ಕೇಂಡ್ಯ ಕಂಪಲು ರಾಯ
ಮತ್ತೊಂದ ಸರಿ ಎಳ್ಕ ಬಂದ್ಲ ಕಂಪಲು ರಾಯ
ಮತ್ತೂ ದೀಪ ಇಟ್ಟಳೆ ಕಂಪಲು ರಾಯ
ಮತ್ತೊಂದ್ ಎಲಿಯ ಬಿಟ್ಟನೆ ಕಂಪಲು ರಾಯ
ಏ ಸುಟ್ ಬೆಕ್ಕೆ ಕಂಪಲು ರಾಯ
ಹಿಂಗ್ಯಾಕೆ ಮಾಡ್ತೆ ಕೇಂಡ್ಯ ಕಂಪಲು ರಾಯ
ಮತ್ತೂ ದೀಪ ಇಟ್ಟಳೆ ಕಂಪಲು ರಾಯ
ಇನ್ನೋಂದ್ ಎಲಿಯ ಬಿಟ್ಟನೆ ಕಂಪಲು ರಾಯ
ಬೆಕ್ಕಿಳ್ಕಂಡ್ ಓಡಿ ಹೋಯ್ತು ಕಂಪಲು ರಾಯ

ಆಟದಲ್ಲಿ ಗೆದ್ದನೆ ಕಂಪಲು ರಾಯ
ಸೌಭದ್ರಿ ಕರ್ಕಂಡ ಕಂಪಲು ರಾಯ
ಅಜ್ಜಿ ಮನಿಗೆ ಬಂದೀದ ಕಂಪಲು ರಾಯ
ಕುದ್ರಿಮ್ಯಾನೆ ಹತ್ತೀದ ಕಂಪಲು ರಾಯ
ಅಕ್ಕನ ಮನಿಗೆ ಬಂದರೆ ಕಂಪಲು ರಾಯ
ಬಾಳಿ ತಪ್ಲೀಗ್ ನಿರ್ ಹೊಯ್ದೀಳು ಕಂಪಲು ರಾಯ
ಹಕ್ಕಿ ಬುಡಕೆ ನಡೆದನೆ ಕಂಪಲು ರಾಯ
ಹಕ್ಕಿ ಬಾಂಗಿ ತಲಿಕೊಟ್ಟು ಕಂಪಲು ರಾಯ
ಹಕ್ಕಿನವನು ಹೊಡ್ಕ ಬಂದ ಕಂಪಲು ರಾಯ

## ಈಸೂರಯ್ಯ

ಕೊಲ್ಲೂರ ತಳದಿಂದ ಕೊಡಸೀಯ ಪುರದಿಂದ ತಾನು ತಂದನಿಯೆ
ಅತ್ತಿಗೆ ರೂಡಿಯಂಗೆ ಇರುಳೆದ್ದು ತಾನು ತಂದನಿಯೆ
ಅತ್ತಿಗಿ ಅರಮನಿಗೆ ಬರುವನು ತಾನು ತಂದನಿಯೆ
ಅತ್ತಿಗಿ ಮೂರ್ ಕರಿಯೆ ಕರೆವನು ತಾನು ತಂದನಿಯೆ
ಅತ್ತಿಗೆ ಮೂರ್ ಕರಿಯೆ ಏನೆಂದೆ ಕರೆವನೇ ತಾನು ತಂದನಿಯೆ
ಸಂಶಿಲ್ಲದೆ ಕದವ ತೆರಿ ಎಂದನು ತಾನು ತಾನು ತಂದನಿಯೆ
ನಾ ಕದು ತೆರಿಕಿದ್ರೆ ನೀ ಒಳ ಬರಬೇಕಿದ್ರೆ ತಾನು ತಂದನಿಯೆ
ಈಗಿಗ ನೆಟ್ಟ ಹೊಸ ಹೂಗ ತಂದರೆ ತಾನು ತಂದನಿಯೆ
ಸಂಶಿಲ್ಲದೆ ಕದವ ತೆರೆವೆನು ತಾನು ತಂದನಿಯೆ
ಅಷ್ಟೊಂದ ಮಾತ ಕೇಂಡನೆ ಈಸೂರಯ್ಯ ತಾನು ತಂದನಿಯೆ
ಹತ್ತಲಾಗದ ಗುಡ್ಡ ಹತ್ತಿ ಹೋದ ತಾನು ತಂದನಿಯೆ
ಮೀಸಲಾಗದ ಗುಂಡಿ ಮೀಸಿ ಹೋದ ತಾನು ತಂದನಿಯೆ
ಶೀಂಗಿ ಮುಳ್ಳೊಳಗೆ ಬಗದು ಹೋದ ತಾನು ತಂದನಿಯೆ
ಹೋದ ಜೋಐಇಸರ ಅರಮನಿಗೆ ಈಸೂರಯ್ಯ ತಾನು ತಂದನಿಯೆ
ಜೋಯಿಸರ ಮೂರ್ ಕರಿಯ ಕರೆದನು ಈಸೂರಯ್ಯ ತಾನು ತಂದನಿಯೆ
ಎಂದೂ ಬಾರದಿದ್ದ ಈಸೂರಯ್ಯ ಇಂದೇನು ಬಂದೀಯ ತಾನು ತಂದನಿಯೆ
ಬಂದ ಕಾರಣವೇ ಒಂದಗ್ಹೇಳು ಈಸೂರಯ್ಯ ತಾನು ತಂದನಿಯೆ
ಈಗೀಗ ನೆಟ್ಟ ಹೊಸ ಹೂಗು ಬೇಕು
ನಾ ಮೆಚ್ಚಿದ ಅತ್ಗೀಗೆ ಕೊಡಲು ಬೇಕು ತಾನು ತಂದನಿಯೆ
ಅಷ್ಟೊಂದ ಮಾತ ಕೇಂಡರು ಜೋಯ್ಸರು ತಾನು ತಂದನಿಯೆ
ಮೆತ್ ಹತ್ತಿ ಮ್ಯಾನೆ ನಡೆದರು ತಾನು ತಾನು ತಂದನಿಯೆ
ನಾಗ ಬೆತ್ತಗಳ ತೆಗೆದರು ತಾವು ತಾನು ತಂದನಿಯೆ
ಹೂಗಿನ ವನಕೆ ನಡೆದರು ತಾವು ತಾನು ತಂದನಿಯೆ
ಜಾಜಿಯ ವನಕೆ ನಡೆದರು ತಾವು ತಾನು ತಂದನಿಯೆ

ಜಾಜಿಯ ಎಗಲೊಂದೆ ಮುರಿದರು ಜೋಯಿಸರು ತಾನು ತಂದನಿಯೆ
ಕಟ್ಟಿ ಕಟ್ಟಿ ಅದನ ನೆಡುವರು ಜೋಯಿಸಲು  ತಾನು ತಂದನಿಯೆ

ಮಂತ್ರಗಿಂಡಗಿಲಿ ನೀರ ಬಿಡುವರು ಜೋಯಿಸರು ತಾನು ತಂದನಿಯೆ
ನಾಗ ಬೆತ್ತಗಳ ಎಳೆದರು ಜೋಯಿಸರು ತಾನು ತಂದನಿಯೆ
ಜಾಮಕೈದು ಮಿಟ್ಟಿ ಮಕಿಯಾದೋ ತಾನು ತಾನು ತಂದನಿಯೆ
ಈಸೂರಯ್ಯನ ಕರೆದು ಏನೆಂದು ನುಡಿದರು ತಾನು ತಂದನಿಯೆ
ಪಟ್ಟೆ ಸೆರಗ್ಹಾಸಿ ಹೂಗ್ ಕೋಯ್ ಎಂದರು ತಾನು ತಂದನಿಯೆ
ಅಷ್ಟೊಂದ್ ಮಾತ ಹೇಳ್ದರೆ ಜೋಯಿಸರು ತಾನು ತಂದನಿಯೆ
ಮಲ್ಲಿಗಿ ವನಕೆ ನಡೆದರು ತಾವು ತಾನು ತಂದನಿಯೆ
ಮಲ್ಲಿಗಿ ಎಗಲೊಂದ ಮುರಿದರು ಜೋಯಿಸರು ತಾನು ತಂದನಿಯೆ
ಕಟ್ಟಿ ಕಟ್ಟಿ ಅದನ ನೆಡುವರು ಜೋಯಿಸರು ತಾನು ತಂದನಿಯೆ
ಮಂತ್ರ ಗಿಂಡಗೀಲಿ ನೀರ ಬಿಡುವರು  ತಾನು ತಂದನಿಯೆ
ನಾಗ ಬೆತ್ತಗಳ ಎಳೆದರು ಜೋಯಿಸರು ತಾನು ತಂದನಿಯೆ
ಪಟ್ಟೆ ಸೆರಗ್ಹಾಸಿ ಹೂ ಕೊಯ್ಕೊ ಅಂದ್ರು ತಾನುತಾನು ತಂದನಿಯೆ
ಅಷ್ಟೊಂದ ಮಾತ ಹೇಳ್ದರೆ ಜೋಯಿಸರು ತಾನು ತಂದನಿಯೆ
ಸಂಪುಗಿ ವನಕೆ ನಡೆದರು ತಾವು ತಾನು ತಂದನಿಯೆ
ಸಂಪುಗಿ ಎಲಗೊಂದೆ ಮುರಿದರು ಜೋಯಿಸರು ತಾನು ತಂದನಿಯೆ
ಮಂತರ ಗಿಂಡಗಿಲ ನೀರ ಬಿಡುವರು ಜೋಯಿಸರು ತಾನು ತಂದನಿಯೆ
ನಾಗ ಬೆತ್ತಗಳ ಎಳೆದರು ಜೋಯಿಸರು ತಾನು ತಂದನಿಯೆ
ಜಾಮಕೈದು ಮಿಟ್ಟಿ ಮಕಿಯಾದೋ ತಾನು ತಾನು ತಂದನಿಯೆ
ಈಸೂರಯ್ಯನ ಕರೆದು ಏನೆಂದು ನುಡಿದರು ತಾನು ತಂದನಿಯೆ
ಪಟ್ಟೇ ಸೆರಗ್ಹಾಸಿ ಹೂಗ್ ಕೋಯ್ ಎಂದರು ತಾನು ತಂದನಿಯೆ
ಅಷ್ಟೊಂದು ಮಾತ ಹೇಳ್ದರೆ ಜೋಯಿಸರು ತಾನು ತಂದನಿಯೆ
ಸುರಗಿಯ ವನಕೆ ನಡೆದರೆ ಜೋಯಿಸರು ತಾನು ತಂದನಿಯೆ
ಸುರಗಿಯ ಎಗಲೊಂದು ಮುರಿದರು ಜೋಯಸರು ತಾನು ತಂದನಿಯೆ
ಕಟ್ಟಿ ಕಟ್ಟಿ ಅದನು ನೆಡುವರು ಜೋಯಿಸರು ತಾನು ತಂದನಿಯೆ
ಮಂತ್ರ ಗಿಂಡಗಿಲಿ ನೀರು ಬಿಡುವರು ಜೋಯಸರು ತಾನು ತಂದನೀಯೆ
ನಾಗ ಬೆತ್ತಗಳ ಎಳೆವರು ಜೋಯಿಸರು ತಾನು ತಂದನಿಯೆ
ಜಾಮಕೈದು ಮಿಟ್ಟಿ,ಮಕಿಯಾದೋ ತಾನು ತಾನು ತಂದನಿಯೆ
ಈಸೂರಯ್ಯನ ಕರೆದು ಏನೆಂದು ನುಡಿದರು ತಾನು ತಂದನಿಯೆ
ಪಟ್ಟೆ ಸೆರಗ್ಹಾಸಿ ಹೂ ಕೊಯ್ಕೊ ಎಂದರು ತಾನು ತಂದನಿಯೆ
ಅಷ್ಟೊಂದ ಮಾತ ಹೇಳ್ದರೆ ಜೋಯಿಸರು ತಾನು ತಂದನಿಯೆ
ಸಿಂಗಾರ ಎಗಲೊಂದು ಮುರಿದರು ಜೋಯಿಸರು ತಾನು ತಂದನಿಯೆ
ಕಟ್ಟಿ ಕಟ್ಟಿ ಅದನೆ ನೆಡುವರು ಜೋಯಿಸರು ತಾನು ತಂದನಿಯೆ
ಮಂತ್ರ ಗಿಂಡಗಿಲಿ ನೀರ ಬಿಡುವರು ತಾನು ತಂದನಿಯೆ

ನಾಗ ಬೆತ್ತಗಳ ಎಳೆದರು ಜೋಯಿಸರು ತಾನು ತಂದನಿಯೆ
ಜಾಮಕೈದು ಮಿಟ್ಟಿ ಮಿಕಿಯಾದೋ ತಾನು ತಾನು ತಂದನಿಯೆ
ಈಸೂರಯ್ಯನ ಕರೆದುಏನೆಂದೆ ನುಡಿದರು ತಾನು ತಂದನಿಯೆ
ಪಟ್ಟೆ ಸೆರಗ್ಹಾಸಿ ಹೂ ಕೊಯ್ಕೊ ಅಂದ್ರು ತಾನು ತಂದನಿಯೆ
ಅಷ್ಟೊಂದ ಮಾತ ಹೇಳ್ದರೆ ಜೋಯಸ್ರು ತಾನು ತಂದನಿಯೆ
ಒಳಗಿದ್ದ ಮಡದೀಯ ಕರೆದರು ತಾನು ತಂದನಿಯೆ
ಒಳಗಿದ್ದ ಮಡದಿಯ ಏನೆಂದೆ ಕರೆದರು ತಾನು ತಂದನಿಯೆ
ಈಸೂರಯ್ಯ ಗೈದ್ ಎಸಳ ಕೊಡಲಿಕ್ಕೆ ಹೇಳು ತಾನು ತಂದನಿಯೆ
ಆಕಾ  ಈಸೂರಯ್ಯ ಪೋಕಾ ಈ ಸೂರಯ್ಯ ತಾನು ತಂದನಿಯೆ
ಅವ್ನಿಗೈದೆಸಳು ಕೊಡಬ್ಯಾಡಿ ಅಂದ್ಲು ತಾನು ತಂದನಿಯೆ
ನನ್ನಂತಗೆ ಅವ್ಹೆಂಗ್ಸು ಅವ್ಹಂತೆ ನಾ ಹೆಂಗ್ಸು ತಾನು ತಂದನಿಯೆ
ಈಸೂರಯ್ಯಗೈದೆಸ್ಲ ಕೊಡಬ್ಯಾಡಿ ಅಂದ್ಲ ತಾನು ತಂದನಿಯೆ
ಕೊಯ್ದ್ ಕೊಯ್ದ್ ಹೂಗ ಹೊರಿಕಟ್ಟಿ ಜೋಯ್ಸರು ತಾನು ತಂದನಿಯೆ
ಈಸೂರಯ್ನ ತಲೆಮ್ಯಾನೆ ನೆಗದರು ತಾವು ತಾನು ತಂದನಿಯೆ
ಶೀಂಗಿ ಮುಳ್ಳೊಳಗೆ ಸಿಗಿದ್ಹೋದ ಈಸೂರಯ್ಯ ತಾನು ತಂದನಿಯೆ
ಬಾಂಗೀ ಮುಳ್ಳೋಳಗೆ ಬಗ್ದ ಹೋದ ಈಸೂರಯ್ಯ ತಾನು ತಂದನಿಯೆ
ಹತ್ತಲಾಗ್ದ ಗುಡ್ಡಿ ಹತ್ತಿ ಇಳ್ದ ಈಸೂರಯ್ಯ ತಾನು ತಂದನಿಯೆ
ಈಗೀಗ ನೆಟ್ಟ ಹೊಸ ಹೂಗ ತಂದಿದೆ ತಾನು ತಂದನಿಯೆ
ಸಂಶಿಲ್ಲದೆ ಕದವ ತೆಗಿಯೆಂದ ಈಸೂರಯ್ಯ ತಾನು ತಂದನಿಯೆ

(ಅತ್ತಿಗಿ ಉಪಾಯ ಇಲ್ದೆ ಬಾಗಿಲ ತೆಗಿತ್ಲ. ಅತ್ತೇ ತನ್ನ ಕಿರಿ ಮಗ ಆತ್ತಿಗೆ ಕ್ವಾಣಿ ಹೊಕ್ಕದ್ದ ಕಂಡ್ಲ, ಕಂಡ್ರೂ ಕಣ್ಣಿಲ್ದದ್ದವಳಂಗೆ ಮಾಡ್ಕಂಡ ಬಾಗಿಲ ಗಡಕ್ ಅಂದದ್ಯಾಕೆ ಎಂದ ಸೊಸೀನ್ ಕೇಂಡ್ಳ)

ಎಂತಾಯ್ತೆ ಸೊಸಿ ಮುದ್ದೆ ಏನಾಯ್ತೆ ಸೊಸಿಮುದ್ದೆ ತಾನು ತಂದನಿಯೆ
ಬಾಗಿಲ ಕದವೇಕೆ ಗಡಕೆಂದು ತಾನು ತಾನು ತಂದನಿಯೆ
ಉಂಡೀದೆ ಅತ್ಯಮ್ಮ ಉಟ್ಟೀದೆ ಅತ್ಯಮ್ಮ ತಾನು ತಂದನಿಯೆ
ಬಾಗೀಲು ಹಾಕ್ವಲ್ಲೇ ಮರೆತೀದೆ ತಾನು ತಾನು ತಂದನಿಯೆ
ಈಗಳ್ಹೋಯಿ ಬಾಕ್ಲ ಹಾಕಿ ಬಂದೆ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನ ಮಾತು ತಾನು ತಂದನಿಯೆ
ನೀರ್ಹಂಡಿಯಾಕೆ ಗಡಕಂತು ತಾನು ತಾನು ತಂದನಿಯೆ
ಉಂಡೀದೆ ಅತ್ಯಮ್ಮ ಉಟ್ಟೀದೆ ಅತ್ತೆಮ್ಮ ತಾನು ತಂದನಿಯೆ
ನೀರ್ಹಂಡಿ ಮುಚ್ಚುವಲ್ಲಿ ಮರೆತೀದೆ ತಾನು ತಾನು ತಂದನಿಯೆ
ಈಗಳ್ಹೋಯಿ ನೀರ್ಹಂಡಿ ಮುಚ್ಚಿ ಬಂದೆ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನ್ನ ಮಾತು ತಾನು ತಂದನಿಯೆ
ಬಟ್ಟಲರಿಯಾಕೆ ಗಡಕೆಂದು ತಾನು ತಾನು ತಂದನಿಯೆ
ಉಂಡೀದೆ ಅತ್ಯಮ್ಮ ಉಟ್ಟೀದೆ ಅತ್ಯಮ್ಮ ತಾನು ತಂದನಿಯೆ

ಬಟ್ಟಲರಿ ಬಚ್ಚುವಲ್ಲಿ ಮರೆತೀದೆ ಅತ್ಯಮ್ಮ ತಾನು ತಂದನಿಯೆ
ಈಗಳ್ಹೋಯಿ ಬಟ್ಟಲರಿ ಬಚ್ಚಿಬಂದೆ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನ ಮಾತು ತಾನು ತಂದನಿಯೆ
ಹಾಸಿಗಿ ಪಿಂಡಿಯಾಕೆ ಗಡಕಂತು ತಾನು ತಾನು ತಂದನಿಯೆ
ಉಂಡೀದೆ ಅತ್ಯಮ್ಮ ಉಟ್ಟೀದೆ ಅತ್ಯಮ್ಮ ತಾನು ತಂದನಿಯೆ
ಹಾಸುಗಿ ಹಾಸುವಲ್ಲಿ ಮರೆತೀದೆ ತಾನು ತಾನು ತಂದನಿಯೆ
ಈಗಲೇ ಹಾಸುಗಿ ಹಾಸಿ ಬಂದೆ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನ ಮಾತು ತಾನು ತಂದನಿಯೆ
ಜಾಜೀಯ ಹೂಗಿಂದೆ ಪರಿಮಳ ತಾನು ತಾನು ತಂದನಿಯೆ
ಹೊತ್ತಾರೆ ಮುಂಚೆ ಬಾಕ್ಲ ಕಸ ಗುಡಿಸುವಾಗೆ ತಾನು ತಂದನಿಯೆ
ಗಿಣಿರಾಮನೊಂದೆಸಲ ಕೆಡಹಿದ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನ ಮಾತು ತಾನು ತಂದನಿಯೆ
ಸಂಪೂಗಿ ಹೂಗಿಂದೆ ಪರಮಳ ತಾನು ತಾನು ತಂದನಿಯೆ
ಹೊತ್ತಾರೆ ಮುಂಚೆದ್ದು ಬಾಕ್ಲ ಕಸ ಗುಡಿಸುವಾಗೆ ತಾನು ತಂದನಿಯೆ
ಅದನ್ಹೆಕ್ಕಿ ತಲೆಯಲ್ಲಿ ಸೆಕ್ಕಿದೆ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನ ಮಾತ ತಾನು ತಂದನಿಯೆ
ಮಲ್ಲೂಗಿ ಹೂಗಿಂದೆ ಪರಿಮಳ ತಾನು ತಾನು ತಂದನಿಯೆ
ಹೊತ್ತರೆ ಮುಂಚೆದ್ದು ಬಾಕ್ಲ ಕಸ ಗುಡಿಸುವಾಗೆ ತಾನು ತಂದನಿಯೆ
ಗಿಣಿರಾಮನೊಂದೆಸಲ ಕೆಡಹಿದ ತಾನು ತಾನು ತಂದನಿಯೆ
ಅದನ್ಹೆಕ್ಕಿ ತಲೆಯಲ್ಲಿ ಸೆಕ್ಕೀದೆ ತಾನು ತಾನು ತಂದನಿಯೆ
ಆಯಿತು ಸೊಸಿ ಮುದ್ದೆ ಮೆಚ್ಚಿದೆ ನಿನಮಾತ ತಾನು ತಂದನಿಯೆ
ಸಿಂಗಾರ ಹೂಗಿಂದೆ ಪರಿಮಳ ತಾನು ತಾನು ತಂದನಿಯೆ
ಹೊತ್ತಾರೆ ಮುಂಚೆದ್ದ ಬಾಕ್ಲ ಕಸ ಗುಡಿಸುವಾಗೆ ತಾನು ತಂದನಿಯೆ
ಗಿಣಿರಾಮನೊಂದೆಸಲ ಕೆಡಹಿದ ತಾನು ತಾನು ತಂದನಿಯೆ
ಅದನ್ಹೆಕ್ಕಿ ತಲೆಯಲ್ಲಿ ಸೆಕ್ಕಿದೆ ತಾನು ತಾನು ತಂದನಿಯೆ
ಕೇಳಿ ಕೇಳೀ ಅತ್ಯಮ್ಮ ಕೇಳಿ ನನ್ನ ಮಾತನ್ನ ತಾನು ತಂದನೀಯೆ
ನಿಮ್ಮ ಹೆರಿ ಮಗನಲ್ಲ ಕಿರಿಮಗ ತಾನು ತಂದನಿಯೆ
ನಿಮ್ಮಹೆರಿ ಮಗನಲ್ಲ ಕಿರಿಮಗ ತಾನು ತಾನು ತಂದನಿಯೆ

## ಹುಲಿ ದೇವರ ಹಾಡು

ಬಳ್ಳಳ್ಳಿ ದೇಸಕೆ ಬಂದೀತೆ ಹುಲಿಯೇ ತಾನ ತಂದಾನನೇ
ಬಳ್ಳಳ್ಳಿ ದೇಸವ ಕೆಡಿಸೀತೆ ಹುಲಿಯೇ ತಾನ ತಂದಾನನೇ
ಐದೂರ ಪೈರನೆ ನುಂಗೀತೆ ಹುಲಿಯೇ ತಾನ ತಂದಾನನೇ
ಐದ್ ಕೆರಿ ನೀರನೆ ಕುಡಿದೀತೆ ಹುಲಿಯೇ ತಾನ ತಂದಾನನೇ

ಆ ಊರ ಅರಸನೆ ಅಂಬವ್ನೆ ತಾನು ತಾನ ತಂದಾನನೇ
ಐದೂರಿಗೆ ವಾಲಿ ಬರದಾನೆ ತಾನು ತಾನ ತಂದಾನನೇ
ಹುಲಿಯ ಹೊಡೆವವರುಯಾರಾರು ಇದ್ದೀರೆ ತಾನ ತಂದಾನನೇ
ಕೂಡಲೇ ಆರೂ ಬರಬೇಕೆಂದ ತಾನ ತಂದಾನನೇ
ನಾಲ್ಕೂರ ವಾಲಿ ವಾಪಸು ಬಂತು ತಾನ ತಂದಾನನೇ
ಕಕ್ಕಳ್ಳಿ ರಾಜ್ಯದ ಕಟ್ವಾಣಿ ಕರಿಯ ತಾನ ತಂದಾನನೇ
ಅವನಿಗೆ ವಾಲಿ ಸಿಕ್ಕತಲೆ ತಾನ ತಂದಾನನೇ
ಮಡದೀನಾರೂ ಕರೆದನೆ ತಾನ ತಂದಾನನೇ
ಬಳ್ಳಳ್ಳಿ ದೇಸವ ಕೆಡಿಸೀತೆ ಹುಲಿಯೇ ತಾನ ತಂದಾನನೇ
ಐದೂರು ಪೈರನೆ ನುಂಗೀತೆ ಹುಲಿಯೇ ತಾನ ತಂದಾನನೇ
ಐದ್ ಕೆರಿ ನೀರನೆ ಕುಡಿದೀತೆ ಹುಲಿಯೇ ತಾನ ತಂದಾನನೇ
ಆ ಊರ ಅರಸ ಅಂಬವ್ನೆ ತಾನು ತಾನ ತಂದಾನನೇ
ಐದೂರಿಗ್ ವಾಲಿ ಬರದಾನೆ ತಾನು ತಾನ ತಂದಾನನೇ
ಹುಲಿಯ ಹೊಡೆವವರು ಯಾರಾರು ಇದ್ದೀರೆ ತಾನ ತಂದಾನನೇ
ಕೂಡಲೇ ಆರೂ ಬರಬೇಕೆಂದ ತಾನ ತಂದಾನನೇ
ನಾಲ್ಕೂರ ವಾಲಿ ವಾಪಸ ಬಂತು ತಾನ ತಂದಾನನೇ
ಕಕ್ಕಳ್ಳಿ ರಾಜ್ಯದ ಕಟ್ವಾಣಿ ಕರಿಯ ತಾನ ತಂದಾನನೇ
ಹುಲಿನಾರು ಹೊಡೆಯೂಕೆ ಹೋಗ್ತೆನೆ ಎಂದ ತಾನ ತಂದಾನನೇ
ಹತ್ತು ತಿಂಗಳ ಗರ್ಭಿಣಿ ನಾನು ತಾನ ತಂದಾನನೇ
ಹುಲಿಯ ಹೊಡುಕೆ ಹೋಗೊದುಬ್ಯಾಡ ತಾನ ತಂದಾನನೇ
ಅಷ್ಟು ಮಾತ ಕೇಳಲಿಲ್ಲ ತಾನ ತಂದಾನನೇ
ಹುಲಿಯ ಹೊಡುಕೆ ಹೋಗ್ತೆನೆ ಸತಿಯೆ ತಾನ ತಂದಾನನೇ
ಬುತ್ತಿ ರೊಟ್ಟಿ ಮಾಡು ಅಂದ ತಾನ ತಂದಾನನೇ
ಬಾಮಿಯಂಗಳಕೆ ನಡೆದಾನ ತಾನ ತಂದಾನನೇ
ಕಾಲು ಶ್ರೀಮುಖವ ತೋಳೆದನಲೆ ತಾನ ತಂದಾನನೇ
ತೊಳಿಸಿ ಮಂಟಪಕೆ ನಡೆದಾನ ತಾನ ತಂದಾನನೇ
ತೊಳಿಸಿಗೆ ಕೈಮುಗಿದಾನೆ ತಾನ ತಂದಾನನೇ
ಕಟ್ಟೆಯ ಕಟ್ಟಿ ನೆಟ್ಟಿದನೇ ತಾನ ತಂದಾನನೇ
ಒಳಗಿದ್ದ ಮಡದಿಯ ಕರೆದನೆ ತಾನ ತಂದಾನನೇ
ಈ ತೊಳಿಸಿಯ ಗಿಡವು ಬಾಡಿರೆ ಸತಿಯೆ ತಾನ ತಂದಾನನೇ
ನಾನಿಲ್ಲವೆಂದು ತಿಳಿಕೋ ಸತಿಯೆ ತಾನ ತಂದಾನನೇ
ತೊಳಿಸಿಯೆ ಗಿಡವೇ ಇದ್ದೀರಲೇ ತಾನ ತಂದಾನನೇ
ನಾನಿದ್ದೆನೆಂದು ತಿಳಿಕೋ ಸತಿಯೆ ತಾನ ತಂದಾನನೇ
ಒಳಗಿದ್ದ ಕೋವಿಯ ತೆಗೆದಲೇ ತಾನ ತಂದಾನನೇ
ಮಡದಿನಾದ್ರು ಕರಿದಾನಲೆ ತಾನ ತಂದಾನನೇ
ಕೋವಿಯನ್ನ ನೆಗೆದು  ಕೊಡೆ ತಾನ ತಂದಾನನೇ

ಕೋವಿಯನ್ನು ನೆಗೆದು ಕೊಟ್ಟು ತಾನ ತಂದಾನನೇ
ಬಳ್ಳಳ್ಳಿ ದೆಸಕೆ ನಡೆದನಲೆ ತಾನ ತಂದಾನನೇ
ಬಳ್ಳಳ್ಳಿ ದೇಸದ ಅರಸನ್ರು ತಾನ ತಂದಾನನೇ
ಹುಲಿಯು ಎಲ್ಲಿತ್ತು ಕೇಂಡನಲೇ ತಾನ ತಂದಾನನೇ
ಬಲ್ಲೆ ಬಲ್ಲೆಯ ಮೇಲೆ ತಾನ ತಂದಾನನೇ
ಹುಲಿಯ ತಾನು ಒರಗಿತ್ತಲೆ ತಾನ ತಂದಾನನೇ
ಅಟ್ಟನಾರೂ ಕಟ್ಟಿ ಕೊಟ್ರು ತಾನ ತಂದಾನನೇ
ಅಟ್ಟದ ಮ್ಯಾನೆ ಏರಿಕೂತ ತಾನ ತಂದಾನನೇ
ಅಬ್ರದ ಹುಲಿಯೇ ಅಬ್ರವ ತೋರಿ ತಾನ ತಂದಾನನೇ
ನಾಲ್ಕು ಕಾಲಲಿ ನಿಂತಿತೆ ಹುಲಿಯೆ ತಾನ ತಂದಾನನೇ
ಕಿಟ್ಟದೇ ಮುಟ್ಟದೆ ನುಂಗೀತಲೆ ತಾನ ತಂದಾನನೇ
ಇತ್ತ ಮಡದಿಯಾರು ಅಂಬವಳೇ ತಾನ ತಂದಾನನೇ
ತೊಳಸೀ ಕಟ್ಟೆಗೆ ನಡೆದೀಳೆ ತಾನ ತಂದಾನನೇ
ತೊಳಸಿ ಗಿಡವೇ ಬಾಡೀತೆ ತಾನ ತಂದಾನನೇ
ಬಿದ್ದೂ ಬಿದ್ದು ಹೊಡಕೀಳ ತಾನ ತಂದಾನನೇ
ಹತ್ತು ತಿಂಗಲ ಗರ್ಭಿಣಿ ತಾನ ತಂದಾನನೇ
ಗಂಡು ಮಗನ ಪಡೆದಳೆ ತಾನ ತಂದಾನನೇ
ಒಂದು ದಿವ್ಸದ ಮಗಿನ ಕಂಡಂಗೆ ತಾನ ತಂದಾನನೇ
ಹತ್ತು ವರ್ಷದ ಮಗಿನ ಕಂಡ್ರೆ ತಾನ ತಂದಾನನೇ
ಅಮ್ಮನನು ಕರೆದಾನೆ ತಾನ ತಂದಾನನೇ
ಚಂಡನಾರೂ ತಂದುಕೊಡು ತಾನ ತಂದಾನನೇ
ಪ್ಯಾಟೆ ಮಕ್ಕಳ ಸಂಗಡ ತಾ ತಾನ ತಂದಾನನೇ
ಆಟ ಆಡುಕೆ ಹೋಗಿದ್ದನಲೇ ತಾನ ತಂದಾನನೇ
ಚಂಡಿನಾಟ ಆಡೀನೆ ತಾನು ತಾನ ತಂದಾನನೇ
ಅಷ್ಟೂ ಅಟವ ಇವನೇ ಗೆದ್ದ ತಾನ ತಂದಾನನೇ
ಮಕ್ಕಳಿಗಾರು ಸಿಟ್ಟೇ ಬಂತು ತಾನ ತಂದಾನನೇ
ಅಪ್ಪನ ಕಾಣದೆ ಹುಟ್ಟಿದ ಮಗನೇ ತಾನ ತಂದಾನನೇ
ನಮ್ಮಾಟವೆಲ್ಲ ನೀನೆ ಗೆದ್ದೆ ತಾನ ತಂದಾನನೇ
ಮನಿಗಾರು ಓಡಿ ಬಂದ ತಾನ ತಂದಾನನೇ
ಅಮ್ಮನಾರೂ ಕರಿದಾನಲೇ ತಾನ ತಂದಾನನೇ
ಅಪ್ಪಯ್ಯನೆಲ್ಲಿಗೆ ಹೋಗಿರಮ್ಮ ತಾನ ತಂದಾನನೇ
ಬಳ್ಳಳ್ಳಿ ದೇಸಕೆ ಬಂದೀತೆ ಹುಲಿಯೇ ತಾನ ತಂದಾನನೇ
ಬಳ್ಳಳ್ಳಿ ದೇಸವ ಕೆಡಿಸೀತೆ ಹುಲಿಯೇ ತಾನ ತಂದಾನನೇ
ಐದೂರು ಪೈರನೆ ನುಂಗೀತೆ ಹುಲಿಯೇ ತಾನ ತಂದಾನನೇ
ಐದ್ ಕೆರಿ ನೀರನೆ ಕುಡಿದೀತೆ ಹುಲಿಯೇ ತಾನ ತಂದಾನನೇ
ಆ ಊರ ಅರಸನೆ ಅಂಬವ್ನೆ ತಾನು ತಾನ ತಂದಾನನೇ

ಐದೂರಿಗ್ ವಾಲಿ ಬರದಾನೆ ತಾನ ತಂದಾನನೇ
ಹುಲಿಯ ಹೊಡೆವವರು ಯಾರಾರು ಇದ್ರೆ ತಾನ ತಂದಾನನೇ
ಕೂಡಲೇ ಆರೂ ಬರಬೇಕೆಂದ ತಾನ ತಂದಾನನೇ
ನಾಲ್ಕೂರ ವಾಲಿ ವಾಪಸು ಬಂತು ತಾನ ತಂದಾನನೇ
ಕಕ್ಕಳ್ಳಿ ದೇಸದ ನಿನ್ನಪ್ಪ ಕರಿಯ ತಾನ ತಂದಾನನೇ
ಅವನಿಗೆ ವಾಲಿ ಸಿಕ್ಕ ತಲೆ ತಾನ ತಂದಾನನೇ
ಬಳ್ಳಳ್ಳಿ ದೇಸಕೆ ನಡೆದನಲೆ ತಾನ ತಂದಾನನೇ
ಹುಲಿ ಹೊಟ್ಟೆ ಸೇರೀನಲೆ ತಾನ ತಂದಾನನೇ
ನಾನಾರೂ ಹುಲಿ ಹೊಡುಕೆ ಹೋತೇ ತಾಯಿ ತಾನ ತಂದಾನನೇ
ಬುತ್ತಿ ರೊಟ್ಟಿ ಮಾಡಿ ಕೊಡೆ ತಾನ ತಂದಾನನೇ
ಬ್ಯಾಡ ಮಗನೆ ಅಂದಳಲೆ ತಾನ ತಂದಾನನೇ
ನೀನು ಹೋಗುದು ಬ್ಯಡ ಅಂದಳಲೆ ತಾನ ತಂದಾನನೇ
ಅಪ್ಪನ ನುಂಗಿದ ಹುಲಿಯೇ ಮಗನೆ ತಾನ ತಂದಾನನೇ
ನೀನು ಹೋಗುದು ಬ್ಯಡ ಅಂದಳಲೆ ತಾನ ತಂದಾನನೇ
ನಾನ್ಹೋಗಲೇ ಬೇಕು ಅಂದನಲೆ ತಾನ ತಂದಾನನೇ
ಬುತ್ತಿ ರೊಟ್ಟಿ ಕಟ್ಟಡೀಳಲೆ ತಾನ ತಂದಾನನೇ
ಬುತ್ತಿ ರೊಟ್ಟಿ ಹಿಡಿದಾನಲೇ ತಾನ ತಂದಾನನೇ
ಬಿದ್ದ ಮಾರಗ ಹಿಡಿದಾನಲೇ ತಾನ ತಂದಾನನೇ
ಬೆಳ್ಳಳ್ಳಿ ದೇಸಕೆ ನಡೆದಾನಲೆ ತಾನ ತಂದಾನನೇ
ಬಳ್ಳಳ್ಳಿ ದೇಸದ ಅರಸೇರಿದ್ರೆ ತಾನ ತಂದಾನನೇ
ಹುಲಿಯೇ ಎಲ್ಲಿ ಕೇಂಡನಲ್ಲೆ ತಾನ ತಂದಾನನೇ

## ಕೆರೆಗೆ ನರಬಲಿ

ಹೊಸ ಬಾಮಿ ಹೊಸ ಕೆರಿ ತುಂಬಿ ತುಂಬಿ
ಹೊಸ ಬಾಮಿ ಹೊಸ ಕೆರಿ ತುಂಬಿ ತುಂಬಿ
ನೀರೆದ್ದು ಹರಿಲಿಲ್ಲ ತುಂಬಿ ತುಂಬಿ
ನೀರೆದ್ದು ಹರಿಲಿಲ್ಲ ತುಂಬಿ ತುಂಬಿ
ತಾಯಮ್ಮ ನೆಂಬೋಳು ತುಂಬಿ ತುಂಬಿ
ಹಿರಿಮಗನ ಕರೆದಳೆ ತುಂಬಿ ತುಂಬಿ
ಜೊಯ್ಸರ ಮನೆಗ್ಹೋಯ್ ಬಾರ ತುಂಬಿ ತುಂಬಿ
ಜೋಯ್ಸರ ಮನಿಗೋಗಿದ ತುಂಬಿ ತುಂಬಿ
ಜೋಯ್ಸರ ಮೂರ್ ಕರಿ ಕರೆದೀದ ತುಂಬಿ ತುಂಬಿ
ಜೋಯಿಸರೆ ಜೋಯಿಸರೆ ತುಂಬಿ ತುಂಬಿ
ಪಂಚಾಗ ತೆಗದ್ಹೇಳಿ ತುಂಬಿ ತುಂಬಿ
ಹೊಸ ಬಾಮಿ ಹೊಸ ಕೆರಿ ತುಂಬಿ ತುಂಬಿ

ನೀರೆದ್ದು ಹರಿಲಿಲ್ಲ ತುಂಬಿ ತುಂಬಿ
ಕೋಳಿ ಆವುತಿ ಬ್ಯಾಡಾಂದ್ರು ತುಂಬಿ ತುಂಬಿ
ಕುರಿ ಆವುತಿ ಬ್ಯಾಡಾಂದ್ರು ತುಂಬಿ ತುಂಬಿ
ಮಧ್ಯದ ಮಗನ್ನೆಣತಿ ತುಂಬಿ ತುಂಬಿ
ನರಬಲಿ ಬೇಡತ್ತ ತುಂಬಿ ತುಂಬಿ
ತಾಯಮ್ಮನ ಕರೆದಾನೆತುಂಬಿ ತುಂಬಿ
ತಾಯಮ್ಮ ತಾಯಮ್ಮ ತುಂಬಿ ತುಂಬಿ
ಮಧ್ಯದ ಮಗನ್ನೆಣತಿ ತುಂಬಿ ತುಂಬಿ
ನರಬಲಿ ಬೇಡತ್ತ ತುಂಬಿ ತುಂಬಿ
ಎನೆಂದೆ ಮಾತಾಡಿದ್ರ ತುಂಬಿ ತುಂಬಿ
ನಾಳಿನ ಬೆಳಗಿಗೆ ತುಂಬಿ ತುಂಬಿ
ಸಿಬ್ಲ ಮರಿಚಿಟಕ ನೆನಸಿಕೆ ತುಂಬಿ ತುಂಬಿ
ಅವ್ವನ್ನಾರೂ ಕಳೂಸುವ  ತುಂಬಿ ತುಂಬಿ
ಅಕ್ಕ ತಂಗಿ ನಾಕ ಜನ ತುಂಬಿ ತುಂಬಿ
ಗುಡ್ಡಿ ಸೊಪ್ಪಿಗ್ಹೋಯಿರ ತುಂಬಿ ತುಂಬಿ
ಗುಡ್ಡಿ ಸೊಪ್ಪ ಕ್ಯೋದೀರ ತುಂಬಿ ತುಂಬಿ
ಸೊಪ್ಪಿನ್ಹೊರೆಯ ಹಾಕೀರ ತುಂಬಿ ತುಂಬಿ
ಅದ್ರಲ್ ಮೂರ್ಜನ ಅಂಬರೆ ತುಂಬಿ ತುಂಬಿ
ಇವತ್ ಇಷ್ಹೊತ್ತಿಗೆ ನಾಕ್ಜನ ತುಂಬಿ ತುಂಬಿ
ನಾಳೆ ಇಷ್ಹೊತ್ತಿಗೆ ಮೂರ್ಜನ ತುಂಬಿ ತುಂಬಿ
ಅತ್ತೆಮ್ಮ ಅತ್ಯೆ ಮ್ಮ ತುಂಬಿ ತುಂಬಿ
ನನ್ನಣ್ಣ ಬೆಮ್ಮಣ್ಣ ತುಂಬಿ ತುಂಬಿ
ಅವ ದಂಡಿನ ಮನಸ್ಯಾನೆ ತುಂಬಿ ತುಂಬಿ
ದಂಡು ತಪ್ಪಿ ಬಿದ್ದನಂಬ್ರ ತುಂಬಿ ತುಂಬಿ
ಕಾಲೊಂದು ಮೋಟಂಬ್ರು ತುಂಬಿ ತುಂಬಿ
ಕಾಣೋಂದು ಕುರುಡಂಬ್ರು ತುಂಬಿ ತುಂಬಿ
ಕಂಡೋಡಿ ನಾ ಬತ್ತೆ ತುಂಬಿ ತುಂಬಿ
ಕೇಂಡೋಡಿ ನಾ ಬತ್ತೆ ತುಂಬಿ ತುಂಬಿ
ಹೋಪದಾದ್ರೆ ಹೋಗ್ವೆಣ್ಣೆ ತುಂಬಿ ತುಂಬಿ
ಇಲ್ಲಿಟ್ಟ ಹುಂಡನ್ನ ತುಂಬಿ ತುಂಬಿ
ಇಲ್ಲಿ ಬಂದು ಅಳಿಬೇಕೆ ತುಂಬಿ ತುಂಬಿ
ಇಲ್ಲಿ ಕೆಟ್ಟ ಮಂಡೆ ತುಂಬಿ ತುಂಬಿ
ಇಲ್ಲಿ ಬಂದೆ ಅಳಿಬೇಕ ತುಂಬಿ ತುಂಬಿ
ಇಲ್ಲಿ ಉಟ್ಟ ಸೀರಿ ತುಂಬಿ ತುಂಬಿ
ಇಲ್ಲಿ ಬಂದ ಅಳಿಬೇಕ ತುಂಬಿ ತುಂಬಿ
ಇದು ಏನು ತಂಗ್ಯಮ್ಮ ತುಂಬಿ ತುಂಬಿ

ನಿನ್ನ ಮೊಕವೆಲ್ಲ ಬಾಡಿದು ತುಂಬಿ ತುಂಬಿ
ಕುದುರಿ ಸಾಲಿಗೆ ನಡೆದಾಳು ತುಂಬಿ ತುಂಬಿ
ಕುದುರಿನೆಲ್ಲ ಕಿಟ್ಟೀಳ ತುಂಬಿ ತುಂಬಿ
ಇದು ಏನು ತಂಗ್ಯಮ್ಮ ತುಂಬಿ ತುಂಬಿ
ನಿನಗ ಕೊಟ್ಟದ್ದು ಸಾಲದೆ ತುಂಬಿ ತುಂಬಿ
ಮತ್ತೊಂದು ಹೊಡಕೊಡ್ತೆ ತುಂಬಿ ತುಂಬಿ
ನೀ ಕೊಟ್ಟಿದ್ದು ಯಾರಿಗ್ಬೇಕು ತುಂಬಿ ತುಂಬಿ
ಸೆಡಿಕಣ್ಣಲ್ಲಿ ನೀರ ದಾಳೆ ತುಂಬಿ ತುಂಬಿ
ದೆನಿನ ಕೊಟ್ಗಿಗೆ ನಡೆದಳೆತುಂಬಿ ತುಂಬಿ
ದೆನಿನೆಲ್ಲ ಕಿಟ್ಟೀಳ ತುಂಬಿ ತುಂಬಿ
ಇದು ಏನ ತಂಗ್ಯಮ್ಮತುಂಬಿ ತುಂಬಿ
ನಿನಗೆ ಕೊಟ್ಟದ್ದು ಸಾಲದೇ ತುಂಬಿ ತುಂಬಿ
ಮತ್ತೊಂದು ಹೊಡಕಡ್ತೆ ತುಂಬಿ ತುಂಬಿ
ನೀ ಕೊಟ್ಟಿದ್ದು ಯಾರಿಗ್ಬೇಕ ತುಂಬಿ ತುಂಬಿ
ಕಣ್ಣಲ್ಲಿ ನೀರ ಸೆಡಿದಾಳೆ ತುಂಬಿ ತುಂಬಿ
ವಸ್ತ್ರದ ಕ್ವಾಣೆಗ್ ಹೋದಾಳೆ ತುಂಬಿ ತುಂಬಿ
ಇದು ಏನು ತಂಗ್ಯಮ್ಮ ತುಂಬಿ ತುಂಬಿ
ನಿನ್ಗ ಕೊಟ್ಟಿದ್ದು ಸಾಲದ ತುಂಬಿ ತುಂಬಿ
ಮತ್ತೊಂದ ಸೀರಿ ವಸ್ತ್ರ ಕೊಡ್ತೆ ತುಂಬಿ ತುಂಬಿ
ನಿನ್ನ ಸೀರಿ ವಸ್ತ್ರ ಯಾರಿಗ್ಬೇಕ ತುಂಬಿ ತುಂಬಿ
ಕಣ್ಣಲ್ ನೀರ ಸೆಡಿದಾಳ ತುಂಬಿ ತುಂಬಿ
ಚೆನ್ನದ ಕ್ವಾಣೀಗ್ ನಡದಾಳ ತುಂಬಿ ತುಂಬಿ
ಚೆನ್ನವೆಲ್ಲ ಕಿಟ್ಟೀಳೆ ತುಂಬಿ ತುಂಬಿ
ಇದು ಏನ ತಂಗ್ಯಮ್ಮ ತುಂಬಿ ತುಂಬಿ
ನಿನಗ ಚೆನ್ನ ಕೊಟ್ಟದ್ ಸಾಲದೇ ತುಂಬಿ ತುಂಬಿ
ಮತ್ತಷ್ಟು ಚೆನ್ನ ಮಾಡ್ಸಿಕೊಡ್ತೆ ತುಂಬಿ ತುಂಬಿ
ನಿನ್ನ ಚೆನ್ನಗಿನ್ನಯಾರಿಗ್ಬೇಕ ತುಂಬಿ ತುಂಬಿ
ಕಣ್ಣಲ್ ನೀರ ಸೆಡಿದಾಳೆ ತುಂಬಿ ತುಂಬಿ
ತೊಳಸಿವನಕೆ ನಡೆದಾಳೆ ತುಂಬಿ ತುಂಬಿ
ತೊಳಸಿ ಗಿಡನ ಮುರಿದಾಳೆ ತುಂಬಿ ತುಂಬಿ
ಕಟ್ಟಿ ಕಟ್ಟಿ ನೆಟ್ಟೀಳು ತುಂಬಿ ತುಂಬಿ
ಅಣ್ಣಯ್ನ ಕರಿದಾಳೆ ತುಂಬಿ ತುಂಬಿ
ನಾಳೀಗಿ ಇಷ್ಟೊತ್ತಿಗೆ ತುಂಬಿ ತುಂಬಿ
ಈ ಗಿಡು ಬಾಡೀರೆ ತುಂಬಿ ತುಂಬಿ
ನಿನ ತಂಗಿ ಇಲ್ಲಂತ ತಿಳ್ಕೊ ತುಂಬಿ ತುಂಬಿ
ಈ ಗಿಡು ಇದ್ದರೆ ತುಂಬಿ ತುಂಬಿ

ತಂಗಿ ಇದ್ಲಂತ್ ತಿಳ್ಕೊಣ್ಣ ತುಂಬಿ ತುಂಬಿ
ಅಷ್ಟು ಮಾತ ಹೇಳೀಳೆ ತುಂಬಿ ತುಂಬಿ
ಮನಿಗೋಡಿ ಬಂದ್ಲೆ ತುಂಬಿ ತುಂಬಿ
ಅವ್ವಮಾಯಿ ಅಂಬೋಲೆ ತುಂಬಿ ತುಂಬಿ
ಸಿಬ್ಲ ಮರ್ಚಿಕೆ ನೆನೆಸಿದೆ ಹೆಣ್ಣೆ ತುಂಬಿ ತುಂಬಿ
ತೊಳ್ಕಂಡಾರೂ ಬಾ ಹೆಣ್ಣೆ ತುಂಬಿ ತುಂಬಿ
ಒಂದ್ ಮೆಟ್ಲ ಇಳಿದಾಳು ತುಂಬಿ ತುಂಬಿ
ಕಾಲುಗಂಟಿಗೆ ನೀರು ಬಂತು ತುಂಬಿ ತುಂಬಿ
ಇದು ಏನು ಅತ್ಯಮ್ಮ ತುಂಬಿ ತುಂಬಿ
ಎಲ್ಲೆಲ್ಲೂ ನೋಡಿರೋ ತುಂಬಿ ತುಂಬಿ
ಸಬಿಲ ಮರ್ಚಿಕ ಇಲ್ಲ ತುಂಬಿ ತುಂಬಿ
ಈಗಳಿನ ಹೆಣ್ಣು ಮಕ್ಳು ತುಂಬಿ ತುಂಬಿ
ಚದುರ್ಯಾರು ಬೆದರ್ಯಾರು ತುಂಬಿ ತುಂಬಿ
ಇನ್ನೊಂದ ಮೆಟ್ಲ ಇಳಿಯೆ ತುಂಬಿ ತುಂಬಿ
ಎದಿ ಕಣ್ಣೀಗ್ ನೀರು ಬಂದು ತುಂಬಿ ತುಂಬಿ
ಇದು ಏನು ಅತ್ಯಮ್ಮ ತುಂಬಿ ತುಂಬಿ
ಸಿಬ್ಲ ಮರ್ಚಿಕೆ ಸಿಗುದಿಲ್ಲ ತುಂಬಿ ತುಂಬಿ
ಇನ್ನೊಂದ ಮೆಟ್ಲ ಇಳೀಯ ಹೆಣ್ಣೆ ತುಂಬಿ ತುಂಬಿ
ತಲಿವರೆಗೆ ನೀರ್ ಬಂದು ತುಂಬಿ ತುಂಬಿ
ಕಂತ್ಯಾ ಹೋದ್ಲು ತುಂಬಿ ತುಂಬಿ

## ನಿಂಬೀಯ ಹಣ್ಣು ಅಂಬರಕಿಟ್ವಾಡಿ

ನಿಂಬಿಯ ಹಣ್ಣು ಅಂಬರಕ್ಕಿಟ್ವಾಡಿ
ರಂಬಿ ಜವ್ವನವು ಗಳದ್ದೋದು ತಾನು
ರಂಬಿ ಜವ್ವನವು ಗಳದ್ದೋದು ಗಿಣಿರಾಮ
ಹೋಯ್ ಹೇಳ ನಿನ್ನ ಒಡಿಯಗು ತಾನು
ಅಷ್ಟೊಂದು ಮಾತ ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ಗಿಣಿರಾಮ
ಹೋಯ್ ಕೂತ ಒಡಿಯನ ಜಂಗಿನ್ ಮ್ಯಾನ್ ತಾನು
ಏನ್ ಬಂದೆ ಗಿಣಿರಾಮ ಎಂತ್ ಬಂದೆ ಗಿಣಿರಾಮ
ಬಂದ ಕಾರಣವೆ ಒದಗ್ಹೇಳು ತಾನು
ನಿಂಬಿಯ ಹಣ್ಣು ಅಂಬರ ಕಿಟ್ವಾಡಿ
ರಂಬಿ ಜವ್ವನವುಗಳದ್ದೋದು ಪಾಂಡವರೆ
ನೀವು ಒಂದರಗಳಿಗೆ ಬರಕಂಬ್ರು ತಾನು
ರಂಬಿ ಜವ್ವನವು ಗಳದ್ದೋರ ಹೋಗಲಿ

ನಾನೊಂದರಗಳಿಗಿ ಬರಲಾರೆ ತಾನು
ನಾನೊಂದರಗಳಿಗೆ ಬರಲಾರೆ ಗಿಣಿರಾಮ
ನಂಬಿದ ಸೂಳಿಯ ಬಿಡಲಾರೆ ತಾನು
ಅಷ್ಟೊಂದು ಮಾತ ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು
ಕೂತು ಹಾರಿದನೆ ಗಗನಕೆ ಗಿಣಿರಾಮ
ಬಂದ್ ಕೂತ ತನ್ನೊಡತಿ ನೆರಿಮ್ಯಾಲೆ ತಾನು
ಏನಂದ್ರೂ ಗಿಣಿರಾಮ ಎಂತಂದ್ರು ಗಿಣಿರಾಮ
ಹಳಿದ ಕಾರಣವೇ ಒದಗ್ಹೇಳು ರಾಮ
ರಂಬಿ ಜವ್ವನವು ಗಳದ್ದೋದರೋಗಲಿ
ನಾನೊಂದರಗಳಿಗಿ ಬರಲಾರೆ ತಾನು
ನಾನೊಂದರಗಳಿಗೆ ಬರಲಾರೆ ಗಿಣಿರಾಮ
ನಂಬಿದ ಸೂಳಿಯ ಬಿಡಲಾರೆ ಗಿಣಿರಾಮ
ಹೋಯ್ ಹೇಳ ನಿನ್ನ ಒಡತಿಗೆ ತಾನು
ಏನ್ಹೇಳರೋ ಬತ್ತಿಲ್ಲ ಎಂತ್ಲೇಳಿರು ಬತ್ತಿಲ್ಲ
ಇನ್ನೊಂದು ನುಡಿಯ ನುಡಿದಾಳೆ ತಾನು
ಕೈಲಿಯು ಕರು ಹಾಕಿ ಇಂದಿಗೆ ಮೂರ್ ದಿವ್ಸ
ಕೈಲಿಗೆ ಮೂರು ಮಡ್ಡಿ ಮೆಲುವಿಲ್ಲ ತಾನು
ಕೈಲಿಗೆ ಮೂಝುರು ಮಡ್ಡಿ ಮೆಲುವಿಲ್ಲ ಗಿಣಿರಾಮ
ಹೋಯ್ ಹೇಳ ನಿನ್ನ ಒಡಿಯತೆ ತಾನು
ಅಷ್ಟೊಂದು ಮಾತ ಕೇಮಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು
ಕೂತು ಹಾರಿದನೆ ಗಗನಕೆ ಗಿಣಿರಾಮ
ಹೋಯ್ ಕೂತ ತನ್ನ ಒಡಿಯನ ಜಂಗೀನ್ ಮ್ಯಾನ್ ತಾನು
ಏನ್ ಬಂದೆ ಗಿಣಿರಾಮ ಎಂತ್ ಬಂದೆ ಗಿಣಿರಾಮ
ಬಂದ ಕಾರಣವೆ ಒದಗ್ಹೇಳು ತಾನು
ಕೈಲಿಯುಕರು ರಾಕಿ ಇಂದಿಗೆ ಮೂರ್ ದಿವ್ಸ್
ಕೈಲಿಗೆ ಮೂರು ಮಡ್ಡಿ ಮೆಲವಿಲ್ಲ ತಾನು
ಕೈಲಿಗೆ ಮೂರು ಮಡ್ಡಿ ಮೆಲವಿಲ್ಲ ಪಾಂಡವರೆ
ನೀವೊಂದರಗಳಿಗೆ ಬರಬೇಕು ತಾನು
ಕೈಲಿ ಕರು ಹಾಕೀರು ತೌಡಿನ ಮುಡಿ ಉಂಟು
ಕೈಲಿಗೆ ಮೂರ್ ಮಡ್ಡಿ ಮೆಲಹೇಳು ತಾನು
ನಂಬಿದ ಸೂಳೀಯ ಬಿಡಲಾರೆ ಗಿಣಿರಾಮ
ಹೊಯ್ ಹೇಳ ನಿನ್ನ ಒಡತೀಗೆ ತಾನು
ಅಷ್ಟೊಂದ ಮಾತ ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು

ಕೂತು ಹಾರಿದನೆ ಗಗನಕೆ ಗಿಣಿರಾಮ
ಬಂದ್ ಕೂತ ತನ್ನೊಡತಿ ನೆರಿಮ್ಯಾಲೆ ತಾನು
ಏನಂದ್ರು ಗಿಣಿರಾಮ ಎಂತಂದ್ರು ಗಿಣಿರಾಮ
ಹೇಳಿದ ಕಾರನವ ಒದಗ್ಹೇಳು ರಾಮ
ಕೈಲಿಕರು ಹಾಕೀರು ತೌಡಿನ ಮುಡಿ ಉಂಟು
ಕೈಲಿಗೆ ಮೂರ್ ಮಡ್ಡಿ ಮೆಲಹೇಳು ತಾನು
ಕೈಲಿಗೆ ಮುರ್ ಮಡ್ಡಿ ಮೆಲಹೇಲು ಗಿಳಿರಾಮ
ನಂಬಿದ ಸೂಳಿಯ ಬಿಡಲಾರೆ ತಾನು
ಏನ್ಹೇಳಿರೂ ಬತ್ತಿಲ್ಲ ಎಂತ್ಹೇಳೀರು ಬತ್ತಿಲ್ಲ
ಇನ್ನೊಂದು ನುಡಿಯ ನುಡಿದಾಳು ತಾನು
ಹುಂಡಿಯ ಕರುಹಾಕಿಇಂದಿಗೆ ಮೂರ್ ದಿವ್ಸ
ಹುಂಡಿಗೂ ಮೂರ್ ಮಡ್ಡಿ ಮೆಲುವಿಲ್ಲ ಗಿಣಿರಾಮ
ಹೋಯ್ ಹೇಳ ನಿನ್ನ ಒಡಿಯಗೆ ತಾನು
ಅಷ್ಟೊಂದು ಮಾತ ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು
ಕೂತು ಹಾರಿದನೆ ಗಗನಕೆ ಗಿಣಿರಾಮ
ಹೋಯ್ ಕೂತ ಒಡೆಯನ ಜಂಗಿನ್ ಮೇಲ್ ತಾನು
ಏನ್ ಬಂದೆ ಗಿಣಿರಾಮ ಎಂತ ಬಂದೆ ಗಿಣಿರಾಮ
ಬಂದ ಕಾರಣನೇ ಒದಗ್ಹೇಳು ತಾನು
ಹುಂಡಿಯ ಕರು ರಾಕಿ ಇಂದಿಗೆ ಮುರ್ ದಿವ್ಸ
ಹುಂಡಿಗೆ ಮೂರ್ ಮಡ್ಡಿ ಮೆಲವಿಲ್ಲ ತಾನು
ಹುಂಡಿ ಕರು ಹಾಕಿರೇ ತೌಡಿನ ಮುಡಿ ಉಂಟು
ಹೋಯ್ ಹೇಳ ನಿನ್ನ ಒಡತಿಗೆ ತಾನು
ಹೋಯ್ ಹೇಳ ನಿನ್ ಒಡತಿಗೆ ಗಿಣಿರಾಮ
ನಂಬಿದ ಸೂಳಿಯ ಬಿಡಲಾರೆ ತಾನು
ಅಷ್ಟೊಂದು ಮಾತ ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು
ಕೂತು ಹಾರಿದನೆ ಗಗನಕೆ ಗಿಣಿರಾಮ
ಹೋಯ್ ಕೂತು ಒಡತಿಯ ನೆರಿಮ್ಯಾನೆ ತಾನು
ಏನಂದ್ರೂ ಗಿಣಿರಾಮ ಎಂತಂದ್ರು ಗಿಣಿರಾಮ
ಹೇಳಿದ ಕಾರಣವ ಒದಗ್ಹೇಳು ರಾಮ
ಹುಂಡಿ ಕರು ಹಾಕಿರುತೌಡಿನ ಮುಡಿ ಉಂಟು
ಹುಂಡೀಗೆ ಮೂರ್ ಮಡ್ಡಿ ಮೆಲಹೇಳು ಗಿಣಿರಾಮ
ನಂಬಿದ ಸೂಳಿಯ ಬಿಡಲಾರೆ ತಾನು
ಏನ್ಹೇಳಿರೂ ಬತ್ತಿಲ್ಲ ಎಂತ್ಹೇಳಿರು ಬತ್ತಿಲ್ಲ
ಇನ್ನೊಂದು ನುಡಿಯ ನುಡಿದಾಳು ತಾನು

ನಿನ ಮಡದಿ ಸತ್ತು ಇಂದಿಗೆ ಮೂರ್ ದಿವ್ಸ
ಮಡದಿ ಸುಡುವುದಕೆ  ಸೌದಿಲ್ಲ ತಾನು
ಮಡದಿ ಸುಡುವುದಕೆ ಸೌದಿಲ್ಲ ಗಿಣಿರಾಮ
ಹೋಯ್ ಹೇಲ ನಿನ್ನ ಒಡಿಯಗೆ ತಾನು
ಅಷ್ಟೊಂದ ಮಾತು ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು
ಕೂತು ಹಾರಿದನೆ ಗಗನಕೆ ಗಿಣಿರಾಮ
ಹೋಯ್ ಕೂತ ಒಡೆಯನ ಜಂಗ ಮೇಲೆ ತಾನು
ಎನ್ ಬಮದೆ ಗಿಣಿರಾಮ ಎಂತ ಬಂದೆ ಗಿಣಿರಾಮ
ಬಂದ ಕಾರಣನೆ ಒದಗ್ಹೇಳು ತಾನು
ನಿನ ಮಡದಿ ಸತ್ತು ಇಂದಿಗೆ ಮೂರ್ ದಿವ್ಸ
ಮಡದಿ ಸುಡುವುದಕ್ಕೆ ಸೌದಿಲ್ಲ ತಾನು
ಮಡದಿಯ ಸತ್ತರೆ ಗಂಧದ ಮರ ಉಂಟೆ
ಆಳು ಮಕ್ಕಳ ಕರೆಸಿ ಕಡಿಸಿನಿ ತಾನು
ಆಳುಮಕ್ಕಳ ಕರೆಸಿ ಕಡಿಸಿನಿ ಗಿಣಿರಾಮ
ಮನಿ ಹೊದ್ದಿಲ್ಲ ಮಲಗದ್ದೆಲ್ಲಿ ಸುಡಿಸಿನಿ ತಾನು
ಮನಿ ಹೊದ್ದಿನ ಮಲಗದ್ದೆಲ್ಲಿ ಸುಡಿಸಿನಿ ಗಿಣಿರಾಮ
ಒಂದ್ಹಾಡ ತುಪ್ಪಹೊಯ್ಸಿನಿ ತಾನು
ಒಂದ್ಹಾಡ ತುಪ್ಪ ಹೊಯ್ಸಿನಿ ಗಿಣಿರಾಮ
ಗಂಧದ ಮರ ಹತ್ತಿ ಹೊಗಿ ಕಾಂತೆ ನಾನು
ಗಂಧದ ಮರ ಹತ್ತಿ ಹೋಗಿ ಕಾಂತೆ ಗಿಣಿರಾಮ
ನಂಬಿದ ಸೂಳಿಯ ಬಿಡಲಾರೆ ತಾನು
ನಂಬಿದ ಸೂಳಿಯ ಬಿಡಲಾರೆ ಗಿಣಿರಾಮ
ನಾನೊಂದರಗಳಿಗಿ ಬರಲಾರೆ ತಾನು
ಹೋಯ್ ಹೇಳ ನಿನ್ನ ಒಡತಿಗೆ ತಾನು
ಅಷ್ಟೊಂದ ಮಾತ ಕೇಂಡನೆ ಗಿಣಿರಾಮ
ಕೂತು ಹಾರಿದನೆ ಗಗನಕೆ ತಾನು
ಕೂತು ಹಾರಿದನೆ ಗಗನಕೆ ಗಿಣಿರಾಮ
ಹೋಯ್ ಕೂತ ಒಡತಿಯ ನೆರಿಮ್ಯಾನೆ ತಾನು
ಏನಂದ್ರು ಗಿಣಿರಾಮ ಎಂತಂದ್ರು ಗಿಣಿರಾಮ
ಹೇಳಿದ ಕಾರಣವ ಒದಗ್ಹೇಳು ರಾಮ
ಮಡದಿಯು ಸತ್ತರೆ ಗಮಧದ ಮರ ಉಂಟು
ಆಳು ಮಕ್ಕಳ ಕರೆಸಿ ಕಡಿಸಿನಿ ತಾನು
ಆಳು ಮಕ್ಕಳ ಕರೆಸಿ ಕಡಿಸಿನಿ ಗಿಣಿರಾಮ
ಮನಿ ಹೊದ್ದಿನ ಮಲಗದ್ದೆಲಿ ಸುಡಿಸಿನಿ ತಾನು
ಮನಿ ಹೊದ್ದಿನ ಮಲಗದ್ದೆಲಿ ಸುಡಿಸಿನಿ ಗಿಣಿರಾಮ

ಒಂದ್ಹಾಡ ತುಪ್ಪ ಹೊಯ್ಸಿನಿ ತಾನು
ಒಂದ್ಹಾಡ ತುಪ್ಪ ಹೊಯ್ಸಿನಿ ಗಿಣಿರಾಮ
ಗಂಧದ ಮರ ಹತ್ತಿ ಹೊಗಿ ಕಾಂತೆ ನಾನು
ಗಂಧದ ಮರ ಹತ್ತಿ ಹೊಗಿ ಕಾಂತ ಗಿಣಿರಾಮ
ನಂಬಿದ ಸೂಳಿಯ ಬಿಡಲಾರೆ ತಾನು
ನಂಬಿದ ಸೂಳಿಯ ಬಿಡಲಾರೆ ಗಿಣಿರಾಮ
ನಾನೊಂದರಗಳಿಗೆ ಬರಲಾರೆ ತಾನು
ನಾನೊಂದರಗಳಿಗೆ ಬರಲಾರೆ ಗಿಣಿರಾಮ
ಹೋಯ್ ಹೇಳ ನಿನ್ನ ಒಡತಿಗೆ ತಾನು.

ಇನ್ನೇನು ಮಾಡೂಕು ಆಪ್ದಲ್ಲ ಅಂದ್ಕಂಡ ಆ ಹೆಂಡ್ತಿ ಅಂಬವ್ವ ಅಪ್ಪ ಒಂದ್ ಕರಿ ನಾಯಿಯನ್ನು ಸಾಯ್ಸಿ ಗಂಧದ ಮರ ಕಡ್ದ ನಾಯಿಯನ್ನ್ ಸುಡಸ್ರ್ತ. ಗಂಡ ಹೋಗಿ ಕಂಡ್ ಒಡಿ ಬತ್ತ. ಸೂಳಿ ಅಡ್ಡ ಕಟ್ಟ್ಲ . ಆಗಳ ಆ ಗಂಡ ಅವಳ ಒಂದ್ ಕಾಲ ಕಡಿತ. ಆಗಳಿಗೆ ಆವ್ಳ ಇನ್ನೊಂದ ಕಾಲ ಇತತ ಅಂದ್ಲ.  ಇನ್ನೊಂದ್ ಕಾಲೂ ಕಡ್ದ ಹಾಕ್ತ.  ಅಷ್ಟಾರೂ ಬಿಡುದಿಲ್ಲೆ ಅವ್ಳ.ಅವ್ಳನ್ನ್ ಕೊಂದ್ ಹಾಕಿಯೇ ಬತ್ತ.  ಇಲ್ಲಿಗೆ ಓಡಿ ಬಮದ. ಅಂವ ಬಂದ್ರ ಬಂದ್ ಕೊಂಡಕ್ ಹಾರಿ ಸಾಯ್ಲಿ ಅಂದ್ಕಂಡ್ ಅಪ್ಪ, ಮಗ್ಳೂ ಕೊಂಡಕ್ಕೆ ಹಾರೂಕೂಗ ಅಂದ್ಕಂಡ ಅವ್ಳನ್ನ ಎರೀನ್ ಸಾಲೀಗೆ ಸರಪಳಿ ಹಾಕಿ ಕಟ್ಟಿ ಹಾಕ್ರ. ಗಂಡ ಕೊಂಡಕ್ಕೆ ಹಾರಿ ಜೀವ ತೆಕ್ಕಂತ. ಅವ್ಳೂ ಕಾಲಿನ ಸರಪಳಿ ಬಿಚ್ಕಂಡ ಗಂಡ ಹಾರಿದ ಕೊಂಡಕ್ಕೆ ತಾನೂ ಹಾರ್ತೆ ಅಂತ್ಲ.  ಆಗ ಅವ್ಳ ಅಪ್ಪ ಬಂದ ನಾಗರ ಬೆತ್ತ ಎಳ್ದ ಅವ್ಳ ಗಂಡನ್ನ ಬದಕ್ಸಿ ಕೊಡ್ತ. ಕಡೀಗೆ ಗಂಡ ಹೆಣ್ತಿ ಸುಖವಾಯಿ ಇರತ್ರ.

## ಕುಸುಮಾಲಿ

ಹೆಂಡಿರ ಗುಣವೆ ಗಂಡರೇನು ಬಲ್ಲರೆ
ಗುಂಡಿ ಒಳಗಿರುವ ಕರು ನೀನು ದೇವ್ರುವ್ರೆ
ನಾ ಎಂತೆ ಕಂಡು ಬನ್ನಿ ದೇವ್ರುವ್ರೆ ನಿಮ್ಮಡದೀ
ಹೂವ ತಂದನಿಗೂ ಒಲಿವಾಳೆ ಕುಸುಮಾಲಿ
ಬೇಡಕು ಬಂದನಿಗೂ ಒಲಿವಾಳೆ
ಯಾರು ಏಳದ ಮುಂಚೆ ಕೋಳಿ ಕೂಗದ ಮುಂಚೆ
ದೇವರಾಯೆದ್ದು ಕದವ ತೆಗೆದಾರೆ ದೆವ್ರುವು
ಬಾಮಿ ಅಂಗಳಕೆ ನಡೆದರು ದೇವ್ರುವು
ಕಾಲು ಶ್ರೀಮುಖವ ತೊಳೆದಾರು ದೇವ್ರುವು
ತುಳಸಿ ಮಂಟಪಕೆ ಬರುವಾರೆ ದೇವ್ರುವು
ತುಳಸ್ಯಮ್ಮಗೆ ಕೈಯ್ಯ ಮುಗಿದಾರು ದೇವ್ರುವು
ಮೆತ್ತುತ್ತಿ ಮ್ಯಾನೆ ನಡೆದಾರು
ಹೋದೆವೆ ಹೊಲ್ಲಿಗಳ ಹೆಗಲಲ್ಲಿ ಹ್ಯಾಕಂಡು
ಮೆತ್ತಿಂದ ಕೆಳಗೆ ಇಳಿದಾರು ದೇವ್ರುವು
ಬಿದ್ದ ಮಾರ್ಗವ ಹಿಡಿದಾರು ಹಿಡಿವಂಥ ಸಮಯದಲ್ಲೆ
ಸೂಳಿ ಬಂದಡ್ಡ ನಿಲುವಾಳು

ಇಂದ್ಹೋದ ದೇವ್ರುವ್ರೆ ನೀವೆಂದು ಬರುವಿರಿ
ನೀವ್ ಬರುವ ದಿವಸ ನನಗ್ಹೇಳಿ
ಹೋದವರ ಸುದ್ಧಿ ಇರುತವಳಿಗೇಕೆ
ನಾ ಬರುವ ದಿನವು ನಿನಗೇಕೆ
ಹೋದಂತೆ ದೇವ್ರಾಯ ಹೋದನು ಜೋಗಳವರ ಮನೆಗೆ
ಎಂದು ಬಾರದ ದೇವ್ರಾಯ ಇಂದೇಕೆ ಬಂದೀರಿ
ಬಂದ ಕಾರಣವ ಮೊದಲ್ಹೇಳಿ
ಎಂದೂ ನಾ ಬರಲಿಲ್ಲ ಎಂತೂ ನಾ ಬರಲಿಲ್ಲ
ಕಂತ ಜೋಳಿಗಿಯ ಹೊಲಿ ಕೊಡ
ನಾ ಜೋಳಿಗೆ ಕೊಟ್ಟೇರು ನೀವು ಜೋಳಿಗಿ ತೆಕ್ಕಂಡ್ರೆ
ದಂಡ ತಕ್ಕಂಬ ದೋರಿ ಇದ್ದ
ದಂಡ ಕೇಂಬವನ್ಯಾರು ದಂಡ ಕೊಡುವವನ್ಯಾರೆ
ನನ್ನಂಥ ದೊರಿ ಅವನ್ಯಾರು
ಅಷ್ಟೊಂದು ಹೇಳುತ್ತ ಇಷ್ಟೊಂದು ಕೇಳುತ್ತ
ಕಂತ ಜೋಳಿಗಿನ ಹೊಲಿಕೊಟ್ಟ
ಕೊಟ್ಟಂಥ ಜೋಳಿಗಿನ ತೆಕ್ಕಂಡು ದೇವ್ರುವು
ಹೋದಾರು ಗುಡಿಗಾರ್ನ ಅರಮನಿಗೆ ದೇವ್ರುವು
ಗುಡಿಗಾರ್ನ ಮೂರ್ ಕರಿಯ ಕರೆದಾನೊ
ಎಂದೂ ಬಾರದ ದೇವ್ರುವ್ರೆ ಇಂದೇನು ಬಂದಿರಿ
ಬಂದ ಕಾರಣವ ಮೊದಲ್ಹೇಳಿ
ಎಂದೂ ನಾ ಬರಲಿಲ್ಲ ಎಂತೂ ನಾ ಬರಲಿಲ್ಲ
ಗೆಯ್ಮಿಗೆ ಬಣ್ಣ ಎರಡಕೊಡು
ಗೆಯ್ಮಿಗೆ ಬಣ್ಣ ಎರಕೊಟ್ಟರೆ ನೀವ್  ಅದಕತಕ್ಕೊಂಡ್ರೆ
ದಂಡ ತಕ್ಕೊಂಬ ದೊರಿ ಇದ್ದ
ದಂಡ ಕೇಂಬವನ್ಯಾರು ದಂಡ ಕೊಡುವವನಾರು
ನನ್ನಂಥ ದೊರಿ ಅವನ್ಯಾರು
ಅಷ್ಟೊಂದು ಹೇಳುತ್ತ ಅಷ್ಟೊಂದು ಕೇಳುತ್ತ
ಜಲ್ಲು ಬಡಗಿಯ ಮಾಡಿಕೊಟ್ಟ
ಜಲ್ಲುಬಡಗಿಯ ತಕ್ಕೊಂಡು ದೇವ್ರಾಯ
ಹೋದನು ಹೆರಿಯಕ್ಕನ ಅರಮನಿಗೆ
ಯಾರಮ್ಮ ಮನೆಯಲ್ಲಿ ಯಾರಮ್ಮ ಮಠದಲ್ಲಿ
ಜೋಗಿಗು ಬಿಗುಸವ ಇಡ ಬನ್ನಿ
ಕಾಲ್ಕಂಡ್ರು ನನ ತಮ್ಮ ಕೈಕಂಡ್ರೆ ನನ ತಮ್ಮ
ಮುಖ ಕಂಡ್ರೆ ಅವನಲ್ಲ
ಅಕ್ಕಹಾಕಿದ ಬಿಗುಸೆ ತಕ್ಕಂಡು ದೇವ್ರಾಯ
ಹೋದನು ತಂಗಿಯ ಅರಮನಿಗೆ

ಯಾರಮ್ಮ ಮನೆಯಲ್ಲಿ ಯಾರಮ್ಮ ಮಠದಲ್ಲಿ
ಜೋಗಿಗು ಬಿಗುಸವ ಇಡಬನ್ನಿ
ಕಾಲ್ಕಂಡ್ರೆ ನನ್ನಣ್ಣ
ಮುಖ ಕಂಡ್ರೆ ಅವನಲ್ಲ
ತಂಗಿ ಹಾಕಿದ ಬಿಗಸೆ ತಕ್ಕಂಡ ದೇವ್ರಾಯ
ನಡೆದಾನೆ ಕುಸುಮಾಲಿ ಅರಮನಿಗೆ
ಯಾರಮ್ಮ ಮನೆಯಲ್ಲಿ ಯಾರಮ್ಮ ಮಠದಲ್ಲಿ
ಬಂದ ಜೋಗಿಗೆ ಬಿಗಸ ಇಡಬನ್ನಿ
ತೊತ್ಯೇರ ಗೌಂಡೇರೆ ಎತ್ತೆಲ್ಲ ಹೊದಿರಿ
ಜೋಗಿಗೂ ಬಿಗುಸ ಇಡಬನ್ನಿ
ಗೌಂಡಾರು ತೊತ್ಯೇರು ಇಡುವಂಥ ಬಿಗುಸ್ಯೆಲ್ಲ
ಕುಸುಮಾಲಿ ಬಂದೇ ಇಡಬೇಕು
ಸಣ್ಣ ಹರಿವಾಣದಲ್ಲಿ ಸಣ್ಣಕ್ಕಿ ಹ್ಯಾಕಂಡು
ಹಿಡಿಬಾರ ಜೊಗಿ ಬಿಗುಸವ
ಬಾಗಿಲ ಕಂಠದಿ ಕೊಟ್ರೆ ಭಾಗ್ಯಕೆ ಕಡಿಮೆ ಅಂಬ್ರು
ಮತ್ತೊಂದು ಮೆಟ್ಲ ಇಳಿ ಹೆಣ್ಣೆ
ಗೌಂಡ್ಯಾರೆ ತೊತ್ಯಾರೆ ಎತ್ತೆಲ್ಲ ಹೋದಿರಿ
ಹಿಡಿಕಟ್ಟಲ್ಲವನ ಹೊಡೆದಟ್ಟಿ
ಅಷ್ಟೊಂದ ಮಾತ ಹೇಳ್ದಳೆ ಕುಸುಮಾಲಿ
ಹೋದಳತ್ತಿಗೆಯ ಅರಮನಿಗೆ
ಎಂದೂ ಬಾರದ ಕುಸುಮಾಲಿ ಇಂದೇನು ಬಂದೀಯ
ಬಂದ ಕಾರಣವ ಮೊದಲ್ಹೇಳು
ಹೊತ್ತಾರೆ ಮುಂಚೆ ಬಂದ ಜೋಗಿಹೊತ್ತರಗಿ ಬಯ್ಯಾರು
ಜೋಗಿ ನನ್ನುರಿಯ ಹೊಯ್ಸುವ
ತೋಟದಲ್ಲಿರುವಳು ತಾಟಗಿತ್ತಿ ಕುಸುಮಾಲಿ
ಅಷ್ಟೊಂದಿರಿಷ್ಟೆ ಅರಿಯಾಳೆ ಕುಸುಮಾಲಿ
ನಿನ ಗಂಡನ ಗುತುಖು ನಿನಗಿಲ್ಯ
ಅಡಗಿಮಾಡಿ ಊಟಕೆ ಅನುಮಾಡು
ಅಷ್ಟೊಂದ ಮಾತ ಕೇಂಡಳೆ ಕುಸುಮಾಲಿ
ಕಣ್ಣಲ್ಲು ನೀರ ಸೆಡಿದಾಳೆ ಕುಸುಮಾಲಿ
ತಾ ಬಮದಳು ತನ್ನ ಅರಮನಿಗೆ ಕುಸುಮಾಲಿ
ಅಡಿಗಿ ಭೋಜನಕೆ ಇಳಿದಾಳೆ ಕುಸುಮಾಲಿ
ಹಂಡೀಲಿ ನೀರ ಕಾಸೀಳೆ ಕುಸುಮಾಲಿ
ಜೋಗಿಗೆ ಸ್ನಾನಕೆ ಕರೆದಾಳು
ಜೋಗಿಗೆ ಊಟಕೆ ಅನುಮಾಡಿ ಕುಸುಮಾಲಿ
ಊಟಕ್ಕೆ ಲವಳು ಬಡಸೀಳು

ಎಲ್ಲಾ ಬಳಸಿದೆ ಕಾಣಿ ತುಪ್ಪವನು ತರಲಿಲ್ಲ
ತುಪ್ಪ ತಪ್ಪಲ್ಲೆ ಮರತೀದೆ ಅನುತ್ಥೇಳಿ
ಮೆತ್ತತ್ತಿ ಮೇಲೆ ನಡೆದಾಳೆ ಕುಸುಮಾಲಿ
ಬೆಳ್ಳಿಯ ನೇಣು ತೆಗೆದಾಳೆ ಕುಸುಮಾಲಿ
ಮಲ್ಲೂಗಿ ವನಕೆ ನಡೆದಾಳೆ
ಸಾಕಿದೆ ಸಲಗಿದೆ  ನೆಟ್ಟು ನೀರ ಹೊಯ್ದಿದೆ
ನನಗಂತೂ ಎಗುಲ ಕೊಡಬೇಕು
ನೀ ಸಾಕಿದೆ ಸಲಗೀದೆ ನೆಟ್ಟಿ ನೀರು ಹೊಯ್ದಿದೆ
ನಿನಗಂತೂ ಎಗಲ ಕೊಡಲಾರೆ
ಬೆಳ್ಳಿಯ ನೇಣು ಹಿಡಿದಾಳೆ ಕುಸುಮಾಲಿ
ಶಾವಂತಿಗಿ ವನಕೆ ನಡೆದಾಳೆ
ಸಾಕಿದೆ ಸಲಗಿದೆ ನೆಟ್ಟ ನೀರು ಹೊಯ್ದಿದೆ
ನಿನಗಂತೂ ಎಗಲ ಕೊಡಲಾರೆ
ಬೆಳ್ಳಿಯ ನೇಣು ಹಿಡಿದಳೆ ಕುಸುಮಾಲಿ
ಸುರಗಿಯ ಮರಕಾಗಿ ನಡೆದಾಳೆ
ಸಾಕಿದೆ ಸಲಗಿದೆ ನೆಟ್ಟ ನೀರು ಹೊಯ್ದಿದೆ
ನನಗೊಂದು ಎಗಲ ಕೊಡಬೇಕು
ನೀ ಸಾಕಿದ ಸಲಗಿದೆ ನೆಟ್ಟಿ ನೀರು ಹೊಯ್ದಿದೆ
ನಿನಗಂತೂ ಎಗಲ ಕೊಡಲಾರೆ
ಬೆಳ್ಳಿಯ ನೇಣ ಹಿಡಿದಳೆ ಕುಸುಮಾಲಿ
ಸುರಗಿಯ ಮರಕಾಗಿ ನಡೆದಾಳೆ
ಸಾಕಿದೆ ಸಲಗಿದೆ ನೆಟ್ಟ ನೀರು ಹೊಯ್ದಿದೆ
ನಿನಗೊಂದ ಎಗಲ ಕೊಡುತ್ತೇನೆ ಅಂದ್ಥೇಳಿ
ತಲಿಬಾಂಗಿ ಎಗುಲ ಬರುವುದೇ ಕುಸುಮಾಲಿ
ತಲೆಬಾಂಗಿ ನೇಣ ಬಿಗಿದಾಳೆ
ಹೊತ್ತೊತ್ತಿನ ಹೂವ ಹೊತ್ತೊತ್ತಿಗೆ ಕೊಯದಿದ್ರೆ
ಹೊತ್ತು ತಪ್ಪಿದರೆ ಕುಸುಬಾಪೆ ಸುರಗಿಯ ಹೂಗು
ಕಸ್ತೂರ್ ಮಲ್ಲಿಗಿಯ ಸರವಾಪೆ ದೆವ್ರವ್ರೆ
ವರುಸಕೊಂದು ಬಾರಿ ಬರುವೆನು ದೇವ್ರವ್ರೆ
ವಜ್ಜುರ ದುಂಬ್ಯಾಗಿ ಬರಬೇಕು
ಸೂಳೂ ರಂಡಿ ಮಾತ್ ಕೇಳಿ ಮಾನಭಂಗವ ಆದೆ
ಚಿನ್ನದಂಥ ಮಡದಿ ಕಳಕೊಟ್ಟೆ ಎನುತಲಿ
ವಜ್ರದುಂಬ್ಯಾಗಿ ಹಾರಿಹೋದ

# ಗಿರಿಜಾಬಾಲಿ

ಹನ್ನೆರಡು ವರ್ಷದ ಗಿರಿಜಾ ಬಾಲಿ ಜೋಜೋವನ್ನೀರಿ
ನಾ ನನ್ನ ಗಂಡನ ಮನಿಗ್ಹೋಗಬೇಕು ಜೋಜೋವನ್ನೀರಿ
ಮಾರಗು ಕೂಡಿ ಎದ್ದೀಳಲೆ ಜೋಜೋವನ್ನೀರಿ
ಕಟ್ಟಿಗೆ ಹೊರಿಯೇ ಎದುರು ಬಂತು ಜೋಜೋವನ್ನೀರಿ
ಇದ ಏನ ಗಿರಿಜಾಬಾಲಿ ಅಪಶಕುನವಾಯ್ತು ಜೋಜೋವನ್ನೀರಿ
ಅವ ತನ್ನ ಹೊಟ್ಟೆ ಪಾಡಿಗೆ ತಿರುಗುತಿರುವ ಜೋಜೋವನ್ನೀರಿ
ನಾ ನನ್ನ ಗಂಡ ಮನಿಗ್ಹೋಗಬೇಕೆ ಜೋಜೋವನ್ನೀರಿ
ಅವಳು ಮಾರಗು  ಕೂಡಿ ನಡೆದಳಲೆ ಜೋಜೋವನ್ನೀರಿ
ಕೋಳಿ ಹೈಂಡಿ ಮರಿ ತಕ್ಕ ಎದುರೇ ಬಂತು ಜೋಜೋವನ್ನೀರಿ
ಇದು ಏನ ಗಿರಿಜಾಬಾಲಿ ಅಪಶಕುವಾಯ್ತು ಜೋಜೋವನ್ನೀರಿ
ಅದು ಹೊಟ್ಟೆ ಪಾಡಿಗಿ ತಿರುಗುತಿರುವ ಜೋಜೋವನ್ನೀರಿ
ನಾ ನನ್ನ ಗಂಡನ ಮನಿಗ್ಹೋಗಬೇಕು ಜೋಜೋವನ್ನೀರಿ
ಮಾರಗೂ ಕೂಡಿ ನಡೆದಾಳಲೆ ಜೋಜೋವನ್ನೀರಿ
ಜವಳಿಯ ಹೊರಿಯೇ ಎದುರೇ ಬಂತು ಜೋಜೋವನ್ನೀರಿ
ಇದು ಏನ ಗಿರಿಜಾಬಾಲಿ ಅಪಶಕುನವಾಯ್ತು ಜೋಜೋವನ್ನೀರಿ
ಅವ ಹೊಟ್ಟೆಇ ಪಾಡಿಗೆ ತಿರುಗುತ್ತಾನೆ ಜೋಜೋವನ್ನೀರಿ
ನಾನನ್ನ ಗಮಡನ ಮನಿಗ್ಹೋಗ ಬೇಕು ಜೋಜೋವನ್ನೀರಿ
ಮಾರಗು ಕೂಡಿ ನಡೆದಳಲೇ ಜೋಜೋವನ್ನೀರಿ
ಒಳಗಿದ್ದ ಅತ್ತೆಮ್ಮ ಕರೆದಳೆ ಜೋಜೋವನ್ನೀರಿ
ನಾ ತಂದೆ ಬೆಳಿ ಎಲಿ ಮೆಲಿನೇ ಅತ್ತೆ ಜೋಜೋವನ್ನೀರಿ
ನೀ ತಂದ ಬೆಳಿ ಎಲಿ ಮೆಲಿತೇನೆ ಹೆಣ್ಣೆ ಜೋಜೋವನ್ನೀರಿ
ಅತ್ತಿಎದ್ದು ಮನಿ ಹಿಂದೆ ನಡೆದಳೆ ಜೋಜೋವನ್ನೀರಿ
ವಿಷ ಮುಂಗ್ರಿ ಎಲಿಯ ಕ್ಯೋದು ತಂದು ಜೋಜೋವನ್ನೀರಿ
ದಡ್ಡರ ಮನೆಯ ಹೆಣ್ಣಲ್ದೆ ಮಗಳೆ ಜೋಜೋವನ್ನೀರಿ
ಊಟಕೂ ಆರು ಬಾ ಎಂದಳೆ ಜೋಜೋವನ್ನೀರಿ
ಕಾಲು ಶ್ರೀ ಮುಖವ ತೊಳೆದಾಳಲೇ ಜೋಜೋವನ್ನೀರಿ
ಊಟಕ್ಕಾರು ನಡೆದಳಲೆ ಜೋಜೋವನ್ನೀರಿ
ಅನ್ನದಲಿ ವಿಷ ಇಕ್ಕಿದಳೆ ಜೋಜೋವನ್ನೀರಿ
ಊಟಕ್ಕೆ ಕೂತಲ್ಲಿ ಕಾಕಿ ಬಂದು ಜೋಜೋವನ್ನೀರಿ
ಕಾಕಿಗೆ ಒಂದ್ ತುತ್ತು ಇಕ್ಕಿದಳೆ ಜೋಜೋವನ್ನೀರಿ
ಕಾಕಿ ರೆಕ್ಕೆ ಬಡ್ದು ಸತ್ತೇ ಹೋಯ್ತು ಜೋಜೋವನ್ನೀರಿ
ಕೋಳಿಗೊಂದ್ ತುತ್ತ ಇಕ್ಕಿದಳೆ ಜೋಜೋವನ್ನೀರಿ
ತಾನೂ ಒಂದ್ ತುತ್ತು ಉಂಡಳೆ ಜೋಜೋವನ್ನೀರಿ
ಕಣ್ಣೀಗೆ ಕತ್ಲೆ ಜೀವ ಸಂಕ್ಟ ಬಂತೇ ಜೋಜೋವನ್ನೀರಿ

ಅತ್ಯಮ್ಮನ್ನವಳು ಕರಿದಾಳಲೆ ಜೋಜೋವನ್ನೀರಿ
ಕಣ್ಣಿಗೆ ಕತ್ಲೆ ಜೀವ ಸಂಕ್ಟ ಅತೇ ಜೋಜೋವನ್ನೀರಿ
ಕಣ್ಣಿಗೆ ಕತ್ಲೆ ಜೀವ ಸಂಕ್ಟ ಅತ್ತೇ ಜೋಜೋವನ್ನೀರಿ
ದೊಡ್ಡೋರ ಮನಿಯ ಹೆಣ್ಣಲ್ಲ ಮಗಳ ಜೋಜೋವನ್ನೀರಿ
ನಡೆದು ಬಂದ ದಣಿವು ಮಗಳೆ ಜೋಜೋವನ್ನೀರಿ
ಮೆತ್ತಿನ ಮೇಲೆ ಒರಗೀದಳೆ ಜೋಜೋವನ್ನೀರಿ
ಅವಳ ಗಂಡ ಮರಿದೇವ್ರೆಂಬವರೆ ಜೋಜೋವನ್ನೀರಿ
ಬಯಲು ಸುತ್ತಿ ಬಂದೀರಲೆ ಜೋಜೋವನ್ನೀರಿ
ತಾಯಮ್ಮ ಬಂದು ಪಾದುಕೆ ನೀರ್ ಕೊಟ್ಲು ಜೋಜೋವನ್ನೀರಿ
ದೊಡ್ಡೋರ ಮನಿಯ ಹೆಣ್ಣಲ್ದ ಮಗನೆ ಜೋಜೋವನ್ನೀರಿ
ನಡೆದ ಬಂದ ದಣಿವಿಗೆ ಒರಗೀಳಲೆ ಜೋಜೋವನ್ನೀರಿ
ಮರಿದೇವ್ರು ಉಂಡು ಕೈ ಬಾಯಿ ತೊಳೆದರಲೆ ಜೋಜೋವನ್ನೀರಿ
ಮೆತ್ಥತ್ತಿ ಮ್ಯಾನೆ ನಡೆದರಲೆ ಜೋಜೋವನ್ನೀರಿ
ಗಿರಿಜಾಬಾಲಿ ಮೂರ್ ಕರಿಯ ಕರೆದಾರಲ್ಲೆ ಜೋಜೋವನ್ನೀರಿ
ಎಷ್ಟ ಕರೆದ್ರೂ ಮಾತಾಡುದಿಲ್ಲ ಜೋಜೋವನ್ನೀರಿ
ತಾಯಮ್ಮನನ್ನು ಕರೆದಾರಲ್ಲೆ ಜೋಜೋವನ್ನೀರಿ
ನಿನ ಸೊಸಿ ಗಿರಿಜಾಬಲಿಗೇನಾಯ್ತೆ ಜೋಜೋವನ್ನೀರಿ
ಎಷ್ಟು ಕರದ್ರೂ ಮಾತಾಡುದಿಲ್ಲ ಜೋಜೋವನ್ನೀರಿ
ಬಂದವು ಅವಳ ಮ್ಯಾಲೆ ಅವ್ವ ಮನಿಭೂತ ಜೋಜೋವನ್ನೀರಿ
ಮಡುವಾಳ ಮಾಚಣ್ಣಗೆ ಒಸಗೇ ಹೇಳ ಜೋಜೋವನ್ನೀರಿ
ಏನೆಂದೆ ಒಸಗಿ ಹೇಳಲಿ ಎಂದ ಜೋಜೋವನ್ನೀರಿ
ಹನ್ನೆರಡು ವರ್ಷದ ಗಿರಿಜಾಬಾಲಿ ಜೋಜೋವನ್ನೀರಿ
ಋತುವಾದಳೆಂದೇ ಒಸಗೀ ಹೇಳ ಜೋಜೋವನ್ನೀರಿ
ಮರಿದೇವ್ರು ಅಂಬೊರಿಕೆ ಮಾ ಸಂತೋಷವು ಜೋಜೋವನ್ನೀರಿ
ಮೆತ್ತಿಂದ ಕೆಳಗೆ ಇಳಿದರಲೆ ಜೋಜೋವನ್ನೀರಿ
ಮಡಿವಾಳ ಮಾಚಣ್ಣನ ಕರೆದರಲೆ ಜೋಜೋವನ್ನೀರಿ
ಗಿರಿಜಾಬಾಲಿ ಮನಿಗೆ ಒಸಗಿ ಹೇಳಿಬಾರ ಜೋಜೋವನ್ನೀರಿ
ಏನೆಂದೆ ಒಸಗಿ ಹೇಳಲಿ  ಎಂದ ಜೋಜೋವನ್ನೀರಿ
ಹನ್ನೆರಡು ವರ್ಷದ ಗಿರಿಜಾಬಾಲಿ ಜೋಜೋವನ್ನೀರಿ
ಋತುವಾದಳೆಂದೇ ಒಸಗಿ ಹೇಳ ಜೋಜೋವನ್ನೀರಿ
ಮಾರಗೂ ಕೂಡಿ ನಡೆದನಲೆ ಜೋಜೋವನ್ನೀರಿ
ಗಿರಿಜಾಬಾಲಿ ಮನೆಗೆ ನಡೆದನಲೆ ಜೋಜೋವನ್ನೀರಿ
ಎಂದು ಬಾರದ ಮಾಚಣ್ಣ  ಇಂದೇನು ಬಂದೀಯ ಜೋಜೋವನ್ನೀರಿ
ಹನ್ನೆರಡು ವರ್ಷದ ಗಿರಿಜಾಬಾಲಿ ಜೋಜೋವನ್ನೀರಿ
ಋತುವಾದ ಒಸಗಿ ತಕಬಂದೆ ಜೋಜೋವನ್ನೀರಿ
ಗಿರಿಜಾಬಾಲಿ ತಾಯ್ತಂದಿಗೆ ಮಾ ಸಂತೋಷವು ಜೋಜೋವನ್ನೀರಿ

ಏಳೂರಿಗ್ವಾಲಿ ಬರೆದರಲೇ  ಜೋಜೋವನ್ನೀರಿ
ಏಳೂರು ಹೂಗ ತರಸೀರಲೆ ಜೋಜೋವನ್ನೀರಿ
ದಿಬ್ಬಣವನ್ನು ಕೂಡಿದರೆ ಜೋಜೋವನ್ನೀರಿ
ಮಾರಗು ಕೂಡಿ ನಡೆದರಲೆ ಜೋಜೋವನ್ನೀರಿ
ಕುರಿ ಮೇಸು ಮಕ್ಕಳು ಎದುರೇ ಬಂದೋ ಜೋಜೋವನ್ನೀರಿ
ಮರಿದೇವ್ರ ಮನೆಯಲ್ಲಿ ಮಾ ದೊಡ್ಡ ಹೋಮ್ನವು ಜೋಜೋವನ್ನೀರಿ
ಮಕ್ಕಳೂ ಸಕುನವ ನುಡಿದೇ ಬಂದೋ ಜೋಜೋವನ್ನೀರಿ
ಗೋಮೇಸೋ ಮಕ್ಕಳು ಎದುರೇ ಬಂದೊ ಜೋಜೋವನ್ನೀರಿ
ಮರಿದೇವ್ರ ಮನೆಯಲ್ಲಿ ಮಾ ದೊಡ್ಡ ಹೋಮ್ನವು ಜೋಜೋವನ್ನೀರಿ
ಮರಿದೇವ್ರ ಮಡದಿಯ ಸುಡುತಾರೇನು ಜೋಜೋವನ್ನೀರಿ
ಮಕ್ಕಳು ಸಕುನವ ನುಡಿತೇ ಬಂದೋ ಜೋಜೋವನ್ನೀರಿ
ಮುಂದ ಮುಂದಕೂ ನಡೆದರಲೇ ಜೋಜೋವನ್ನೀರಿ
ಆಕಳ ಬೈಲಲ್ಲಿ ಮಾ ದೊಡ್ಡ ಹೋಮ್ನವು ಜೋಜೋವನ್ನೀರಿ
ಮರಿದೇವ್ರೆಂಬುವರು ಮೆಟ್ಲ ಕೆಳಗೆ ಇಳಿದಾರೆ ಜೋಜೋವನ್ನೀರಿ
ನಿಮ್ಮ ತಾಯಿ ನನ ಮಗಳ ಕೊಂದಳಲೆ ಜೋಜೋವನ್ನೀರಿ
ಏಳೂರ ಹೂಗ ಕಟ್ಟಿ ಕಿಚ್ಚೀಗೆ ಹಾಕಿದ ಜೋಜೋವನ್ನೀರಿ
ಏಳೂರ ಚಿನ್ನ ಕಟ್ಟಿ ಕಿಚ್ಚೀಗೆ ಹಾಕಿದ ಜೋಜೋವನ್ನೀರಿ
ತಾಯಮ್ಮನ ಮೂರು ರುಂಡ ಹೊಡೆದನಲೆ ಜೋಜೋವನ್ನೀರಿ
ಅತ್ತಿಗೂ ಸೊಸಿಗೂ ಒಂದೇ ಬೆಂಕಿ ಜೋಜೋವನ್ನೀರಿ
ಅತ್ತಿಗೂ ಸೊಸಿಗೂ ಒಂದೇ ಕೊಳ್ಳಿ ಜೋಜೋವನ್ನೀರಿ

## ಪಟ್ಟಣ ಶೆಟ್ಟಿ ಹೊನ್ನಮ್ಮ

ಒಬ್ಬಳು ತಾಯಿಗೆ ರಾಮ ರಾಮಜ್ಜಿ
ಒಬ್ಬನೆ ಮಗ ಹುಟ್ಟಿ ರಾಮ ರಾಮಜ್ಜಿ
ಲಗ್ನವೇ ಆಯ್ತಂಬ್ರ ರಾಮ ರಾಮಜ್ಜಿ
ಲಗ್ನದ ಮರುದಿವ್ಸ ರಾಮ ರಾಮಜ್ಜಿ
ದಂಡಿನೋಲಿ ಬಮತಂಬ್ರ ರಾಮ ರಾಮಜ್ಜಿ
ತಾಯಮ್ಮ ಕರೆದಾನೆ
ದಂಡಿನೋಲಿ ಬಂದಿತು ತಾಯೆ ರಾಮ ರಾಮಜ್ಜಿ
ನಾ ದಂಡಿಗೆ ಹೋಗತ್ತೇನೆ ರಾಮ ರಾಮಜ್ಜಿ
ನಿನ ಸೊಸಿ ಹೊನ್ನಮ್ಮ ರಾಮ ರಾಮಜ್ಜಿ
ಬಾಮಿ ನೀರಿಗೂ ಕಳಿಸಬೇಡ ರಾಮ ರಾಮಜ್ಜಿ
ಮೆತ್ತಿನ ಕೆಳಗೆ ಇಳಿಸಬೇಡ ರಾಮ ರಾಮಜ್ಜಿ
ದಂಡಿಗಾರು ಹೋದನಲೆ ರಾಮ ರಾಮಜ್ಜಿ

ಪಟ್ಟಣ ಶೆಟ್ರು ಬಂದಿರು ರಾಮ ರಾಮಜ್ಜಿ
ಆವನ ತಾಯಿ ಎಂಬುವಳು ರಾಮ ರಾಮಜ್ಜಿ
ಕೂಪಕೆ ಮಣಿ ಮಾಡಿ ಕೊಟ್ಲು ರಾಮ ರಾಮಜ್ಜಿ
ಮುಂಡೆ ಕೊಟ್ಟ ಮಣಿ ಮ್ಯಾಲೆ ರಾಮ ರಾಮಜ್ಜಿ
ನಾ ಕೂಕಂಬ ಶೆಟ್ಯಲ್ಲ ರಾಮ ರಾಮಜ್ಜಿ
ಅವಳೇ ಎಲಿ ಕೊಡಬೇಕು ರಾಮ ರಾಮಜ್ಜಿ
ಹೊನ್ನಮ್ಮ ಅಷ್ಟೆಲ್ಲ ಕೇಂಡಳು ರಾಮ ರಾಮಜ್ಜಿ
ಮೆತ್ತಿನ ಕೆಳಗೆ ಇಳಿದಾಳು ರಾಮ ರಾಮಜ್ಜಿ
ಕೂಪಾಕೆಮಣಿ ಕೊಟ್ಲು ರಾಮ ರಾಮಜ್ಜಿ
ವೀಳ್ಯದ ಹರಿವಾಣ ಕೊಟ್ಲು
ಮಣಿಮ್ಯಾಲೆ ಕೂಕಂಡ್ರು ರಾಮ ರಾಮಜ್ಜಿ
ಧಡಕನೆ ಎದ್ರು ಶೆಟ್ರು ರಾಮ ರಾಮಜ್ಜಿ
ಹಸಗಾರೆಂಕಿ ಮನಿಗ್ಹೋದ್ರು ರಾಮ ರಾಮಜ್ಜಿ
ಹಸಗಾರೆಂಕಿ ಕರೆದರು ರಾಮ ರಾಮಜ್ಜಿ
ವೆಂಕಪ್ಪ ಗೌಡನ ಮನಿಯಲ್ಲು ರಾಮ ರಾಮಜ್ಜಿ
ಮೊನ್ನೆ ಹೆಣ್ಣಿನ ತಂದೀರು ರಾಮ ರಾಮಜ್ಜಿ
ಆ ಹೆಣ್ಣಿನ ತಂದ್ರು ಕೊಟ್ರೆ ರಾಮ ರಾಮಜ್ಜಿ
ನಿನಗರ್ಧ ಆಸ್ತಿ ಕೊಡ್ತೆ  ರಾಮ ರಾಮಜ್ಜಿ
ಕೈತುಂ ಹೊನ್ನು ಕೊಡ್ತೆ ರಾಮ ರಾಮಜ್ಜಿ
ಅಕ್ಕೆಂದೇ ಹೇಳೀಳು ರಾಮ ರಾಮಜ್ಜಿ
ಮಂಡಿ ಬಾಚಿ ಕಟ್ಟೀಳು ರಾಮ ರಾಮಜ್ಜಿ
ಒಪ್ಪಿದ ಸೀರಿ ಉಟ್ಟೀಳು ರಾಮ ರಾಮಜ್ಜಿ
ವೆಂಕಪ್ಪ ಗೌಡನ ಮನಿಗ್ಹೋದ್ಲು ರಾಮ ರಾಮಜ್ಜಿ
ಅವಳ ಅತ್ತಿ ಎಂಬುವಳು ರಾಮ ರಾಮಜ್ಜಿ
ಎಂದೂ ಬಾರದ ವೆಂಕ್ಯಕ್ಕ ರಾಮ ರಾಮಜ್ಜಿ
ಇಂದೇನು ಬಂದೀಯ ರಾಮ ರಾಮಜ್ಜಿ
ನಿನ್ನ ಸೊಸಿ ಹೊನ್ನಮ್ಮ ರಾಮ ರಾಮಜ್ಜಿ
ಒಂದ್ ಗಳಿಗಿ ಕಳ್ಸಿಕೊಡು ರಾಮ ರಾಮಜ್ಜಿ
ಅಶವಂತನ ಕಟ್ಟೀಲೆ ರಾಮ ರಾಮಜ್ಜಿ
ದಶವಂತರಾಟವೇ ರಾಮ ರಾಮಜ್ಜಿ
ಒಂದ್ ಗಳಿಗಿ ಕಂಡ್ಕಂಬತ್ತೊ ರಾಮ ರಾಮಜ್ಜಿ
ಅವಳನ್ ನಾನು ಕಳ್ಸೂದಿಲ್ಲೆ ರಾಮ ರಾಮಜ್ಜಿ
ಅವಳ ಗಂಡ ಬಪ್ಪುಕೂ ರಾಮ ರಾಮಜ್ಜಿ
ಮನಿ ಹೊದ್ದಿನ ಮಲಗದ್ದೇಲಿ ರಾಮ ರಾಮಜ್ಜಿ
ಅವಳನ್ ನಾನು ಕಳ್ಸುದಿಲ್ಲ ರಾಮ ರಾಮಜ್ಜಿ
ಅವಳು ಮಾತ ಕೇಳಲಿಲ್ಲ ರಾಮ ರಾಮಜ್ಜಿ

ಮೆತ್ತಿನ ಮೇಲೆ ನಡೆದಳೇ ರಾಮ ರಾಮಜ್ಜಿ
ಹೊನ್ನಮ್ಮ ಹೊನ್ನಮ್ಮ ರಾಮ ರಾಮಜ್ಜಿ
ಅಶುವಂತನ ಕಟ್ಟೇಲಿ ರಾಮ ರಾಮಜ್ಜಿ
ದಶವಂತರಾಟವೇ ರಾಮ ರಾಮಜ್ಜಿ
ಒಂದ್ಗಲಿಗಿ ಕಂಡ್ಕಬಪ್ಪೊ ರಾಮ ರಾಮಜ್ಜಿ
ಅವಳಕ್ಕೆಂದೇ ಎದ್ದೀಳು ರಾಮ ರಾಮಜ್ಜಿ
ಮಂಡಿ ಬಾಚಿ ಕಟ್ಟೀಳು ರಾಮ ರಾಮಜ್ಜಿ
ನೊಸಲಿಗ್ಬುಂಡ ಇಟ್ಟೀಳು ರಾಮ ರಾಮಜ್ಜಿ
ಒಪ್ಪುವ ಸೀರಿ ಉಟಗೊಂಡ್ಲು ರಾಮ ರಾಮಜ್ಜಿ
ವೆಂಕಿಯ ಸಂಗಡ ನಡೆದಳು ರಾಮ ರಾಮಜ್ಜಿ
ಒಂದ್ ಗುಡ್ಡಿ ಹತ್ತೀರು ರಾಮ ರಾಮಜ್ಜಿ
ಒಂದ್ ಗುಡ್ಡಿ ಇಳಿದೀರು ರಾಮ ರಾಮಜ್ಜಿ
ಹಸು ಬಾಯ್ರು ಜೋರಾದೋ ರಾಮ ರಾಮಜ್ಜಿ
ಇದ ಏನ ವೆಂಕ್ಯಕ್ಕ ರಾಮ ರಾಮಜ್ಜಿ
ಹಸು ಬಾಯ್ರು ಜೊರಾಯ್ತು ರಾಮ ರಾಮಜ್ಜಿ
ಎಲ್ಲೆಲ್ಲಿ ನೋಡೀರೂ ರಾಮ ರಾಮಜ್ಜಿ
ಆಟದ ಗರ ಇಲ್ಲೆ ರಾಮ ರಾಮಜ್ಜಿ
ಪಟ್ಟಣ ಶೆಟ್ರು ಮನಿಗ್ಹೋಪೊ ರಾಮ ರಾಮಜ್ಜಿ
ಅವ್ರ ಹಸುವಿಗ್ಹಣ್ಣು ಕೊಡತಾರೆ ರಾಮ ರಾಮಜ್ಜಿ
ಬಾಯ್ರಿಗೆ ಹಾಲು ಕೊಡುತ್ತಾರೆ ರಾಮ ರಾಮಜ್ಜಿ
ಕೋಣಿ ಒಳಗೆ ಬಿಟ್ಟೀಳು ರಾಮ ರಾಮಜ್ಜಿ
ಅರ್ಧ ಅಸ್ತಿ ಬರಕೊಟ್ರು ರಾಮ ರಾಮಜ್ಜಿ
ಕೈತುಂಬ ಹೊನ್ನ ಕೊಟ್ರು ರಾಮ ರಾಮಜ್ಜಿ
ದಂಡಿಗ್ಹೋದ ಗಂಡನಿಗೆ ರಾಮ ರಾಮಜ್ಜಿ
ಕೆಟ್ಟ ಕೆಟ್ಟ ಸಪ್ನ ಬಿದ್ದು ರಾಮ ರಾಮಜ್ಜಿ
ಮನಿಗಾರು ಓಡಿ ಬಂದು ರಾಮ ರಾಮಜ್ಜಿ
ತಾಯಮ್ಮ ಅಂಬುವಳು ರಾಮ ರಾಮಜ್ಜಿ
ಪಾದಕೆ ನೀರು ಕೊಟ್ಟಾಳೆ ರಾಮ ರಾಮಜ್ಜಿ
ನಿನ ಸೊಸಿ ಎಲ್ಲೆಗ್ಹೋಳೆ ರಾಮ ರಾಮಜ್ಜಿ
ಎಲ್ಲ ಹೇಳ್ತೇನೆ ಕೇಳ್ ಮಗನೆ ರಾಮ ರಾಮಜ್ಜಿ
ಬಾಯ್ರಿಗಾರೂ ಕುಡಿ ಮಗನೆ ರಾಮ ರಾಮಜ್ಜಿ
ಹಸುವಿಗ್ಹಣ್ಣು ತಿನ್ನು ಮಗನೆ ರಾಮ ರಾಮಜ್ಜಿ ಅವ್ನ
ಬಾಯ್ರಿಗ್ಹಾಲು ಕುಡಿಲಿಲ್ಲ ರಾಮ ರಾಮಜ್ಜಿ
ಹಸುವಿಗ್ಹಣ್ಣು ತಿನಲಿಲ್ಲ ರಾಮ ರಾಮಜ್ಜಿ
ಹೊನ್ನಮ್ಮ ಎಲ್ಲಿ ಹೇಳೀಗ ರಾಮ ರಾಮಜ್ಜಿ
ಹೊನ್ನಮ್ನ ಗಂಡ ಅಂಬೋನು ರಾಮ ರಾಮಜ್ಜಿ

ಜೋಗ್ಯಾರ ವೇಷ ತೊಟ್ಟಿದ್ ರಾಮ ರಾಮಜ್ಜಿ
ಬಳಿ ಮಲ್ಲರ ಕೇರಿಗೆ ಹೋದಾನೆ ರಾಮ ರಾಮಜ್ಜಿ
ಬಳಿ ಎಲ್ಲ ತಕ್ಕಂಡ್ ರಾಮ ರಾಮಜ್ಜಿ
ಹೆಗಲ ಮೇಲೆ ಹೇರ್ಕಂಡ ರಾಮ ರಾಮಜ್ಜಿ
ಹಸಗಾರ ವೆಂಕಿ ಮನಿಗ್ಹೋದ ರಾಮ ರಾಮಜ್ಜಿ
ಯಾರಮ್ಮ ಮನೆಯಲ್ಲಿ ರಾಮ ರಾಮಜ್ಜಿ
ಯಾರಮ್ಮ ಮಠದಲ್ಲಿ ರಾಮ ರಾಮಜ್ಜಿ
ಬಳಿಯಾರು ಇಡತೀಯ ರಾಮ ರಾಮಜ್ಜಿ
ನಾ ಬಳಿ ಇಡುದಿಲ್ಲ ರಾಮ ರಾಮಜ್ಜಿ
ಪಟ್ಟಣ ಶೆಟ್ಟಿ ಮನೆಯಲ್ಲಿ ರಾಮ ರಾಮಜ್ಜಿ
ಮೊನ್ನೊಂದ್ಹೇಣ್ಣಿನ ತಂದೀರು  ರಾಮ ರಾಮಜ್ಜಿ
ಅವ್ರ ಮನಿಗೆ ಹೋಗಂದ್ಲು ರಾಮ ರಾಮಜ್ಜಿ
ಅವ್ರ ಮನಿಗೆ ನಡೆದಾನೆ ರಾಮ ರಾಮಜ್ಜಿ
ಯಾರಮ್ಮ ಮನೆಯಲ್ಲಿ ರಾಮ ರಾಮಜ್ಜಿ
ಯಾರಮ್ಮ ಮಠದಲ್ಲಿ ರಾಮ ರಾಮಜ್ಜಿ
ಬಳಿಯಾರು ಇಡ್ತೀಯ ರಾಮ ರಾಮಜ್ಜಿ
ಬಳಿಯಾರು ಇಡತಿದ್ದೆ ರಾಮ ರಾಮಜ್ಜಿ
ಪಟ್ಟಣ ಶೆಟ್ರು ಮನೆಯಲಿಲ್ಲ ರಾಮ ರಾಮಜ್ಜಿ
ದುಡ್ಡಾರು ಕೊಡು ಅಂದ ರಾಮ ರಾಮಜ್ಜಿ
ಬಳಿಯನ್ನೆ ಇಡ್ತೇನೆಂದ ರಾಮ ರಾಮಜ್ಜಿ
ಬಳಿ ಇಡೂಕೆ ಬಂದು ಕೂತ್ಲ ರಾಮ ರಾಮಜ್ಜಿ
ಒಂದ ಬಳಿಯ ಇಡುವಾನೆ ರಾಮ ರಾಮಜ್ಜಿ
ಹಲೆಲ್ಲ ಜೈಕಂತ ರಾಮ ರಾಮಜ್ಜಿ
ಹಲ್ಲೆಲ್ಲ ರಾಣ ಬಾಣೋ ರಾಮ ರಾಮಜ್ಜಿ
ಹೇ ಸುಟ್ಟ ಜೊಗಿಯೇ ರಾಮ ರಾಮಜ್ಜಿ
ನನ ಕೈಯಾರು ಬಿಡು ಜೋಗಿ ರಾಮ ರಾಮಜ್ಜಿ
ಕಣ್ಯಾಕೆ ಬಿಡ್ತೆ ಜೋಗಿ ರಾಮ ರಾಮಜ್ಜಿ
ಬಳಿಯಾನು ಇಟ್ಟಿದ ರಾಮ ರಾಮಜ್ಜಿ
ನಾ ಇಲ್ಲೆ ಉಳಿತೆ ಎಂದ ರಾಮ ರಾಮಜ್ಜಿ
ಮಲ್ಗೂಕೆ ಹಾಸ್ಗಿ ಇಲ್ಲೆ ರಾಮ ರಾಮಜ್ಜಿ
ಗೋಣಿ ಚಂಪಿ ಕೊಡಿ ಎಂದ ರಾಮ ರಾಮಜ್ಜಿ
ಕೊಟ್ಗೇಲಾರೂ ಮಲಗ್ತೆ ಎಂದ ರಾಮ ರಾಮಜ್ಜಿ
ಮಧ್ಯರಾತ್ರಿ ಗಂಟಿ ಬಿಟ್ಹಾಕ್ದ ರಾಮ ರಾಮಜ್ಜಿ
ಪಟ್ಟಣ ಶೆಟ್ರೆ ಪಟ್ಟಣ ಶೆಟ್ರ ರಾಮ ರಾಮಜ್ಜಿ
ಗಂಟಿ ಎಲ್ಲ ಬಿಡಿಸ್ಕಂಡ್ ಹೋದೋ ರಾಮ ರಾಮಜ್ಜಿ
ಶೆಟ್ರ ಗಂಟಿ ಬೆನ್ನಿಗ್ಹೋದ್ರು ರಾಮ ರಾಮಜ್ಜಿ

ಮೆತ್ತಿನ ಮೇಲೆ ಓಡಿ ಬಂದ ರಾಮ ರಾಮಜ್ಜಿ
ಹೊನ್ನಮ್ಮ ಹೊನ್ನಮ್ಮ ರಾಮ ರಾಮಜ್ಜಿ
ಪಟ್ಟಣ ಶೆಟ್ರು ಸಾಕಾ ಕೆಂಡ ರಾಮ ರಾಮಜ್ಜಿ
ದಂಡಿನ ಕತ್ತಿ ಗೆಗೆದೀದ ರಾಮ ರಾಮಜ್ಜಿ
ಮೂರು ರುಂಡ ಹೊಡೆದೀದ ರಾಮ ರಾಮಜ್ಜಿ
ಮೂರು ಬಾಗ್ಲೀಗೆ ನಿಲ್ಸಿದ ರಾಮ ರಾಮಜ್ಜಿ
ಪಟ್ಟಣ ಶೆಟ್ರು ಬಂದರೆ ರಾಮ ರಾಮಜ್ಜಿ
ಶೆಟ್ರನ್ನೂ ಕಡ್ಡ ಹಾಕ್ದ ರಾಮ ರಾಮಜ್ಜಿ
ಹಸಗಾರೆಂಕಿ ಮನಿಗೆ ಬಂದ ರಾಮ ರಾಮಜ್ಜಿ
ಹಸಗಾರೆಂಕಿ ಕೇಳುತ್ತಿದ್ದ ರಾಮ ರಾಮಜ್ಜಿ
ನಿನಗರ್ಧ ಆಸ್ತಿ ಸಾಕ ಬೇಕ ರಾಮ ರಾಮಜ್ಜಿ
ಮುಷ್ಟಿ ತುಂಬು ಹೊನ್ನಬೇಕ ರಾಮ ರಾಮಜ್ಜಿ
ಬೆಂಕಿ ಕಡ್ಡಿ ಕೀರಿ ಕೊಟ್ಟ ರಾಮ ರಾಮಜ್ಜಿ

## ಆರಂಭ ಅಡವೀಲೆ

ಆರಂಬ ಅಡವೀಲಿ ನೀರೆಲೆ ಶಿವನೆ ಏ ಗಿಣಿ ಏ ಗಿಣಿಯೇ
ನೀರಿಗೆ ಹೋಪುಕೆ ಮಾವಯ್ಯ ಬನ್ನಿ ಏ ಗಿಣಿ ಏ ಗಿಣಿಯೇ
ಮಾವಯ್ಯ ಅಂಬಾಕೆ ಹೆಣ್ಣೆ ನೀನು ಏ ಗಿಣಿ ಏ ಗಿಣಿಯೇ
ನಿನ ಗಂಡನ ಅಪ್ಪ ನಾನೇನಲ್ಲ ಏ ಗಿಣಿ ಏ ಗಿಣಿಯೇ
ಕಣ್ಣಲಿ ನೀರ ಸೆಡಿದಳಲೆ  ಏ ಗಿಣಿ ಏ ಗಿಣಿಯೇ
ಆರಂಭ ಅಡವೀಲೆ ನೀರಿಲೆ ಶಿವನೆ ಏ ಗಿಣಿ ಏ ಗಿಣಿಯೇ
ನೀರಿಗೆ ಹೋಪುಕೆ ಅತ್ತೆ ಬನ್ನಿ ಏ ಗಿಣಿ ಏ ಗಿಣಿಯೇ
ಅತ್ತಿ ಎಂಬಾಕೆ ಹೆಣ್ಣೆ ನೀನು ಏ ಗಿಣಿ ಏ ಗಿಣಿಯೇ
ನಿನ ಗಂಡನ ಅಮ್ಮ ನಾನೇನಲ್ಲ ಏ ಗಿಣಿ ಏ ಗಿಣಿಯೇ
ಆರಂಭ ಅಡವೀಲೆ ನೀರೆಲೆ  ಶಿವನೆ ಏ ಗಿಣಿ ಏ ಗಿಣಿಯೇ
ನೀರಿಗೆ ಹೋಪುಕೆ ಅತ್ತಿಗೆ ಬನ್ನಿ ಏ ಗಿಣಿ ಏ ಗಿಣಿಯೇ
ನಿನ ಗಂಡನ ತಂಗಿ ನಾನೇನಲ್ಲ ಏ ಗಿಣಿ ಏ ಗಿಣಿಯೇ
ಕಣ್ಣಲ್ಲಿ ನೀರ ಸೆಡಿದಾಳಲ್ಲೆ  ಏ ಗಿಣಿ ಏ ಗಿಣಿಯೇ
ಮಾರಗು ಕುಡಿ ನಡೆದಳಲೆ ಏ ಗಿಣಿ ಏ ಗಿಣಿಯೇ
ಆರಂಬ ಅಡವೀಗೆ ಹೋದಾಳಲೆ ಏ ಗಿಣಿ ಏ ಗಿಣಿಯೇ
ಕೊಡ ತುಂಬ ನೀರನ್ನ ತುಂಬಿ ಏ ಗಿಣಿ ಏ ಗಿಣಿಯೇ
ಅತ್ತೂ ಇತ್ತೂ ನೋಡಿದಳೆ  ಏ ಗಿಣಿ ಏ ಗಿಣಿಯೇ
ಕೊಡನ ನೆಗುಕೆ ಯಾರೂ ಇಲ್ಲ ಏ ಗಿಣಿ ಏ ಗಿಣಿಯೇ
ಗಂಡನ ತಮ್ಮ ಮೈದಿನಣ್ಣ ಏ ಗಿಣಿ ಏ ಗಿಣಿಯೇ
ಗೋಗಂಟಿ ಬಿಟ್ಟೆ ಕಾಯ್ತಾ ಇದ್ರು ಏ ಗಿಣಿ ಏ ಗಿಣಿಯೇ

ಗಂಡನ ತಮ್ಮ ಮೈದಿನಣ್ಣ ಏ ಗಿಣಿ ಏ ಗಿಣಿಯೇ
ತುಂಬಿದ ಕೊಡನ ನೆಗಿಯ ಬನ್ನಿ ಏ ಗಿಣಿ ಏ ಗಿಣಿಯೇ
ಕೊಡನ ನಾನೆಗಿದರೆ ಏ ಗಿಣಿ ಏ ಗಿಣಿಯೇ
ನನಗೇನು ಕೊಡುತೀಯೆ ಏ ಗಿಣಿ ಏ ಗಿಣಿಯೇ
ಅರ್ಧ ಆಸ್ತಿ ಬರೆದು ಕೊಡ್ತೆ ಏ ಗಿಣಿ ಏ ಗಿಣಿಯೇ
ಅರ್ಧ ಅಸ್ತಿ ಬೇಡ ನನಗೆ ಏ ಗಿಣಿ ಏ ಗಿಣಿಯೇ
ನಾನ್ಹೇಳಿದ ಮಾತಿಗೊಲಿಯಬೇಕು ಏ ಗಿಣಿ ಏ ಗಿಣಿಯೇ
ಹಿರಿಯ ಅಣ್ಣನ ಮಡದಿ ಕಾಣಿ ಏ ಗಿಣಿ ಏ ಗಿಣಿಯೇ
ಹೆತ್ತ ತಾಯಿಗೆ ಸರಿಯು ಕಾಣಿ ಏ ಗಿಣಿ ಏ ಗಿಣಿಯೇ
ಪತಿವ್ರತಿ ಸರವ ಕೆಡಸಲು ಬೇಡಿ
ನನ್ನ ತಂಗಿ ಪಾರ್ವತಿಯನ್ನು ಏ ಗಿಣಿ ಏ ಗಿಣಿಯೇ
ಧರ್ಮಕೆ ದಾರಿ ಎರೆದು ಕೊಡ್ತೆ ಏ ಗಿಣಿ ಏ ಗಿಣಿಯೇ
ಧರ್ಮಕೆ ಪಾರ್ವತಿ ಬ್ಯಾಡ ನನಗೆ ಏ ಗಿಣಿ ಏ ಗಿಣಿಯೇ
ನಾನ್ಹೇಳಿದ ಮಾತಿಗೆ ಒಲಿಯಬೇಕು ಏ ಗಿಣಿ ಏ ಗಿಣಿಯೇ
ನೂರೊಂದು ಗೋ ಗಂಟೆ ಏ ಗಿಣಿ ಏ ಗಿಣಿಯೇ
ಕೊಟ್ಟಿಗೆಲ್ಯಾರು ಕೂಡಿಕೆ ಏ ಗಿಣಿ ಏ ಗಿಣಿಯೇ
ಸಂಜಿಯ ಕಾಲದಲಿ ಏ ಗಿಣಿ ಏ ಗಿಣಿಯೇ
ಮೆತ್ತಿನ ಮೇಲೆ ಬನ್ನಿ ಎಂದ್ಲು  ಏ ಗಿಣಿ ಏ ಗಿಣಿಯೇ
ತುಂಬಿದ ಕೊಡವ ನಗೆ ಗಹಿ ಕೊಟ್ಟ ಏ ಗಿಣಿ ಏ ಗಿಣಿಯೇ
ಕಣ್ಣಲಿ ನೀರ ಸೆಡಿದಾಳಲ್ಲೆ ಏ ಗಿಣಿ ಏ ಗಿಣಿಯೇ
ನೀರಿನ ಕೊಡವ ಹೊತ್ತುಕೊಂಡು ಏ ಗಿಣಿ ಏ ಗಿಣಿಯೇ
ಕೇಳಿಗೆ ನೀರು ತುಂಬಿದಾಳೆ ಏ ಗಿಣಿ ಏ ಗಿಣಿಯೇ
ಮೆತ್ತಿನ ಮೇಲೆ ನಡೆದಾಳೆ ಏ ಗಿಣಿ ಏ ಗಿಣಿಯೇ
ಗಂಡನಪೋಟೋ ತೆಗೆದಾಳೆ ಏ ಗಿಣಿ ಏ ಗಿಣಿಯೇ
ಕಣ್ಣಲ್ಲಿ ನೀರು ಸೆದಾಳಲ್ಲೆ ಏ ಗಿಣಿ ಏ ಗಿಣಿಯೇ
ಮರಕ್ತೆ ನಿದ್ರೆ ಬಂದೀತಲೆ ಏ ಗಿಣಿ ಏ ಗಿಣಿಯೇ
ಮೈದುನಣ್ಣ ಅಂಬುವನು ಏ ಗಿಣಿ ಏ ಗಿಣಿಯೇ
ನೂರೊಂದ್ ಗೋ ಗಂಟೆ ಏ ಗಿಣಿ ಏ ಗಿಣಿಯೇ
ಕೊಟ್ಟಿಗೆಯಲ್ಲಾರೂ ಕೂಡಿ ಬಂದು ಏ ಗಿಣಿ ಏ ಗಿಣಿಯೇ
ಮೆತ್ತಿನ ಮೇಲೆ ಓಡಿ ಬಂದ ಏ ಗಿಣಿ ಏ ಗಿಣಿಯೇ
ಬಾಗಿಲ ಕದವ ತೆಗಿಯೇ ಅಂದ ಏ ಗಿಣಿ ಏ ಗಿಣಿಯೇ
ದಂಡಿಗೆ ಹೋದ ಗಂಡನೀಗೆ ಏ ಗಿಣಿ ಏ ಗಿಣಿಯೇ
ಕೆಟ್ಟ ಕೆಟ್ಟ ಸಪ್ನವು ಬಿದ್ದು ಏ ಗಿಣಿ ಏ ಗಿಣಿಯೇ
ಮೂರು ದಿನದ ದಾರಿ ಅಂಬ್ರು ಏ ಗಿಣಿ ಏ ಗಿಣಿಯೇ
ಅರ್ಧ ಗಳಿಗಿಗೆ ಜಡ ಬಂದು ಏ ಗಿಣಿ ಏ ಗಿಣಿಯೇ
ಮತ್ತಿನ ಮೇಲೆ ನಡೆದನಲೆ ಏ ಗಿಣಿ ಏ ಗಿಣಿಯೇ

ಬಾಗಿಲಾರು ತೆಗಿಯೇ ಹೆಣ್ಣೆ ಏ ಗಿಣಿ ಏ ಗಿಣಿಯೇ
ಹಿರಿಯ ಅಣ್ಣನ ಮಡದಿ ಕಾಣಿ ಏ ಗಿಣಿ ಏ ಗಿಣಿಯೇ
ಹೆತ್ತ ತಾಯಿಗೆ ಸೆರಿಯೇ ಕಾಣಿ ಏ ಗಿಣಿ ಏ ಗಿಣಿಯೇ
ಪತಿವ್ರತಿ ಸರ ಕೆಡಿಸಲು ಬೇಡಿ ಏ ಗಿಣಿ ಏ ಗಿಣಿಯೇ
ನನ್ನ ತಂಗಿ ಪಾರ್ವತಿ ಏ ಗಿಣಿ ಏ ಗಿಣಿಯೇ
ಧರ್ಮಕೆ ಧಾರೆ ರೆದು ಕೊಡ್ತೆ ಏ ಗಿಣಿ ಏ ಗಿಣಿಯೇ
ಮೈದಿನಣ್ಣ ಅಲ್ಲ ಹೆಣ್ಣೆದ ಏ ಗಿಣಿ ಏ ಗಿಣಿಯೇ
ಬಾಗಿಲಾರೂ ತೆಗಿಯೆ ಹೆಣ್ಣೆ
ಆರಂಭ ಅಡವೀಲಿ ನೀರೆಲೆ ಶಿವನೆ ಏ ಗಿಣಿ ಏ ಗಿಣಿಯೇ
ನೀರಿಗೆ ಹೋಪುಗೆ ಮಾವಯ್ಯ ಬನ್ನಿ ಏ ಗಿಣಿ ಏ ಗಿಣಿಯೇ
ನಿನ ಗಂಡನ ಅಪ್ಪ ನಾನೇನಲ್ಲ ಏ ಗಿಣಿ ಏ ಗಿಣಿಯೇ
ನೀರಿಗೆ ಹೋಪುಕೆ ಅತ್ತೆ ಬನ್ನಿ ಏ ಗಿಣಿ ಏ ಗಿಣಿಯೇ
ನಿನ ಗಂಡನ ಅಮ್ಮ ನಾನೇನಲ್ಲ ಏ ಗಿಣಿ ಏ ಗಿಣಿಯೇ
ನೀರಿಗೆ ಹೋಪುಕೆ ಅತ್ತಿಗೆ ಬನ್ನಿ ಏ ಗಿಣಿ ಏ ಗಿಣಿಯೇ
ನಿನ ಗಂಡನ ತಂಗಿ ನಾನೇನಲ್ಲ ಏ ಗಿಣಿ ಏ ಗಿಣಿಯೇ
ತುಂಬಿದ ಕೊಡಪಾನ ನೆಗೆಯೂಕೆ ಬಾರ ಏ ಗಿಣಿ ಏ ಗಿಣಿಯೇ
ನಿಮ್ಮ ತಮ್ಮ ಮೈದಿನಣ್ಣ ಏ ಗಿಣಿ ಏ ಗಿಣಿಯೇ
ಗೊ ಗಂಟೆ  ಬಿಟ್ಕಂಡ್ ಮೇಸ್ತ್ರಾ ಇದ್ರ ಏ ಗಿಣಿ ಏ ಗಿಣಿಯೇ
ತುಂಬಿದ ಕೊಎನೆ ನೆಗಿಯಾಕಿದ್ರೆ ಏ ಗಿಣಿ ಏ ಗಿಣಿಯೇ
ನನಗೇನು ಕೊಡುತೀಯೆ ಏ ಗಿಣಿ ಏ ಗಿಣಿಯೇ
ಧರ್ಮದ ಪಾರ್ವತಿ ಬೇಡ ನನಗೆ ಏ ಗಿಣಿ ಏ ಗಿಣಿಯೇ
ನಾನ್ಹೇಳಿದ ಮಾತಿಗೊಲಿಯ ಬೇಕು ಏ ಗಿಣಿ ಏ ಗಿಣಿಯೇ
ಕಣ್ಣಲ್ಲಿ ನೀರ ಸೆಡಿದಾಳಲೇ ಏ ಗಿಣಿ ಏ ಗಿಣಿಯೇ
ದಂಡಿನ ಕತ್ತಿ ತೆಗೆದನೆ ಏ ಗಿಣಿ ಏ ಗಿಣಿಯೇ
ಅಪ್ಪನ ಕ್ವಾಣಿಗೆ ನಡೆದನಲೆ ಏ ಗಿಣಿ ಏ ಗಿಣಿಯೇ
ದಂಡಿಗೆ ಹೋದ ಮಗನೇ ನೀನು ಏ ಗಿಣಿ ಏ ಗಿಣಿಯೇ
ಎಷ್ಟು ಹೊತ್ತಿಗೆ ಬಂದೀಯ ನೀನು ಏ ಗಿಣಿ ಏ ಗಿಣಿಯೇ
ಸಾಕಿರಿ ಸಲುಹಿರಿ ಅಪ್ಪ ನೀವು ಏ ಗಿಣಿ ಏ ಗಿಣಿಯೇ
ನನ್ನ ಅಪ್ಪ ನೀವು ಅಲ್ಲವೇನು ಏ ಗಿಣಿ ಏ ಗಿಣಿಯೇ
ಮೂರು ಗುಂಡ ಹೊಡದನಲೆ ಏ ಗಿಣಿ ಏ ಗಿಣಿಯೇ
ಅಬ್ಬಿಯ ಕ್ವಾಣೆಗೆ ನಡೆದನೆಲೆ ಏ ಗಿಣಿ ಏ ಗಿಣಿಯೇ
ದಂಡಿಗೆ ಹೊದ ಮಗನೆ ನೀನು ಏ ಗಿಣಿ ಏ ಗಿಣಿಯೇ
ನೀನು ಎಷ್ಟೊತ್ತಿಗೆ ಬಂದೆಯ ಏ ಗಿಣಿ ಏ ಗಿಣಿಯೇ
ಹತ್ತು ತಿಂಗಳ ಹೊತ್ತಿದೆ ತಾಯೇ ಏ ಗಿಣಿ ಏ ಗಿಣಿಯೇ
ಹೊತ್ತು ಹೆತ್ತು ಸಾಕಿದ ತಾಯೆ ಏ ಗಿಣಿ ಏ ಗಿಣಿಯೇ
ನನ್ನ ಅಮ್ಮ ಅಲ್ಲವೇನು ಏ ಗಿಣಿ ಏ ಗಿಣಿಯೇ

ಮೂರು ಗುಂಡ ಹೊಡೆದನೆ ಏ ಗಿಣಿ ಏ ಗಿಣಿಯೇ
ಅತ್ತಿಗೆ ಕೋಣೆಗೆ ನಡೆದನಲೆ ಏ ಗಿಣಿ ಏ ಗಿಣಿಯೇ
ದಂಡಿಗೆ ಹೋದ ತಮ್ಮ ನೀನು ಏ ಗಿಣಿ ಏ ಗಿಣಿಯೇ
ಎಷ್ಟೊತ್ತಿಗಾರು ಬಂದೇ ನೀನು ಏ ಗಿಣಿ ಏ ಗಿಣಿಯೇ
ನನ್ನ ಅಕ್ಕ ನೀನು ಅಲ್ಲವೇನು ಏ ಗಿಣಿ ಏ ಗಿಣಿಯೇ
ಮೂರು ಗುಂಡು ಹೊಡೆದನಲ್ಲೆ  ಏ ಗಿಣಿ ಏ ಗಿಣಿಯೇ
ತಮ್ಮನ ಕ್ವಾಣೆಗೆ ನಡೆದನಲ್ಲೆ ಏ ಗಿಣಿ ಏ ಗಿಣಿಯೇ
ದಂಡಿಗ್ಹೋದಣ್ಣಯ್ಯ  ಏ ಗಿಣಿ ಏ ಗಿಣಿಯೇ
ನೀ ಎಷ್ಟೊತ್ತಿಗಾರು ಬಂದೀದೆ ಏ ಗಿಣಿ ಏ ಗಿಣಿಯೇ
ದಂಡೀನ ಕತ್ತಿ ನೆಗಿದಾನಲೆ ಏ ಗಿಣಿ ಏ ಗಿಣಿಯೇ
ನನ್ನ ಕಡುವದಿದ್ರೂ ಕಡಿಲಕ್ಕಣ್ಣ ಏ ಗಿಣಿ ಏ ಗಿಣಿಯೇ
ನನ್ನ ಮೂರು ಮಾತು ಆಡ್ತೇನೆಂದ ಏ ಗಿಣಿ ಏ ಗಿಣಿಯೇ
ನೀನು ದಂಡಿಗ್ ಹೋಯಿ ಆರೇಳು ತಿಂಗ್ಳ ಏ ಗಿಣಿ ಏ ಗಿಣಿಯೇ
ನಿನ್ ಮಡದಿ ಗುಟ್ಟ ತಿಳೀಕಂದ ಏ ಗಿಣಿ ಏ ಗಿಣಿಯೇ
ಅಷ್ಟೊಂದು ಮಾತ ಕೇಂಡನೆ ಅಣ್ಣ ಏ ಗಿಣಿ ಏ ಗಿಣಿಯೇ
ಕಿರಿಯ ತಂಗಿ ಪಾರ್ವತಿಯನ್ನು ಏ ಗಿಣಿ ಏ ಗಿಣಿಯೇ
ಧರ್ಮಕ್ಕೆ ದಾರಿ ಎರ್ದೇ ಕೊಟ್ಟ ಏ ಗಿಣಿ ಏ ಗಿಣಿಯೇ

***